# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: **Ph:** 2431774, ಡಿ.ದೇವರಾಜ ಅರಸು ರಸ್ತೆ, **Ph:** 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಏಪ್ರಿಲ್ 24 ಸೋಮವಾರ 2023

ಸಂಪುಟ: 44 | ಸಂಚಿಕೆ: 9 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com

₹4

ಜಾಹೀರಾತು: ad@mysurumithra.com



ಮೈಸೂರಿನ ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ ಅವರು ಭಾನುವಾರ ಆದಿಚುಂಚನಗಿರಿ ಮೈಸೂರು ಶಾಖಾ ಮಠಕ್ಕೆ ಭೇಟಿ ನೀಡಿ, ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು.

# ಗುಡುಗಿ ಗುಡುಗಿ ಅಧಿಕಾರ ಕಳೆದುಕೊಂಡ ಸಿದ್ದರಾಮಯ್ಯ

## ಚಾಮರಾಜನಗರ ಸಂಸದ ಶ್ರೀನಿವಾಸ್ ಪ್ರಸಾದ್ ಕುಟುಕು

ಮೈಸೂರು, ಏ.23(ಎಂಕೆ)– ಸಿದ್ದರಾಮಯ್ಯ ಗಡುಗಿ ಗುಡುಗಿ ಅಧಿಕಾರ ಕಳೆದುಕೊಂಡಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ರಾಹುಲ್ ಗಾಂಧಿಯವರನ್ನು ಕೂರಿಸಿಕೊಂಡು ಗುಡುಗಿದ ಅವರು, 28ರಲ್ಲಿ ಒಂದು ಕ್ಷೇತ್ರದಲ್ಲಿ ಮಾತ್ರ ಗೆಲ್ಲಲು ಸಾಧ್ಯವಾಯಿತು. ಉಳಿದ 27 ಲೋಕಸಭಾ ಕ್ಷೇತ್ರಗಳು ಅವರ ಪಾಲಿಗೆ ನೆಗೆದುಬಿದ್ದು ಹೋದವು ಎಂದು ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಕುಟುಕಿದರು.

ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ತಮ್ಮ ನಿವಾಸದಲ್ಲಿ ಭಾನುವಾರ ಸುದ್ದಿಗೋಷ್ಠಿ ನಡೆಸಿದ ಅವರು, ಸಿದ್ದರಾಮಯ್ಯ ಗುಡುಗುವುದು ಹೊಸದೇನಲ್ಲ. 36 ವರ್ಷಗಳಿಂದ ಗುಡುಗಿ ಗುಡುಗಿ ಅಧಿಕಾರ ಕಳೆದುಕೊಂಡಿದ್ದಾರೆ. ಬಾದಾಮಿ ಕ್ಷೇತ್ರದಲ್ಲಿ ಗೆಲ್ಲದೇ ಇದ್ದಿದ್ದರೇ ಅವರ ಸ್ಥಿತಿ ಬೇರೆಯೇ ಆಗುತ್ತಿತ್ತು ಎಂದು ವ್ಯಂಗ್ಯವಾಡಿದರು.

ವರುಣದಲ್ಲಿ ಬಿಜೆಪಿ–ಜೆಡಿಎಸ್ ಒಳ ಒಪ್ಪಂದವಾಗಿದೆ ಎನ್ನಲಾಗಿದೆ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ವಿ.ಶ್ರೀನಿವಾಸ್ ಪ್ರಸಾದ್, ಯಾವ ಒಳ ಒಪ್ಪಂದವೂ ಇಲ್ಲ. ಹೋರಾಟವಷ್ಟೇ ನಡೆಯುತ್ತಿದೆ. ಸೋಮಣ್ಣ ಕ್ಷೇತ್ರಕ್ಕೆ ಹೊಸಬರಾಗಿರುವುದರಿಂದ ಸಹಜವಾಗಿ ಜನರು ಪ್ರಶ್ನಿಸುತ್ತಾರೆ. ಸೋಮಣ್ಣ ಹೋದಕಡೆಯಲ್ಲಾ ಮುತ್ತಿಗೆ ಹಾಕುತ್ತಿದ್ದಾರೆ ಎಂದು ಮಾಧ್ಯಮಗಳು ಬಿಂಬಿಸುತ್ತಿವೆ. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಮತದಾರರನ್ನು ಸಮಾಧಾನಪಡಿಸಲು ಸಾಧ್ಯವಿಲ್ಲ. ಪ್ರಧಾನಿಗಳೇ ಬಂದರೂ ಮತದಾರರು ಕೇಳುವುದು ಸಹಜ ಎಂದರು.

**ನಾನು ಪ್ರಚಾರಕ್ಕೆ ಹೋಗುತ್ತೇನೆ:** ಲೋಕಸಭಾ ಸದಸ್ಯನಾಗಿ ನಾನು ಕೂಡ ಪ್ರಚಾರಕ್ಕೆ ಹೋಗುತ್ತೇನೆ. ಕುಪ್ಯ ಗ್ರಾಮ ನನಗೂ ಗೊತ್ತಿದೆ. ನಾನೆಷ್ಟು ಅಭಿವೃದ್ಧಿ ಮಾಡಿದ್ದೇನೆ ಎಂಬುದು ತಿಳಿದಿದೆ. ನನ್ನ ಲೋಕಸಭಾ ವ್ಯಾಪ್ತಿಯಲ್ಲಿ 8 ವಿಧಾನಸಭಾ ಕ್ಷೇತ್ರಗಳು ಬರಲಿದ್ದು, ಎರಡೂರು



ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಮತಯಾಚಿಸುತ್ತೇನೆ. ಚುನಾವಣೆಯಲ್ಲಿ ಸ್ಪರ್ಧಿಸುವ ಎಲ್ಲರೂ ಗೆಲ್ಲುತ್ತೇವೆ ಎಂದು ಹೇಳುತ್ತಾರೆಯೇ ಹೊರತು ಸೋಲುತ್ತೇವೆ ಎನ್ನುವುದಿಲ್ಲ. ಸೋಮಣ್ಣ ಹೊರಗಿನರಾದರೆ, ಬಾದಾಮಿಗೆ ಹೋಗಿ ಗೆದ್ದ ಸಿದ್ದರಾಮಯ್ಯ ಹೊರಗಿನರಲ್ಲವಾ? ಎಂದು ಪ್ರಶ್ನಿಸಿದರಲ್ಲದೆ ಚುನಾವಣೆಯಲ್ಲಿ ಯಾರು ಗೆಲ್ಲಬೇಕು ಎಂಬುದನ್ನು ಜನರು ನಿರ್ಧಾರ ಮಾಡುತ್ತಾರೆ ಎಂದರು.

**ಫಲಿತಾಂಶದ ನಂತರ ಸಿಎಂ ಆಯ್ಕೆ:** ಲಿಂಗಾಯಿತ ಅಥವಾ ದಲಿತ ಸಿಎಂ ಎಂಬುದು ಚುನಾವಣಾ ಫಲಿತಾಂಶ ಬಂದ ನಂತರದ ನಿರ್ಧಾರವಾಗಿದ್ದು, ಪಕ್ಷದ ವರಿಷ್ಠರು ಸಿಎಂ ಯಾರಾಗಬೇಕು ಎಂಬ ತೀರ್ಮಾನ ತೆಗೆದುಕೊಳ್ಳುತ್ತಾರೆ. ಈ ಕುರಿತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಜೆ.ಪಿ.ನಡ್ಡಾ ಅವರೇ ಸ್ಪಷ್ಟನೆ ಕೊಟ್ಟಿದ್ದಾರೆ. ಅದರಂತೆ ಅಮಿತ್ ಶಾ ಕೂಡ ಇಂತಹ ಜಾತಿ–ಜನಾಂಗದವರನ್ನು ಸಿಎಂ ಮಾಡುತ್ತೇವೆ ಎಂದು ಹೇಳಬೇಡಿ ಎಂದು ಸೂಚನೆ ನೀಡಿದ್ದಾರೆ ಎಂದರಲ್ಲದೆ, ಸಿದ್ದರಾಮಯ್ಯ ಅವರ ಲಿಂಗಾಯಿತ ಭ್ರಷ್ಟ ಸಿಎಂ ವಿಚಾರಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದು, ಇದರ ಬಗ್ಗೆ ಚರ್ಚೆ ಅಗತ್ಯವಿಲ್ಲ. ಮಲ್ಲಿಕಾರ್ಜುನ ಖರ್ಗೆ ಕೂಡ ನಾನು ಸಿಎಂ ಅಭ್ಯರ್ಥಿಯಲ್ಲ ಎಂದು ಸ್ಪಷ್ಟಪಡಿಸಿದ್ದಾರೆ ಎಂದರು.

ಹಾಗೆಯೇ ಚಾಮರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ಜಯಪ್ರಕಾಶ್(ಜೆಪಿ) ಬಿಜೆಪಿಯಲ್ಲೇ ಇರಲಿದ್ದು, ಮುಂದಿನ ದಿನಗಳಲ್ಲಿ ಅವರಿಗೆ ಸೂಕ್ತ ಸ್ಥಾನ–ಮಾನ ನೀಡುವಂತೆ ಪಕ್ಷದ ವರಿಷ್ಠರ ಬಳಿ ಮಾತನಾಡುತ್ತೇನೆ ಎಂದರು. ಬಿಜೆಪಿ ಮುಖಂಡರಾದ ಚೇತನ್ ರಮೇಶ್, ಮಂಜುಳ, ಅನಿಲ್‌ಕುಮಾರ್, ಪುರುಷೋತ್ತಮ್, ಹನುಮಂತೇಗೌಡ, ರಘು, ಪುನೀತ್ ಕುಮಾರ್, ಮಂಜು, ಮಹೇಶ್(ಸಾಬು) ಗೋಕುಲಂ ಪ್ರದೀಪ್, ವಿಜಿಯಾಂಬ, ಆರ್.ಮಂಜುನಾಥ್, ಯಶೋಧ, ನಿಶಾಂತ್‌ರೆಡ್ಡಿ, ನಾಗರಾಜ್ ಮತ್ತಿತರರಿದ್ದರು.

### ನಂಜನಗೂಡಿನಲ್ಲಿ ಗೆಲ್ಲುತ್ತೇವೆ

"ಈ ಬಾರಿ ಮತ್ತೆ ನಂಜನಗೂಡಿನಲ್ಲಿ ಗೆಲ್ಲುತ್ತೇವೆ. ಹರ್ಷ ಸುಮಾರು 500 ಕೋಟಿ ರೂ. ಅನುದಾನ ತಂದು ಅಭಿವೃದ್ಧಿ ಮಾಡಿದ್ದಾನೆ. ಧ್ರುವನಾರಾಯಣ್ ಇದ್ದಾಗಲೂ 10 ಸಾವಿರ ಮತಗಳ ಲೀಡ್‌ನಿಂದ ಹರ್ಷ ಗೆದ್ದಿಲ್ಲವೆ ಎಂದರು. ಧ್ರುವನಾರಾಯಣ ನಿಧನಕ್ಕೆ ನಾನು ಸಂತಾಪ ಸೂಚಿಸಿದ್ದೇನೆ. ಅವರ ಸಾವಿನ ಬಗ್ಗೆ ನಮಗೂ ನಿಮಗೂ ಎಲ್ಲರಿಗೂ ಅನುಕಂಪವಿದೆ. ಅನುಕಂಪದ ಅಲೆಯಲ್ಲಿ ಮತದಾರರು ಧ್ರುವನಾರಾಯಣ ಅವರ ಪುತ್ರನನ್ನು ಗೆಲ್ಲಿಸುತ್ತಾರೆ ಎಂಬುದು ಬಾಲಿಶವಾದಂತಹ ಹೇಳಿಕೆ. ಹಾಗಾದರೆ 5 ವರ್ಷ ಮಾಡಿದಂತಹ ಅಭಿವೃದ್ಧಿ ಕೆಲಸ ಲೆಕ್ಕಕ್ಕೆ ಬರೋದಿಲ್ಲವಾ.?. **–ವಿ.ಶ್ರೀನಿವಾಸಪ್ರಸಾದ್, ಸಂಸದ**

# ಬಂಡವಾಳಶಾಹಿಗಳ ನಿಯಂತ್ರಣದಲ್ಲಿ ಇಡೀ ದೇಶದ ಆಡಳಿತ ವ್ಯವಸ್ಥೆ

- **ಎಸ್‌ಯುಸಿಐ (ಸಿ) ಕೇಂದ್ರ ಪಾಲಿಟ್ ಬ್ಯೂರೋ ಸದಸ್ಯ ಕೆ.ರಾಧಾಕೃಷ್ಣ**
- **ಪಕ್ಷದ ಸಂಸ್ಥಾಪನಾ ದಿನಾಚರಣೆ ಪ್ರಯುಕ್ತ ರಾಜಕೀಯ ಸಮಾವೇಶ**




ಮೈಸೂರು, ಏ.23(ಪಿಎಂ)– ಇಡೀ ದೇಶದ ಆಡಳಿತ ವ್ಯವಸ್ಥೆ ಇಂದು ಬಂಡವಾಳಶಾಹಿಗಳ ನಿಯಂತ್ರಣದಲ್ಲಿದ್ದು, ದುಡಿಯುವ ಜನರ ಕೈಗೆ ಸಂಪತ್ತು ಬರಬೇಕೆಂದು ಪ್ರತಿಪಾದಿಸುವ ಸಮಾಜವಾದ ವ್ಯವಸ್ಥೆಗಾಗಿ ಕ್ರಾಂತಿಯಾಗಬೇಕಿದೆ ಎಂದು ಎಸ್‌ಯುಸಿಐ (ಸಿ) ಕೇಂದ್ರ ಪಾಲಿಟ್ ಬ್ಯೂರೋ ಸದಸ್ಯ ಕೆ.ರಾಧಾಕೃಷ್ಣ ಹೇಳಿದರು.

ಮೈಸೂರಿನ ದಿವಾನ್ಸ್ ರಸ್ತೆಯ ಕುಂಚಿಟಿಗರ ಭವನದಲ್ಲಿ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್/ಎಸ್‌ಯುಸಿಐ–ಸಿ) ಪಕ್ಷದ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಎಸ್‌ಯುಸಿಐ (ಸಿ) 76ನೇ ಸಂಸ್ಥಾಪನಾ ದಿನದ ಪ್ರಯುಕ್ತ ಭಾನುವಾರ ಹಮ್ಮಿಕೊಂಡಿದ್ದ ರಾಜಕೀಯ ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ರಾಜಕೀಯ ಅಧಿಕಾರವು ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಂದ ಭಾರತದ ಬಂಡವಾಳಶಾಹಿ ವರ್ಗದ ಕೈಗಳಿಗೆ ಹಸ್ತಾಂತರವಾಯಿತು. ನಂತರ ಕಾಂಗ್ರೆಸ್ ಸರ್ಕಾರ ಬಂಡವಾಳಶಾಹಿಗಳಿಗೆ ಅನುಕೂಲಕರವಾದ ನೀತಿಗಳ ಜಾರಿಗೆ ಮನ್ನಣೆ ನೀಡಿತು. ಇದೇ ಕಾರಣಕ್ಕೆ ಕಾಂಗ್ರೆಸ್ ಜನತೆಯ ವಿಶ್ವಾಸ ಕಳೆದುಕೊಂಡಿತು. ಇದಕ್ಕೆ ಪರ್ಯಾಯವಾಗಿ ಭಾರತದ ಬಂಡವಾಳಶಾಹಿಗಳು ಬಿಜೆಪಿ ಬೆಂಬಲಿಸಿ ಪೋಷಿಸಿದ್ದು, ಬಿಜೆಪಿ ಇಂದು ಬಂಡವಾಳಶಾಹಿ ಪರವಾದ ನೀತಿಗಳನ್ನು ಜಾರಿಗೊಳಿಸುತ್ತಿದೆ ಎಂದು ದೂರಿದರು.

ಜನರ ಹೋರಾಟಗಳನ್ನು ಸದೆಬಡಿಯುವುದಕ್ಕಾಗಿ ಕೋಮುವಾದ, ಫ್ಯಾಸಿಸ್ಟ್ ದಾಳಿಯನ್ನು ಬಿಜೆಪಿ ನಡೆಸುತ್ತಿದೆ. ಬಂಡವಾಳಶಾಹಿಗಳ ಏಜೆಂಟ್ ಆಗಿ ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಜನಸಾಮಾನ್ಯರ ಬವಣೆ ನೀಗುವುದಿಲ್ಲ. ಬೆಲೆ ಏರಿಕೆ, ಭ್ರಷ್ಟಾಚಾರ, ನಿರುದ್ಯೋಗ ಸಮಸ್ಯೆಗಳು ನಿವಾರಣೆಯಾಗುವುದಿಲ್ಲ. ಇದನ್ನು ನಮ್ಮ ಕಾರ್ಮಿಕರು, ರೈತರು ಅರ್ಥ ಮಾಡಿಕೊಂಡು ನೈಜ ಕಮ್ಯುನಿಸ್ಟ್ ಪಕ್ಷಕ್ಕೆ ಬೆಂಬಲವಾಗಿ ನಿಲ್ಲಬೇಕು. ಈ ಅವಶ್ಯಕತೆ ಅರಿತು ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಕಾಮ್ರೇಡ್ ಶಿವದಾಸ್ ಘೋಷ್ 1948ರಲ್ಲೇ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷ ಸ್ಥಾಪಿಸಿದರು ಎಂದು ಹೇಳಿದರು.

ಎಸ್‌ಯುಸಿಐ (ಸಿ) ನೈಜ ಕಮ್ಯುನಿಸ್ಟ್ ಮೌಲ್ಯಗಳನ್ನು ಎತ್ತಿಹಿಡಿಯುತ್ತಿದೆ. ಕಮ್ಯುನಿಸ್ಟ್‌ನಲ್ಲಿ ಕೇವಲ ರಾಜಕೀಯ ಮೌಲ್ಯಗಳು ಮಾತ್ರವಿಲ್ಲ. ಸಂಸ್ಕೃತಿ ಸೇರಿದಂತೆ ಅನೇಕ ಜೀವನ ಮೌಲ್ಯಗಳನ್ನು ಅದು ಪ್ರತಿಪಾದಿಸುತ್ತದೆ. ಪ್ರಸ್ತುತ ನಮ್ಮ ಪಕ್ಷ 22 ರಾಜ್ಯಗಳಲ್ಲಿ ಸಕ್ರಿಯವಾಗಿದೆ. ನಮ್ಮ ಪಕ್ಷಕ್ಕೆ ಬಂಡವಾಳಶಾಹಿಗಳಿಂದ ಹಣ ತೆಗೆದುಕೊಳ್ಳುವುದಿಲ್ಲ. ಸಾರ್ವಜನಿಕರಿಂದ ಮಾತ್ರ ದೇಣಿಗೆ ಸಂಗ್ರಹ ಮಾಡಲಾಗುತ್ತದೆ. ಆದರೆ ಬೇರೆ ಪಕ್ಷಗಳು ಬಂಡವಾಳಶಾಹಿಗಳ ಬಳಿ ಹೋಗುತ್ತವೆ. ಅಧಿಕಾರಕ್ಕೆ ಬಂದ ಮೇಲೆ ಬಂಡವಾಳಶಾಹಿಗಳ ಪರವಾಗಿ ಅಧಿಕಾರ ನಡೆಸುತ್ತವೆ ಎಂದು ಕಿಡಿಕಾರಿದರು.

**ಪಠ್ಯದಿಂದ ಡಾರ್ವಿನ್ ಸಿದ್ಧಾಂತ ಹೊರಕ್ಕೆ:** ಎನ್‌ಸಿಇಆರ್‌ಟಿ ತನ್ನ ಶಾಲಾ ಪಠ್ಯ ಪುಸ್ತಕದಿಂದ ಚಾರ್ಲ್ಸ್ ಡಾರ್ವಿನ್ ಅವರ ಜೈವಿಕ ವಿಕಾಸ ಸಿದ್ಧಾಂತದ ಪಠ್ಯ ಕೈಬಿಟ್ಟಿದೆ. ಇದನ್ನು ಆಕ್ಷೇಪಿಸಿ ವಿಜ್ಞಾನಿಗಳು ಹಾಗೂ ಶಿಕ್ಷಕರು ಸೇರಿದಂತೆ 1,800ಕ್ಕೂ ಹೆಚ್ಚು ಮಂದಿ ಸದರಿ ಪಠ್ಯ ಪುನರ್ ಅಳವಡಿಸುವಂತೆ ಒತ್ತಾಯಿಸಿ ಮನವಿ ಸಲ್ಲಿಸಿದ್ದಾರೆ. ಕೇಂದ್ರ ಸರ್ಕಾರವು ಪಠ್ಯದಿಂದ ಡಾರ್ವಿನ್ ಸಿದ್ಧಾಂತ ಕೈಬಿಡುವ ಮೂಲಕ ನಮ್ಮ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಯದಂತೆ ಮಾಡಲು ಹೊರಟಿದೆ ಎಂದು ದೂರಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಬಿ.ರವಿ, ನಮ್ಮ ಪಕ್ಷದ ಸಂಸ್ಥಾಪಕ ಕಾಮ್ರೇಡ್ ಶಿವದಾಸ್ ಘೋಷ್ ಅವರು ಹದಿಹರೆಯದಲ್ಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ದೇಶಕ್ಕೆ ನೈಜ ಸ್ವಾತಂತ್ರ್ಯದ ಅಗತ್ಯತೆ ಮನಗಂಡು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷ ಸ್ಥಾಪಿಸಿದರು. ಪ್ರಸ್ತುತ ಇಡೀ ದೇಶದಲ್ಲಿ ನಮ್ಮ ಪಕ್ಷ ಶಿವದಾಸ್ ಘೋಷ್ ಅವರ ವಿಚಾರಧಾರೆಯಡಿ ಬಲಿಷ್ಠ ಜನಪರ ಹೋರಾಟಗಳನ್ನು ನಡೆಸುತ್ತಿದೆ ಎಂದರು.

ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಂ.ಉಮಾದೇವಿ, ಚಂದ್ರಶೇಖರ ಮೇಟಿ, ಪಕ್ಷದ ಕೆಆರ್ ಕ್ಷೇತ್ರದ ಅಭ್ಯರ್ಥಿ ಪಿ.ಎಸ್.ಸಂಧ್ಯಾ, ಚಾಮರಾಜ ಕ್ಷೇತ್ರದ ಅಭ್ಯರ್ಥಿ ಜಿ.ಎಸ್.ಸೀಮಾ, ಪಕ್ಷದ ಮುಖಂಡರಾದ ವಿ.ಯಶೋಧರ್, ಹರೀಶ್, ಸುನೀಲ್, ಸುಮಾ, ಸುಭಾಷ್, ಬಸವರಾಜು, ಚಂದ್ರಕಲಾ, ನೀತು, ಅಭಿಲಾಷ, ಪುಷ್ಪ ಮತ್ತಿತರರು ಹಾಜರಿದ್ದರು.



ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ನಗರತಳ್ಳಿ ಗ್ರಾಮದ ಮೂಗು ಮಾರಮ್ಮ ದೇವಸ್ಥಾನದಲ್ಲಿ ಶಾಸಕ ಜಿ.ಟಿ.ದೇವೇಗೌಡರು ವಿಶೇಷ ಪೂಜೆ ಸಲ್ಲಿಸಿ, ಮೂಗನಹುಂಡಿ ಗ್ರಾಮದಲ್ಲಿ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿದರು. ಈ ವೇಳೆ ಜೆಡಿಎಸ್ ತಾಲೂಕು ಅಧ್ಯಕ್ಷ ಹಿನಕಲ್ ರಾಜು, ಬೆಳವಾಡಿ ಶಿವಮೂರ್ತಿ, ಕೋಟೆಹುಂಡಿ ಮಹದೇವ್, ಎಪಿಎಂಸಿ ಮಾಜಿ ಅಧ್ಯಕ್ಷರಾದ ಪ್ರಭುಸ್ವಾಮಿ, ಗೋಪಾಲಪುರ ಬಸವೇಗೌಡ, ಸ್ವಾಮಿಗೌಡ, ವಿಶ್ವ, ದೇವರಾಜೇಗೌಡ, ಜಯರಾಮು, ನಗರತಳ್ಳಿ ಚಿಕ್ಕಣ್ಣ, ಮೂಗನಹುಂಡಿ ಮಹದೇವ್, ಬೀರಿಹುಂಡಿ ಮಾಲೇಗೌಡ, ಶಿವಣ್ಣ, ಸಾಲುಂಡಿ ರಾಜು, ಕೇರ್ಗಳ್ಳಿ ಶಿವಪ್ಪ ಇನ್ನಿತರರಿದ್ದರು.

## ನೇಮಕ



ಮೈಸೂರು, ಏ.23– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಲ್ಪಸಂಖ್ಯಾತರ ವಿಭಾಗದಿಂದ ವರುಣ ವಿಧಾನಸಭಾ ಕ್ಷೇತ್ರದ ಚುನಾವಣಾ ವೀಕ್ಷಕರನ್ನಾಗಿ ಸೈಯದ್ ಫಾರುಕ್ ಅವರನ್ನು ನೇಮಕ ಮಾಡಲಾಗಿದೆ ಎಂದು ಅಲ್ಪಸಂಖ್ಯಾತ ಘಟಕದ ಕೆ.ಅಬ್ದುಲ್ ಜಬ್ಬಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಸಿರು ನಮ್ಮ ಉಸಿರು

# ಅಕ್ಷಯ ತೃತೀಯ; ಮೈಸೂರಲ್ಲಿ ಆಭರಣ ಖರೀದಿ ಜೋರು





ಮೈಸೂರಿನ ಹಲವು ಆಭರಣಗಳ ಮಳಿಗೆಯಲ್ಲಿ ಅಕ್ಷಯ ತೃತೀಯದ ಹಿನ್ನೆಲೆಯಲ್ಲಿ ಭಾನುವಾರ ಆಭರಣ ಖರೀದಿಸುತ್ತಿರುವ ಗ್ರಾಹಕರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಏ.23(ಎಂಟಿವೈ)– ಅಕ್ಷಯ ತೃತೀಯ ಹಿನ್ನೆಲೆಯಲ್ಲಿ ಮೈಸೂರಲ್ಲಿ ಆಭರಣ ಖರೀದಿ ಜೋರಾಗಿತ್ತು. ಅಕ್ಷಯ ತೃತೀಯ ದಿನದಂದು ಆಭರಣ ಖರೀದಿಸಿದರೆ ಒಳಿತಾಗಲಿದೆ ಎಂಬ ನಂಬಿಕೆ ಇರುವುದರಿಂದ ಜನತೆ ಭಾನುವಾರ ಆಭರಣ ಖರೀದಿಸಲು ಮುಗಿಬಿದ್ದರು.

2 ವರ್ಷದಿಂದ ಕೋವಿಡ್ ಹಿನ್ನೆಲೆಯಲ್ಲಿ ಅಕ್ಷಯ ತೃತೀಯ ದಿನದಲ್ಲಿ ಆಭರಣ ಖರೀದಿ ಮಂಕಾಗಿತ್ತು. ಈ ಬಾರಿ ಚುನಾವಣಾ ನೀತಿ ಸಂಹಿತೆ ಕಾರಣ, ಆಭರಣ ಖರೀದಿಸಲು ಹಣ ಕೊಂಡೊಯ್ಯುವುದು ಕಷ್ಟವಾಗಿದ್ದರೂ ಮೈಸೂರಿನ ಬಹುತೇಕ ಆಭರಣ ಮಳಿಗೆಗಳಲ್ಲಿ ಗ್ರಾಹಕರ ಸಂಖ್ಯೆ ಹೆಚ್ಚಾಗಿತ್ತು. ಗ್ರಾಹಕರು ಇಷ್ಟಾನುಸಾರ ಆಭರಣ ಖರೀದಿಸಿ ದೇವಾಲಯದಲ್ಲಿ ಪೂಜೆ ಮಾಡಿಸುತ್ತಿದ್ದ ದೃಶ್ಯ ಕಂಡು ಬಂದಿತು. ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದ ಬಳಿ, ಬಿ.ಎನ್.ರಸ್ತೆ, ಅಶೋಕ ರಸ್ತೆ, ದೇವರಾಜ ಅರಸ್ ರಸ್ತೆ, ಅಗ್ರಹಾರ ಸೇರಿದಂತೆ ಮೈಸೂರಿನ ವಿವಿಧ ಬಡಾವಣೆಗಳಲ್ಲಿರುವ ಆಭರಣ ಮಳಿಗೆಗಳಲ್ಲಿ ಆಭರಣ ಮಾರಾಟ ಬಿರುಸಾಗಿತ್ತು. ಬಹುತೇಕ ಮಳಿಗೆಗಳಲ್ಲೂ ಗ್ರಾಹಕರು ತುಂಬಿ ತುಳುಕುತ್ತಿದ್ದ ದೃಶ್ಯ ಕಂಡು ಬಂದಿತು. ಇದರೊಂದಿಗೆ ಮದುವೆ ಹಾಗೂ ಶುಭ ಸಮಾರಂಭಗಳಿಗೂ ಆಭರಣ ಖರೀದಿಸಲು ಬಂದಿದ್ದವರ ಸಂಖ್ಯೆಯೂ ಹೆಚ್ಚಾಗಿದೆ. ಬೃಹತ್ ಮಳಿಗೆಗಳಲ್ಲಿ ಕೆಲವರು ಆನ್‌ಲೈನ್ ಮೂಲಕ ಹಾಗೂ ಕಳೆದ ಒಂದು ವಾರ ಖರೀದಿಸಿದ್ದ ಆಭರಣಗಳನ್ನು ಇಂದು ಪಡೆದುಕೊಂಡು ಮರಳಿದರು.

# ಅಹಿಂದ ಜವರಪ್ಪ ಕಾಂಗ್ರೆಸ್ ಸೇರ್ಪಡೆ



ಮೈಸೂರು,ಏ.23(ಎಸ್‌ಬಿಡಿ)– ಸಾಮಾಜಿಕ ಹೋರಾಟಗಾರ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಅಹಿಂದ ಜವರಪ್ಪ ಭಾನುವಾರ ಕಾಂಗ್ರೆಸ್‌ಗೆ ಸೇರ್ಪಡೆಯಾದರು.

ವರುಣ ಕ್ಷೇತ್ರದ ನಾಡನಹಳ್ಳಿ ಬಳಿ ನಡೆದ ಸಮಾರಂಭದಲ್ಲಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಸಮ್ಮುಖದಲ್ಲಿ ಅನೇಕ ಬೆಂಬಲಿಗರೊಂದಿಗೆ ಪಕ್ಷ ಸೇರಿದ ಅಹಿಂದ ಜವರಪ್ಪ ಅವರನ್ನು ಅಭಿನಂದಿಸಲಾಯಿತು.

ಈ ವೇಳೆ ಶಾಸಕ ಡಾ.ಯತೀಂದ್ರ ಮಾತನಾಡಿ, ಅಹಿಂದ ಜವರಪ್ಪರ ಸೇರ್ಪಡೆಯಿಂದ ಪಕ್ಷಕ್ಕೆ ದೊಡ್ಡಶಕ್ತಿ ಬಂದಿದೆ. ವರುಣ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷದವರು ಅಪಪ್ರಚಾರ ನಡೆಸುವ ಮೂಲಕ ಸಿದ್ದರಾಮಯ್ಯರವರನ್ನು ಸೋಲಿಸಲು ಹುನ್ನಾರ ಮಾಡುತ್ತಿದ್ದಾರೆ. ಆದರೆ ಕ್ಷೇತ್ರದ ಜನರ ಮುಂದೆ ಯಾವ ರೀತಿಯ ತಂತ್ರಗಾರಿಕೆಯೂ ನಡೆಯುವುದಿಲ್ಲ ಎಂದರು.

ಸಾಮಾಜಿಕ ನ್ಯಾಯದಡಿ ರಾಜಕಾರಣ ಮಾಡಿಕೊಂಡು ಬಂದಿರುವ ಸಿದ್ದರಾಮಯ್ಯರವರು ಯಾವ ಜಾತಿಯ ವಿರೋಧಿಯೂ ಅಲ್ಲ. ಅವರು ಮುಖ್ಯಮಂತ್ರಿಯಾಗಿದ್ದಾಗ ದಲಿತರಿಗೆ, ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ, ಶೋಷಿತರಿಗೆ ಮಾತ್ರವಲ್ಲದೆ ಎಲ್ಲಾ ಜಾತಿಯ ಬಡವರಿಗೂ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇದನ್ನು ಸಹಿಸದೆ ಅವರ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ. ಇದಕ್ಕೆ ಯಾರೂ ಕಿವಿಗೊಡಬೇಡಿ ಎಂದು ಅವರು ಮನವಿ ಮಾಡಿದರು.

ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣರವರು ವಸತಿ ಸಚಿವರಾಗಿ ವರುಣ ಕ್ಷೇತ್ರಕ್ಕೆ ಒಂದೇ ಒಂದು ಮನೆಯನ್ನೂ ಕೊಟ್ಟಿಲ್ಲ. ಸಿದ್ದರಾಮಯ್ಯರವರ ಸರ್ಕಾರದಲ್ಲಿ ಮಂಜೂರಾದ ಮನೆಗಳಿಗೇ ಈವರೆಗೆ ಹಣ ಬಿಡುಗಡೆ ಮಾಡಿಲ್ಲ. ಸಿದ್ದರಾಮಯ್ಯರವರು ದಲಿತರಿಗಾಗಿ ಬಡ್ತಿ ಮೀಸಲಾತಿ ಜಾರಿ ಮಾಡಿ, 1 ಕೋಟಿವರೆಗೆ ಗುತ್ತಿಗೆ ಕಲ್ಪಿಸಿದರು. ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಸಾಲಮನ್ನ, ಎಸ್‌ಇಪಿ, ಟಿಎಸ್‌ಪಿ ಯೋಜನೆಯಡಿ ಪರಿಶಿಷ್ಟರಿರುವ ಕಡೆ ಕಾಂಕ್ರಿಟ್ ರಸ್ತೆ ನಿರ್ಮಾಣ ಮಾಡಿಸಿದರು. ಮಾಜಿ ಸಿಎಂ ಸಿದ್ದರಾಮಯ್ಯನವರು ಯಾವ ಜಾತಿಯ ವಿರೋಧಿಯೂ ಅಲ್ಲ ಎನ್ನುವುದು ಜನರಿಗೆ ತಿಳಿದಿದೆ ಎಂದರು.

ಈ ಸಂದರ್ಭದಲ್ಲಿ ಅಹಿಂದ ಜವರಪ್ಪ ಜೊತೆ ಪಕ್ಷ ಸೇರಿದ ಗ್ರಾಪಂ ಮಾಜಿ ಅಧ್ಯಕ್ಷರಾದ ವಾಜಮಂಗಲ ರಾಜಣ್ಣ, ಲತಾ, ಭೀಮರಾಜು, ಗ್ರಾಪಂ ಸದಸ್ಯರಾದ ಶಿವು, ಲತಾ ಮಹೇಶ್, ವರುಣ ಗ್ರಾಪಂ ಸದಸ್ಯರಾದ ಸೋಮಣ್ಣ, ಸಿದ್ದಯ್ಯ, ಮುಖಂಡರಾದ ರಾಜು, ದಂಡಿಕೆರೆ ಮಹಾದೇವ, ನಾಗೇಶ್, ಚೇತನ್, ಕೂಡನಹಳ್ಳಿ ರಾಜು, ಉತ್ತನಹಳ್ಳಿ ರವಿ, ನಟರಾಜು, ಚಿಕ್ಕಣ್ಣ, ಮೆಲ್ಲಳ್ಳಿ ಗ್ರಾಪಂ ಸದಸ್ಯ ಮೋಹನ್, ಹೊಸಕೋಟೆ ಮನು, ಚಿಕ್ಕಳ್ಳಿ ಮರಿಸ್ವಾಮಿ, ಜಯರಾಂ, ರೂಪ ಮತ್ತಿತರರಿಗೆ ಪಕ್ಷದ ಶಾಲು ಹಾಕಿ ಸ್ವಾಗತಿಸಿದರು.

ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ಮುಖಂಡರಾದ ಮಂಜುಳಾ ಮಂಜುನಾಥ್, ಎಂ.ಟಿ.ರವಿಕುಮಾರ್, ದಂಡಿಕೆರೆ ನಾಗರಾಜ್, ವಕೀಲ ಪಾಳ್ಯ ಸುರೇಶ್, ಕೃಷ್ಣ, ನಾಡನಹಳ್ಳಿ ರವಿ, ನೂತನ ಕೆಂಪೀರಯ್ಯ, ಆನಂದ್, ಸೋಸಲೆ ಮಹೇಶ್, ರಮೇಶ್ ಮುದ್ದೇಗೌಡ, ಚೋರನಹಳ್ಳಿ ರಾಜು, ಶಾಂತಯ್ಯ, ಸಿದ್ದಯ್ಯ, ನಾಗರಾಜ್, ಬಸವರಾಜು ಮತ್ತಿತರರಿದ್ದರು.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**24.4.2023 ಸೋಮವಾರ, ಮಳೆ ನಕ್ಷತ್ರ: ಅಶ್ವಿನಿ, 14.04.2023 ರಿಂದ 24.04.2023**
**ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,**
**ತಿಥಿ: ಚೌತಿ, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ**

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು:** ಕನ್ನಡ ಚಳುವಳಿಯ ಹಿರಿಯ ಹೋರಾಟಗಾರ ಮೈ.ನಾ.ಗೋಪಾಲಕೃಷ್ಣರವರ ಜನ್ಮದಿನಾಚರಣೆ ಅಂಗವಾಗಿ ಅಭಿನಂದನಾ ಸಮಾರಂಭ, ಭಾಗವಹಿಸುವವರು: ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಗೌರವ ಕೋಶಾಧ್ಯಕ್ಷ ಜಿ.ಪ್ರಕಾಶ್, ಗೌ॥ ಕಾರ್ಯದರ್ಶಿ ಮ.ನ.ಲತಾ ಮೋಹನ್, ಸ್ಥಳ: # 644, ಎ.ಎ.ಬ್ಲಾಕ್, ಹುಡ್ಕೊ ಮನೆ, ಬನ್ನಿಮಂಟಪ, ಬೆಳಗ್ಗೆ 11 ಗಂಟೆಗೆ.

■ **ಭಾರತೀಯ ಸಾಂಸ್ಕೃತಿಕ ವಿಕಾಸ ವೇದಿಕೆ, ಲಯನ್ಸ್ ಕ್ಲಬ್ ಆಫ್ ಬೆಂಗಳೂರು ಸ್ಯಾಂಡಲ್‌ವುಡ್ ಸೆಲೆಬ್ರೆಟಿಸ್, ಶ್ರೀ ತಲಕಾವೇರಿ ಮಹಿಳಾ ಶಿಕ್ಷಣ ಟ್ರಸ್ಟ್, ಭೂಮಿಕಾ ಭಾವೈಕ್ಯ ಬಳಗ:** ಬಸವ ಜಯಂತಿ ಸಮಾರಂಭ, ದಿವ್ಯ ಸಾನಿಧ್ಯ: ರಾಘವೇಂದ್ರನಗರದ ಶ್ರೀ ಬಸವೇಶ್ವರ ಮಠದ ಶ್ರೀ॥ಷ॥ಬ್ರ॥ ಶ್ರೀ ಶಿವಪ್ರಭು ಸ್ವಾಮೀಜಿ, ಹಾರ್ಡ್‌ವಿಕ್ ಚರ್ಚ್ ಪಾದ್ರಿಗಳಾದ ಶ್ರೀ ಜಾನ್ಸನ್ ಪಾಲ್, ಹಿರಿಯ ಸಾಂಸ್ಕೃತಿಕ ಚಿಂತಕ ಕೆ.ರಘುರಾಮ್ ವಾಜಪೇಯಿ, ಸ್ಥಳ: ಶ್ರೀ ಬಸವ ಪುತ್ಥಳಿ: ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಬೆಳಗ್ಗೆ 11 ಗಂಟೆಗೆ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಚಿನ್ನ, ವಜ್ರ ಮತ್ತು ಅಮೂಲ್ಯ ರತ್ನದ ಆಭರಣಗಳ ವಿಶೇಷ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಆಭರಣ ಮಳಿಗೆ, ಬಿ.ಎನ್. ರಸ್ತೆ, ಸಬ್ ಅರ್ಬನ್ ಬಸ್ ನಿಲ್ದಾಣದ ಹತ್ತಿರ, ಸಂಜೆ 4.30ಕ್ಕೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ: ಡಾ. ಗೀತಾ ಪ್ರಸಾದ್, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: "ಮಹಾ ಮೋಜಣಿ" ಭರತ ಭೂಮಿಯನ್ನು ಅಳೆದ ಸಾಹಸಗಾಥೆ ಲೇಖನ ಹಾಗೂ ಪ್ರಸ್ತುತಿ–ಡಾ.ಗಜಾನನ ಶರ್ಮ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಜಿ.ಪುಷ್ಪಲತಾ, ವ್ಯಾಖ್ಯಾನ–ಡಾ.ಲತಾ ಮೈಸೂರು, 7.15 ಭಾವಗೀತೆ: ರೇಖಾ ಸುರೇಶ್, ಹೆಚ್.ಎಸ್.ಇಂದಿರಾ, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) ಕನ್ನಡ ಚಿತ್ರರಂಗದ ಮೇರುನಟ ಡಾ.ರಾಜ್‌ಕುಮಾರ್ ಅವರೊಂದಿಗೆ ಎನ್.ವಿ.ರಮೇಶ್ ಅವರು ನಡೆಸಿದ್ದ ಮಾತುಕತೆ, ಪ್ರಸ್ತುತಿ–ಎಸ್.ಲಕ್ಷ್ಮೀನಾರಾಯಣ, 9.30 ಚುನಾವಣೆ 2023–ವಿಧಾನ ಸಭಾ ಕ್ಷೇತ್ರ ಪರಿಚಯ, 10.00 ಲಯ ಸಂಭ್ರಮ, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 11.00 ಸ್ಪೆಷಲ್ ಚುರುಮುರಿ, ಪ್ರಸ್ತುತಿ–ಪಿ.ಸಿ. ಮಳಿಮಠ ಮತ್ತು ಕೆ.ಬಿ.ಮೀನಾ, 11.30 ಮಿಶ್ರ ಮಾಧುರ್ಯ.

**ಮಧ್ಯಾಹ್ನ:** 12.30 ದೇವರ ನಾಮ: ನಿತಿನ್ ರಾಜಾರಾಂ ಶಾಸ್ತ್ರಿ, ಎಂ.ರಾಘವೇಂದ್ರ, 12.45 ನಮ್ಮ ಆರೋಗ್ಯ: ರಾಷ್ಟ್ರೀಯ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ ಕುರಿತು ಡಾ.ಜಯಂತ್ ಎಂ.ಎಸ್. ಅವರೊಂದಿಗೆ ಮಾತುಕತೆ, 1.00 ರಂಗಗೀತೆ: ಸಂಪೂರ್ಣ ರಾಮಾಯಣ ನಾಟಕದ ಹಾಡುಗಳು, 1.20 ಭಾವಗೀತೆ, 3.00 ಟಿ.ಎನ್. ಅಶೋಕ್– ಹಾಡುಗಾರಿಕೆ. **ಸಂಜೆ:** 4.00 ಮಹಿಳಾರಂಗ: ನಿವೃತ್ತ ಶುಶ್ರೂಷಕಿ ಮೇರಿ ಲೋಬೋ ವಾ ಅವರೊಂದಿಗೆ ಮಾತುಕತೆ ಪ್ರಸ್ತುತಿ– ಕೆ.ಬಿ. ಮೀನಾ, 4.30 ಝೇಂಕಾರ: ಕವಿ– ಡಾ. ದೊಡ್ಡರಂಗೇಗೌಡ, ಸಂಗೀತ– ಜಿ. ಪುಷ್ಪಲತಾ, ಭಾಗವಹಿಸಿರುವವರು ಮೈಸೂರಿನ ಗಾನಭಾರತಿ ಸಂಗೀತ ಶಾಲೆಯ ವಿದ್ಯಾರ್ಥಿಗಳು, 6.55 ಕೃಷಿರಂಗ: ಕಿಸಾನ್ ವಾಣಿ.

**ರಾತ್ರಿ:** 9.30 ಹಳ್ಳಿ ಹಾಡು: ಭಾಗವಹಿಸುವವರು– ಭಾಗವಹಿಸುವವರು ಮಾದಿಗಳ್ಳಿ ಜಯಮ್ಮ ಮತ್ತು ಸಂಗಡಿಗರು, ಪ್ರಸ್ತುತಿ– ಅಬ್ದುಲ್ ರಶೀದ್, 10.30 ಸವಿನೆನಪು.

■ **ಶ್ರೀ ರಾಘವೇಂದ್ರ ಸ್ವಾಮಿ ಸಮಿತಿ :** ಪ್ರಸಿದ್ಧ ವಿದ್ವಾಂಸರಾದ ಪಂಡಿತ್ ಶ್ರೀ ಮುರಳೀಧರದಾಸ್ ಅವರಿಂದ 'ಹರಿಕಥಾಮೃತ ಸಾರ' ವಿಷಯ ಕುರಿತು ಪ್ರವಚನ, ಸ್ಥಳ: ರಾಯರ ಮಠ, ಜಯಲಕ್ಷ್ಮೀಪುರಂ, ಸಂಜೆ 5 ಗಂಟೆಗೆ.

■ **ಶ್ರೀ ಅವನಿ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ ಶ್ರೀ ಶಾರದಾ ಪೀಠಂ, ಮೈಸೂರು ಶಾಖೆ :** ಶ್ರೀ ಶಂಕರ ಭಗವತ್ಪಾದಾಚಾರ್ಯರ ಜಯಂತಿ ಕಾರ್ಯಕ್ರಮ, ಸಂಜೆ 6.15ಕ್ಕೆ–ವಿದುಷಿ ಶ್ರೀಮತಿ ರೂಪಶ್ರೀ ಆನಂದ್ ಅವರಿಂದ ಸ್ತೋತ್ರ ಗಾಯನ, ಸಂಜೆ: 6.45ಕ್ಕೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಹುಬ್ಬಳ್ಳಿ) ಜ್ಯೇಷ್ಠ ಪ್ರಚಾರಕ ಸು. ರಾಮಣ್ಣ ಅವರಿಂದ ಉಪನ್ಯಾಸ, ರಾತ್ರಿ 8.45ಕ್ಕೆ: ಮಹಾ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ಮಹಾಸಂಸ್ಥಾನಂ ಆವರಣ, ವಿದ್ಯಾರಣ್ಯಪುರಂ.

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಏಪ್ರಿಲ್ 24 ಸೋಮವಾರ 2023
ಸಂಪುಟ: 44 | ಸಂಚಿಕೆ: 9 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



## ಸಿದ್ಧಗಂಗಾ ಮಠದ ಉತ್ತರಾಧಿಕಾರಿಗಳಿಗೆ ನಿರಂಜನ ಜಂಗಮ ಪಟ್ಟಾಧಿಕಾರ

**ಶ್ರೀ ಶಿವಸಿದ್ದೇಶ್ವರ ಎಂಬ ಅಭಿದಾನ**



**ತುಮಕೂರು:** ತುಮಕೂರಿನ ಸಿದ್ಧಗಂಗಾ ಮಠದ ಉತ್ತರಾಧಿಕಾರಿ ಸ್ವಾಮಿಗಳಿಗೆ ಶ್ರೀಮಠದಲ್ಲಿ ಜಂಗಮಪಟ್ಟಾಧಿಕಾರ ಮಹೋತ್ಸವ ನೆರವೇರಿತು.

ಸಿದ್ಧಗಂಗಾ ಮಠದ ಉತ್ತರಾಧಿಕಾರಿ ಸ್ವಾಮಿಗಳಿಗೆ ಶ್ರೀ ಶಿವಸಿದ್ದೇಶ್ವರ ಎಂಬ ಯೋಗ ಪಟ್ಟ ನೀಡಲಾಗಿದೆ. ಸಿದ್ಧಗಂಗೆ ಪೀಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಸುತ್ತೂರು ಮಠದ ▶ 9ನೇ ಪುಟಕ್ಕೆ



# ಇಂದು ಗುಂಡ್ಲುಪೇಟೆಯಲ್ಲಿ ಚಾಣಕ್ಯನ ಚಮತ್ಕಾರ

## ಎಸ್‌ಪಿಜಿ, ಹಿರಿಯ ಪೊಲೀಸ್ ಅಧಿಕಾರಿಗಳಿಂದ ಭದ್ರತೆ ಪರಿಶೀಲನೆ

**ಗುಂಡ್ಲುಪೇಟೆ, ಏ.23– ಕೇಂದ್ರ ಗೃಹ ಸಚಿವ ಅಮಿತ್ ಶಾ ನಾಳೆ(ಏ.24) ಗುಂಡ್ಲುಪೇಟೆ ಪಟ್ಟಣಕ್ಕೆ ಆಗಮಿಸಲಿದ್ದು, ಭರ್ಜರಿ ರೋಡ್ ಶೋ ನಡೆಸಿ ಬಿಜೆಪಿ ಅಭ್ಯರ್ಥಿ ಹಾಲಿ ಶಾಸಕ ಸಿ.ಎಸ್.ನಿರಂಜನ ಕುಮಾರ್ ಪರ ಮತಯಾಚನೆ ಮಾಡಲಿದ್ದಾರೆ.**

ಗೃಹಸಚಿವರ ಸ್ವಾಗತಕ್ಕಾಗಿ ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ಹೆಲಿಪ್ಯಾಡ್ ಸಿದ್ಧಗೊಳಿಸಲಾಗುತ್ತಿದ್ದು, ಪೊಲೀಸ್ ಹಾಗೂ ಕಂದಾಯ ಇಲಾಖೆ ಉನ್ನತ ಮಟ್ಟದ ಅಧಿಕಾರಿಗಳು ಪರಿಶೀಲಿಸಿದ್ದಾರೆ. ದಕ್ಷಿಣ ವಲಯ ಐಜಿಪಿ ಮಧುಕರ ಪವಾರ್, ಚಾಮರಾಜನಗರ ಎಸ್‌ಪಿ ಪದ್ಮಿನಿ ಸಾಹೂ ಭದ್ರತೆಗೆ ಸಂಬಂಧಿಸಿದಂತೆ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದರು. ಈಗಾಗಲೇ ಪಟ್ಟಣಕ್ಕೆ ಕೇಂದ್ರಿಯ ಮೀಸಲು ಪಡೆ ಹಾಗೂ ಗಡಿ ಭದ್ರತಾ ಪಡೆಗಳ ಸಿಬ್ಬಂದಿ ಆಗಮಿಸಿದ್ದಾರೆ.

ಜತೆಗೆ 700 ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿದ್ದು ಎಸ್‌ಪಿಜಿ ಭದ್ರತೆಯಲ್ಲಿ ರೋಡ್ ಶೋ ನಡೆಯಲಿದೆ. ಅಮಿತ್ ಶಾ ರೋಡ್ ಶೋ ನಡೆಸಲು



ಅಮಿತ್ ಶಾ, ಕೇಂದ್ರ ಗೃಹ ಸಚಿವ

ಬಳಸುವ ವಾಹನವನ್ನು ಭಾನುವಾರ ಪಟ್ಟಣದ ರಸ್ತೆಯಲ್ಲಿ ಟ್ರಯಲ್ ರನ್ ಮಾಡಲಾಯಿತು. ಭಾನುವಾರ ಮೈಸೂರಿಗೆ ಆಗಮಿಸುವ ಶಾ ಹನ್ನೆರಡು ದಿನಗಳ ಹಿಂದೆ ಮೋದಿ ಉಳಿದುಕೊಂಡಿದ್ದ ರಾಡಿಸನ್ ಬ್ಲೂ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡುವರು. ಬೆಳಗ್ಗೆ 10 ಗಂಟೆಗೆ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ಚಾಮುಂಡೇಶ್ವರಿ ದರ್ಶನ ಪಡೆಯುವರು. ನಂತರ 10.50ಕ್ಕೆ ಮೈಸೂರಿನಿಂದ ಹೆಲಿಕಾಪ್ಟರ್‌ನಲ್ಲಿ




ಅಮಿತ್ ಶಾ ರೋಡ್ ಶೋಗಾಗಿ ಸಿದ್ಧವಾಗಿರುವ ಬಿಜೆಪಿ ಪ್ರಚಾರ ವಾಹನ

ಹೊರಟು 11.20ಕ್ಕೆ ಪಟ್ಟಣಕ್ಕೆ ಆಗಮಿಸುವರು. 11.30ರಿಂದ 12.30ರ ವರೆಗೆ ರೋಡ್ ಶೋ ನಡೆಸಿ ನಂತರ ಕುಶಾಲನಗರಕ್ಕೆ ತೆರಳುವರು. ಇದರ ಸಂಪೂರ್ಣ ಲಾಭ ಪಡೆಯಲು ಬಿಜೆಪಿ ಸಿದ್ಧತೆ ▶ 9ನೇ ಪುಟಕ್ಕೆ

# ಶ್ರೀರಂಗಪಟ್ಟಣದಲ್ಲಿ ಚುನಾವಣಾ ಬೆಟ್ಟಿಂಗ್ ಭರಾಟೆ

## ಕೃಷಿ ಭೂಮಿ, ಬೈಕ್, ಟ್ರಾಕ್ಟರ್, ಆಡು, ಕುರಿ ಪಣಕ್ಕೆ

ಶ್ರೀರಂಗಪಟ್ಟಣ, ಏ.23(ವಿನಯ್ ಕಾರೇಕುರ)– ಈ ಬಾರಿಯ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಬೆಟ್ಟಿಂಗ್ ದಂಧೆ ಚುರುಕುಗೊಂಡಿದ್ದು, ಗೆಲ್ಲುವ ಕುದುರೆ ಯಾರೆಂದು ಜನರು ನಗದು, ಬೆಲೆಬಾಳುವ ಕೃಷಿ ಭೂಮಿ, ಕುರಿ, ಮೇಕೆ, ಹಸುಗಳು ಮತ್ತು ಎತ್ತುಗಳು, ಟ್ರ್ಯಾಕ್ಟರ್‌ಗಳು ಸೇರಿದಂತೆ ಜೀವನೋಪಾಯಕ್ಕೆ ಇರುವ ಅವರ ಆಸ್ತಿಯನ್ನು ಬೆಟ್ಟಿಂಗ್ ಕಟ್ಟುತ್ತಿದ್ದಾರೆ. ಶ್ರೀರಂಗಪಟ್ಟಣ ಕೋಟೆನಾಡು ಇಲ್ಲಿ ರಾಜ್ಯಕ್ಕಾಗಿ ಹಲವು ಯುದ್ಧಗಳು ಕಂಡಿವೆ. ಇಂಥ ಕೋಟೆನಾಡಿನ ಈ ಬಾರಿಯ ಅಧಿಪತಿಗಾಗಿ ಕ್ಷೇತ್ರಾದ್ಯಂತ ಬೆಟ್ಟಿಂಗ್ ಜೋರಾಗಿದೆ.

ಶ್ರೀರಂಗಪಟ್ಟಣದ ಅರಕೆರೆ ಹೋಬಳಿ



ಯಾಗಿದ್ದು, ಅಂದಾಜು 10 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇದೆ. ಅರಕೆರೆಯಲ್ಲಿ ಅತಿ ಹೆಚ್ಚು ಬೆಟ್ಟಿಂಗ್ ನಡೆಯುತ್ತಿದ್ದು, ಈ ಬಾರಿಯ ಪಾಲು ಹೆಚ್ಚಾಗಿದೆ. ಹಿಂದಿನ ಚುನಾವಣೆಯಲ್ಲಿ ನಗದು, ಬೈಕ್, ಬಂಗಾರದ ಬೆಟ್ಟಿಂಗ್ ಸಾಮಾನ್ಯವಾಗಿದ್ದರೆ, ಈ ಬಾರಿ ಗ್ರಾಮಸ್ಥರು ಆಡು, ಕುರಿಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದಾರೆ.

ಗಮನಾರ್ಹವಾಗಿ, ಕಳೆದ 30– 40 ವರ್ಷಗಳಿಂದ ಅರಕೆರೆ ಗ್ರಾಮ ಚುನಾವಣಾ ಬೆಟ್ಟಿಂಗ್‌ನಲ್ಲಿ ಮುಂಚೂಣಿಯಲ್ಲಿದ್ದು, ನಿಜವಾದ ಮತದಾನ ಮತ್ತು ಮತ ಎಣಿಕೆಗೆ ಮುಂಚೆಯೇ ಗೆಲ್ಲುವ ಕುದುರೆಗಳನ್ನು ಗ್ರಾಮಸ್ಥರು ಊಹಿಸುತ್ತಾರೆ. ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ ಈ ಬಾರಿ ಜೆಡಿಎಸ್‌ನ ಹಾಲಿ ಶಾಸಕ ರವೀಂದ್ರ ಶ್ರೀಕಂಠಯ್ಯ ಹಾಗೂ ಕಾಂಗ್ರೆಸ್‌ನ ಮಾಜಿ ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ ನಡುವೆ ಪೈಪೋಟಿ ಏರ್ಪಟ್ಟಿದೆ. ಕುತೂಹಲಕಾರಿಯಾಗಿ, ರವೀಂದ್ರ ಶ್ರೀಕಂಠಯ್ಯ ಮತ್ತು ರಮೇಶ್ ಬಾಬು ▶ 9ನೇ ಪುಟಕ್ಕೆ

# ಮೈಸೂರು, ಚಾ.ನಗರ ಜಿಲ್ಲೆಯಲ್ಲಿ ನಾಳೆ ಪ್ರಿಯಾಂಕ ಗಾಂಧಿ ಸಂಚಲನ

ಮೈಸೂರು, ಏ.23–ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿಯವರು ಏ.25ರಂದು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪರ ಪ್ರಚಾರ ಮಾಡುವ ಮೂಲಕ ಸಂಚಲನವನ್ನುಂಟು ಮಾಡಲಿದ್ದಾರೆ. ಅಲ್ಲದೇ ಅಂದು ರಾತ್ರಿ ಸಾಂಸ್ಕೃತಿಕ ನಗರಿ ಮೈಸೂರಿನಲ್ಲೇ ವಾಸ್ತವ್ಯ ಹೂಡಲಿದ್ದಾರೆ.



ಪ್ರಿಯಾಂಕ ಗಾಂಧಿ

ಪ್ರಿಯಾಂಕ ಗಾಂಧಿಯವರು ತಮ್ಮ ಪ್ರವಾಸದಲ್ಲಿ ಹನೂರಿನಲ್ಲಿ ಬೇಡಗಂಪಣ ಹಾಗೂ ಗಿರಿಜನ ಮಹಿಳೆಯರೊಂದಿಗೆ ಸಂವಾದ ನಡೆಸುವುದಲ್ಲದೇ, ಕೆ.ಆರ್.ನಗರದಲ್ಲಿ ರೋಡ್ ಶೋ ಮಾಡುವ ಮೂಲಕ ಗಮನ ಸೆಳೆಯಲಿದ್ದಾರೆ.

ಅಂದು ಮಧ್ಯಾಹ್ನ 12 ಗಂಟೆಗೆ ಬೆಂಗಳೂರಿನಿಂದ ಹೆಲಿಕಾಪ್ಟರ್ ಮೂಲಕ ತಿ.ನರಸೀಪುರ ತಾಲೂಕು ಹೆಳವರ ಹುಂಡಿ ಗ್ರಾಮದಲ್ಲಿ ತಾತ್ಕಾಲಿಕವಾಗಿ ನಿರ್ಮಿಸಲಿರುವ ಹೆಲಿಪ್ಯಾಡ್‌ನಲ್ಲಿ ಬಂದಿಳಿಯಲಿರುವ ಅವರು, ಅದೇ ಗ್ರಾಮದಲ್ಲಿ ಏರ್ಪಡಿಸಲಿರುವ ಸಾರ್ವಜನಿಕರ ಸಭೆಯಲ್ಲಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪರ ಪ್ರಚಾರ ಮಾಡಲಿದ್ದಾರೆ.

ಮಧ್ಯಾಹ್ನ 2.30ಕ್ಕೆ ತಿ.ನರಸೀಪುರದಿಂದ ಹೊರಡುವ ಅವರು, 3 ಗಂಟೆಗೆ ಚಾಮರಾಜನಗರ ಜಿಲ್ಲೆ ಹನೂರಿನ ಮಹದೇಶ್ವರ ಕ್ರೀಡಾಂಗಣದ ಬಳಿ ನಿರ್ಮಿಸಿರುವ ಹೆಲಿಪ್ಯಾಡ್‌ನಲ್ಲಿ ಬಂದಿಳಿದು ಹನೂರಿನ ಜಿ.ವಿ.ಗೌಡ ಕಾಲೇಜು ಬಳಿ ಬೇಡಗಂಪಣ, ▶ 9ನೇ ಪುಟಕ್ಕೆ

# 40 ಪರ್ಸೆಂಟ್ ಬಿಜೆಪಿಯನ್ನು 40 ಸೀಟ್‌ಗೆ ಸೀಮಿತಗೊಳಿಸಿ

ವಿಜಯಪುರ, ಏ.23– 40 ಪರ್ಸೆಂಟ್ ಕಮಿಷನ್ ರಾಜ್ಯ ಬಿಜೆಪಿ ಸರ್ಕಾರಕ್ಕೆ ಈಗ ನಡೆಯುತ್ತಿರುವ ವಿಧಾನಸಭೆ ಚುನಾವಣೆಯಲ್ಲಿ 40 ಸೀಟ್‌ಗೆ ಸೀಮಿತಗೊಳಿಸಿ, ಕಾಂಗ್ರೆಸ್‌ಗೆ 150 ಸ್ಥಾನ ನೀಡುವ ಮೂಲಕ ಬಿಜೆಪಿಯವರು ಶಾಸಕರನ್ನು ಕಳವು ಮಾಡುವುದನ್ನು ತಪ್ಪಿಸಿ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಮನವಿ ಮಾಡಿದರು.



ರಾಹುಲ್ ಗಾಂಧಿ

ನಗರದಲ್ಲಿ ಭಾನುವಾರ ಸಂಜೆ ನಡೆದ ಬೃಹತ್ ರೋಡ್ ಶೋನಲ್ಲಿ ಮಾತನಾಡಿದ ಅವರು, ದೇಶದಲ್ಲಿ ಶೇ 50ಕ್ಕೆ ಮಿತಿಗೊಳಿಸಲಾಗಿರುವ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿ, ಈ ಸಂಬಂಧ ಇರುವ ನಿರ್ಬಂಧವನ್ನು ತೆಗೆದುಹಾಕಿ ಎಂದು ಅವರು ಪ್ರಧಾನಿ ನರೇಂದ್ರ ಮೋದಿಗೆ ಆಗ್ರಹಿಸಿದರು. ದೇಶದ ಹಣವನ್ನು ಎಲ್ಲ ಸಮುದಾಯಗಳಿಗೆ ಸಮಾನವಾಗಿ ಹಂಚಬೇಕು ಎಂದಾದರೆ ಆದಿವಾಸಿಗಳು, ಮುಸ್ಲಿಮರು, ಅಲ್ಪಸಂಖ್ಯಾತರು, ಹಿಂದುಳಿದವರು, ಎಸ್ಸಿ, ಎಸ್ಟಿ ಎಷ್ಟು ಜನ ಇದ್ದಾರೆ ಎಂದು ತಿಳಿಯಬೇಕಿದೆ. ಈ ಸಂಬಂಧ ಯುಪಿಎ ಅವಧಿಯಲ್ಲಿ ನಡೆದಿರುವ ಜಾತಿವಾರು ಜನಗಣತಿ ಮಾಹಿತಿಯನ್ನು ಬಹಿರಂಗಗೊಳಿಸಿ, ▶ 9ನೇ ಪುಟಕ್ಕೆ

## ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ಕ್ಲಾಸಿಗ್ಯಾಕೋ ಲೇಟು?
ಗುಂಡ : ದಾರಿಯಲ್ಲಿ ಬರುವಾಗ ಯಾರೋ ಒಬ್ರು 100 ರೂ. ನೋಟು ಕಳೆದುಕೊಂಡಿದ್ರು ಸಾರ್...
ಮೇಷ್ಟ್ರು : ನೀನು ಅವರಿಗೆ 100 ರೂ. ಹುಡುಕಲು ಸಹಾಯ ಮಾಡ್ತಾ ಇದ್ಯಾ..?
ಗುಂಡ : ಇಲ್ಲ ಸಾರ್... ನಾನು ಅದರ ಮೇಲೆ ನಿಂತಿದ್ದೆ..!

ಮೈಸೂರು ಮಿತ್ರ

ಸೋಮವಾರ, 24 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

**ಅಮೃತವಾಹಿನಿ..........**

ನಮ್ಮ ಉತ್ಸಾಹ ಹುಲ್ಲಿನ ಬೆಂಕಿಯಾಗಬಾರದು, ಕಲ್ಲಿದ್ದಲಿನ ಕಾವಾಗಬೇಕು.

– ಕುವೆಂಪು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಉಂಬಾಗ, ಉಡುವಾಗ ಊರೆಲ್ಲ ನೆಂಟರು.

## ನಿಮ್ಮ ಪತ್ರಗಳು

### ಮಕ್ಕಳ ಬೇಸಿಗೆ ರಜೆ ಅರ್ಥಪೂರ್ಣವಾಗಿರಲಿ!

ಮಾನ್ಯರೆ,

ಕಳೆದ ಹತ್ತು ತಿಂಗಳಿಂದ ಶಾಲೆ ಹಾಗೂ ಪರೀಕ್ಷಾ ಒತ್ತಡವನ್ನು ಅನುಭವಿಸಿ ಬಸವಳಿದಿದ್ದ ಮಕ್ಕಳಿಗೆ ಬೇಸಿಗೆ ರಜೆ ಪ್ರಾರಂಭವಾಗಿದೆ. ಬೇಸಿಗೆ ರಜೆ ಎಂದರೆ ಎರಡು ತಿಂಗಳು ಮಜಾ ಮಾಡಬಹುದು ಎಂಬುದು ಮಕ್ಕಳ ಮನಸ್ಸಿನಲ್ಲಿರುತ್ತದೆ. ಆದರೆ ರಜೆಯ ಮಜವನ್ನು ಅನುಭವಿಸುವುದರ ಜೊತೆಗೆ ರಜೆಯನ್ನು ಅರ್ಥಪೂರ್ಣವಾಗಿ ಕಳೆಯುವುದು ಬಹಳ ಮುಖ್ಯವಾಗುತ್ತದೆ. ಬೇಸಿಗೆ ರಜೆಯ ಖುಷಿಯನ್ನು ಅನುಭವಿಸುವುದರ ಜೊತೆಗೆ ಹಲವು ಹವ್ಯಾಸಗಳನ್ನೂ ಪೋಷಕರಾದ ನಾವು ಮಕ್ಕಳಲ್ಲಿ ರೂಢಿಸುವುದರಿಂದ ಅವರ ವೈಯಕ್ತಿಕ ಹಾಗೂ ಶೈಕ್ಷಣಿಕ ಬದುಕಿಗೆ ಸಹಾಯವಾಗುತ್ತದೆ.

ಬೇಸಿಗೆ ರಜೆಯಲ್ಲಿ ಐತಿಹಾಸಿಕ ಹಾಗೂ ವಿಜ್ಞಾನದ ಹಿನ್ನೆಲೆ ಇರುವ ಪ್ರವಾಸಿ ತಾಣಗಳಿಗೆ ಮಕ್ಕಳನ್ನು ಕರೆದುಕೊಂಡು ಹೋಗಿ, ಸ್ಮಾರಕಗಳು, ಕೋಟೆಗಳ ಇತಿಹಾಸವನ್ನು ತಿಳಿಸುವುದು. ಇದರಿಂದ ಮಕ್ಕಳು ಕಲಿಯುವುದು ಸಾಕಷ್ಟಿರುತ್ತದೆ. ಅಲ್ಲಿ ಮಕ್ಕಳ ಕುತೂಹಲಕ್ಕೂ ಉತ್ತರ ಸಿಗುತ್ತದೆ. ಇದರೊಂದಿಗೆ ವಿಜ್ಞಾನ ಸಂಸ್ಥೆಗಳು, ತಾರಾಲಯದಂತಹ ಜಾಗಗಳನ್ನು ಮಕ್ಕಳಿಗೆ ತೋರಿಸುವುದರಿಂದ ಅವರಲ್ಲಿ ಕುತೂಹಲ ಹಾಗೂ ಆಸಕ್ತಿ ಹೆಚ್ಚುತ್ತದೆ. ಈ ಪ್ರವಾಸ ಮಕ್ಕಳಿಗೆ ಖುಷಿ ಕೊಡುವ ಜೊತೆಗೆ ಕಲಿಕೆಗೂ ನೆರವಾಗುವುದರಲ್ಲಿ ಸಂಶಯವಿಲ್ಲ. ಇದಲ್ಲದೇ ಇಂದಿನ ಮಕ್ಕಳಿಗೆ ಪರಿಸರ ಕಾಳಜಿ ಮೂಡಿಸಲು ಮನೆ ಎದುರಿನ ಜಾಗದಲ್ಲಿ ಅಥವಾ ಕುಂಡಗಳಲ್ಲಿ ಗಿಡಗಳನ್ನು ಬೆಳೆಸುವುದನ್ನು ಕಲಿಸುವುದೊಳಿತು. ಗಿಡ ನೆಡುವುದರಿಂದ ಅವುಗಳಿಗೆ ಪಾತಿ ಮಾಡುವುದು, ನೀರುಣಿಸುವುದು, ಕಳೆ ಕೀಳುವುದು ಹೀಗೆ ಪ್ರತಿ ಹಂತವನ್ನೂ ಅವರ ಕೈಯಿಂದಲೇ ಮಾಡಿಸುವುದರಿಂದ ಅವರಲ್ಲಿ ಪರಿಸರ ಆಸಕ್ತಿ ಮೂಡಿಸುವ ಜೊತೆಗೆ ಪರಿಸರದ ಬಗ್ಗೆ ಪ್ರಾಯೋಗಿಕವಾಗಿ ತಿಳಿದುಕೊಂಡ ಹಾಗೆಯೂ ಆಗುತ್ತದೆ. ಇದರಿಂದ ಆಟದೊಂದಿಗೆ ಪಾಠವೂ ಸಿಗುತ್ತದೆ. ಅಲ್ಲದೆ ತಾವು ಬೆಳೆಸಿದ ಗಿಡಗಳಲ್ಲಿ, ಹೂ ಹಣ್ಣು ಆಗುವುದನ್ನು ನೋಡಿದರೆ ಮಕ್ಕಳ ಸಂತೋಷವೂ ಇಮ್ಮಡಿಯಾಗಬಹುದು.

ಇತ್ತೀಚಿನ ಆಧುನಿಕ ಕಾಲದಲ್ಲಿ ಕಂಪ್ಯೂಟರ್, ಮೊಬೈಲ್‌ನಲ್ಲೇ ಕಳೆದು ಹೋಗ್ತಿದೆ ಮಕ್ಕಳ ಬೇಸಿಗೆ ರಜೆಯ ಅಮೂಲ್ಯ ಸಮಯ! ಇದರ ಹೊರತಾಗಿಯು ಮಕ್ಕಳಿಗೆ ಉತ್ತಮ ನೈತಿಕತೆ, ಸಾಮಾಜಿಕ ಬದ್ಧತೆ, ಸಂಗೀತ ವಾದ್ಯ ಕಲಿಕೆ, ಕರಕುಶಲತೆ, ದೈಹಿಕ ಮತ್ತು ಹೊರಾಂಗಣ ಚಟುವಟಿಕೆಗಳಲ್ಲಿ ಮಕ್ಕಳನ್ನು ತಲ್ಲೀನರಾಗುವಂತೆ ಪ್ರೇರೇಪಿಸುವುದರಿಂದ ಮಕ್ಕಳು ಬೇಸಿಗೆ ರಜೆಯನ್ನು ಅರ್ಥಪೂರ್ಣವಾಗಿ ಕಳೆಯಲು ನೆರವಾದಂತಾಗುತ್ತದೆ.

– ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

### ಶೌಚಾಲಯ ಶುದ್ಧೀಕರಣಗೊಳಿಸಿ





ಮಾನ್ಯರೇ,

ಮೈಸೂರಿನ ಗ್ರಂಥಾಲಯಗಳಲ್ಲಿ ಪ್ರಮುಖವಾಗಿರುವ ನಜರಬಾದ್‌ನ ಪೀಪಲ್ಸ್ ಪಾರ್ಕ್‌ನಲ್ಲಿರುವ 'ನಗರ ಕೇಂದ್ರ ಗ್ರಂಥಾಲಯ'ಕ್ಕೆ ಪ್ರತಿನಿತ್ಯ ನೂರಾರು ಸಂಖ್ಯೆಯಲ್ಲಿ ಓದುಗರು, ಚಿಕ್ಕಮಕ್ಕಳು, ಹಿರಿಯರು, ಅಧಿಕಾರಿಗಳು, ಸರ್ಕಾರಿ ನೌಕರರು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವವರು ಬರುತ್ತಿರುತ್ತಾರೆ. ಈ ಗ್ರಂಥಾಲಯದಲ್ಲಿ ಸಿಬ್ಬಂದಿಗಳಿಗೆ, ಮಹಿಳೆಯರಿಗೆ ಹಾಗೂ ಪುರುಷರಿಗೆ ಪ್ರತ್ಯೇಕ ಶೌಚಾಲಯಗಳಿದ್ದು ಅದರಲ್ಲಿ ಪುರುಷರ ಶೌಚಾಲಯವು ತುಂಬ ಹದಗೆಟ್ಟಿದೆ. ಗ್ರಂಥಾಲಯಕ್ಕೆ ಬರುವ ಪುರುಷ ಅಭ್ಯರ್ಥಿಗಳಿಗೆ ಬಹಳ ತೊಂದರೆಯಾಗುತ್ತಿರುವುದನ್ನು ಗಮನಿಸಿಯೂ ಸಹ ಗ್ರಂಥಾಲಯದ ಸಿಬ್ಬಂದಿ ನಿರ್ಲಕ್ಷ್ಯ ತೋರುತ್ತಿರುವುದು ಓದುಗರಿಗೆ ವಿಪರ್ಯಾಸವಾಗಿ ಪರಿಣಮಿಸಿದೆ. ಆದ್ದರಿಂದ ಈ ಗ್ರಂಥಾಲಯದ ಸಿಬ್ಬಂದಿ ಹಾಗೂ ಇದಕ್ಕೆ ಸಂಬಂಧಪಟ್ಟ ನಗರಪಾಲಿಕೆಯ ಅಧಿಕಾರಿಗಳು ಕೂಡಲೇ ಗ್ರಂಥಾಲಯಕ್ಕೆ ಬರುವ ಓದುಗರಿಗೆ ಇರುವ ಶೌಚಾಲಯದಲ್ಲಿ ಸ್ವಚ್ಛತೆಯೊಂದಿಗೆ ಹದಗೆಟ್ಟಿರುವ ಪದಾರ್ಥಗಳನ್ನು ಅಳವಡಿಸಿ ಆದರ್ಶ ಮೆರೆಯಬೇಕಾಗಿದೆ.

– ನಾಗೇಶ್, ಮಾನಸಗಂಗೋತ್ರಿ

### ಪಕ್ಷ ಬಿಡಲ್ಲ, ಬೇರೆ ಪಾರ್ಟಿಗೂ ಹೋಗಲ್ಲ...


ವಾಸು


ರಾಮದಾಸ್

ಮಾನ್ಯರೆ,

ನೇರ ನುಡಿಗೆ ಹೆಸರಾದ ಚಾಮರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ವಾಸು ಅವರು ನಾನು ಎಂದೆಂದಿಗೂ ಕಾಂಗ್ರೆಸ್ ಪಕ್ಷಕ್ಕೆ ಸೇರಿದವನು. ಪ್ರಸ್ತುತ ಚುನಾವಣೆಯಲ್ಲಿ ಯಾವುದೇ ಪಕ್ಷ ಅಥವಾ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಿಲ್ಲ, ಅಲ್ಲದೆ ಕಾಂಗ್ರೆಸ್ ಪಕ್ಷದಲ್ಲಿ ನಾಲ್ಕು ದಶಕಗಳಿಗೂ ಅಧಿಕ ಕಾಲದಿಂದ ಬದ್ಧತೆಯಿಂದ ಕೆಲಸ ಮಾಡುತ್ತಾ ಬಂದಿದ್ದೇನೆ. ಎಂದೆಂದಿಗೂ ಕಾಂಗ್ರೆಸ್ ಪಕ್ಷ ಬಿಡದೇ ಇರಲು ನಿರ್ಧರಿಸಿದ್ದೇನೆ ಎಂದಿದ್ದಾರೆ. ವಾಸು ಅವರ ತೀರ್ಮಾನ ಶ್ಲಾಘನೀಯ. ಹಾಗೆಯೇ ಶಾಸಕ ಎಸ್.ಎ. ರಾಮದಾಸ್ ಜವಾಬ್ದಾರಿಯುತ ಜನಪ್ರತಿನಿಧಿಯಾಗಿ ದೇಶ ಕಟ್ಟುವ ಕೆಲಸಕ್ಕಾಗಿ ಬಿಜೆಪಿ ಸಾಮಾನ್ಯ ಕಾರ್ಯಕರ್ತನಾಗಿರುತ್ತೇನೆ. ಮೂರು ದಶಕಗಳಿಂದ ಶಾಸಕನಾಗಿ, ಮಂತ್ರಿಯಾಗಿ, ಸಮಾಜದ ಸೇವೆ ಮಾಡುತ್ತಾ ಬಂದಿದ್ದೇನೆ. ಕೊನೆ ಉಸಿರಿರುವವರೆಗೂ ಬಿಜೆಪಿ ಪಕ್ಷದ ಪ್ರಾಥಮಿಕ ಸ್ಥಾನವನ್ನು ಬಿಡದೇ ಇರಲು ತೀರ್ಮಾನಿಸಿದ್ದೇನೆ ಎಂದು ಹೇಳಿರುವುದು ಶ್ಲಾಘನೀಯ. ರಾಜ್ಯದಲ್ಲಿ ಪಕ್ಷಾಂತರ ಪರ್ವ ಹಿಂದೆಂದಿಗಿಂತಲೂ ಹೆಚ್ಚಾಗಿದ್ದು, ರಾಜಕೀಯ ನಾಯಕರುಗಳು ತಮ್ಮ ಘನತೆ, ಗೌರವ ಕಳೆದುಕೊಳ್ಳುತ್ತಿರುವಾಗ ಮೈಸೂರಿನ ಚಾಮರಾಜ ಹಾಗೂ ಕೃಷ್ಣರಾಜ ಕ್ಷೇತ್ರದ ನಾಯಕರುಗಳಾದ ವಾಸು ಮತ್ತು ರಾಮದಾಸ್ ಅವರು ತಮಗೆ ಅಸ್ತಿತ್ವ ನೀಡಿದ ಪಕ್ಷದ ತೀರ್ಮಾನಕ್ಕೆ ಬದ್ಧರಾಗಿರುವುದು ತುಂಬಾ ಒಳ್ಳೆಯ ಸಂಗತಿ. ಮುಂದಿನ ದಿನಗಳಲ್ಲಿ ಅವರುಗಳ ರಾಜಕೀಯ ಭವಿಷ್ಯ ಉಜ್ವಲವಾಗಿರಲಿ.

– ಬೆಸಗರಹಳ್ಳಿ ರವಿ ಪ್ರಸಾದ್, ಕೆ.ಸಿ. ನಗರ, ಮೈಸೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

# ಅತಿಮಾನವನಾಗದೆ ಮಿತಿಮಾನವನಾದರೆ ಹಿತ!

'ಮಂಗನಿಂದ ಮಾನವ' ಎಂಬ ಡಾರ್ವಿನ್ ಸಿದ್ಧಾಂತ ಸರ್ವಜನಿತವಾಗಿದೆ. ಹೇಗಿದ್ದ ಹೇಗಾದ ಗೊತ್ತ ಅನ್ನುವ ರೀತಿಯಲ್ಲಿ ಆದಿಮಾನವನಿಂದ ಆಧುನಿಕ ಮಾನವನವರೆಗೆ ಊಹಿಸಲಾಗದಷ್ಟು ತನ್ನ ಜೀವನಕ್ರಮವನ್ನು ಬದಲಿಸಿಕೊಂಡಿದ್ದಾನೆ. ತನ್ನ ಬದುಕಿನ ಉನ್ನತಿಗಾಗಿ ಭೂಮಿಯ ಹಿತವನ್ನೇ ಹಾಳುಮಾಡುತ್ತಿದ್ದಾನೆ. ಇಂದು ಬಹುತೇಕ ಎಲ್ಲಾ ಪ್ರಾಣಿ–ಪಕ್ಷಿಗಳ ಮೇಲೆ ಪ್ರಭುತ್ವ ಸಾಧಿಸಿ ಭೂಮಿಯ ಮೇಲೆ ಸಾರ್ವಭೌಮನಂತೆ ಬದುಕುತ್ತಿದ್ದಾನೆ. ತನ್ನ ಅಗತ್ಯಗಳನ್ನು ಮೀರಿದ ಸೌಕರ್ಯಗಳನ್ನು ಕಂಡುಹಿಡಿದು ಬದುಕುತ್ತಿರುವ ಮನುಷ್ಯ ಇಡೀ ಸೌರಮಂಡಲದ ಇತರೆ ಗ್ರಹಗಳಿಗೆ, ಉಪಗ್ರಹಗಳಿಗೆ ಲಗ್ಗೆ ಇಡುವಷ್ಟು ಚಾಣಾಕ್ಷನಾಗಿದ್ದಾನೆ. ಮನುಷ್ಯನ ಈ ಎಲ್ಲಾ ಸಾಧನೆಗಳನ್ನು ಒಂದೆಡೆ ಪ್ರಶಂಸಿಸಬಹುದಾದರೂ ಇಂದು ಮನುಷ್ಯನಾಗಿ ಸಹಜ ಬದುಕನ್ನು ನಡೆಸುತ್ತಿರುವನೇ? ಎಂದು ಪ್ರಶ್ನಿಸಿಕೊಂಡರೆ, ಇಲ್ಲ. ಭೂಮಿಯ ಮೇಲೆ ಪ್ರತಿಯೊಂದು ಜೀವಿಯೂ ಅದರದೇ ಆದ ಪಾತ್ರ ನಿರ್ವಹಿಸುತ್ತದೆ. ಆದರೆ ಮನುಷ್ಯ ಮಾತ್ರ ಪ್ರಸಂಗ ಮೀರಿದ ಪಾತ್ರ ನಿರ್ವಹಿಸುತ್ತಾ, ಅಸಹಜ ಬದುಕನ್ನು ನಡೆಸುತ್ತಾ, ಅನೇಕ ಅನರ್ಥಗಳಿಗೆ ಕಾರಣನಾಗುತ್ತಿದ್ದಾನೆ.



> ಭೂಮಿಯ ಮೇಲೆ ಇರುವ ಎಲ್ಲಾ ಸ್ಥಿರ ವಸ್ತು, ಚರ ಪ್ರಾಣಿಗಳು ತನಗೋಸ್ಕರ ಸೃಷ್ಟಿಯಾಗಿರುವುದು ಎಂದು ಮನುಷ್ಯ ತಪ್ಪು ಭಾವಿಸಿದಂತಿದೆ. ಪ್ರತಿಯೊಂದು ಜೀವಿಗೂ ಭೂಮಿಯ ಮೇಲೆ ಬದುಕುವ ಹಕ್ಕಿದೆ. ಆದರೆ ಮನುಷ್ಯನ ಸ್ವೇಚ್ಛಾಚಾರದಿಂದ ಪ್ರಾಣಿಪಕ್ಷಿಗಳ ಬದುಕಿಗೆ ಸಂಚಕಾರ ಬಂದಿದೆ. ಜೇನು ಸವಿಯುವ ಆಸೆಗೋಸ್ಕರ ಜೇನುನೊಣದಂತೆ ಸಣ್ಣಕೀಟಗಳನ್ನು ನಾಶಪಡಿಸುತ್ತಾ ಬಂದರೆ ಪರಾಗಸ್ಪರ್ಶವಿಲ್ಲದೆ ಮುಂದೊಂದು ದಿನ ಆಹಾರಕ್ಕೆ ಹಾಹಾಕಾರವಾಗುವ ಸಾಧ್ಯತೆ ಇರುತ್ತದೆ.ಪ್ರಕೃತಿಯಲ್ಲಿ ಅಸಮತೋಲನ ಉಂಟಾಗುವಂತೆ ಮಾಡುವ ಮೂಲಕ ತನಗರಿವಿಲ್ಲದಂತೆ ತನ್ನ ಸಮಾಧಿಗೆ ತಾನೇ ಹಳ್ಳ ತೋಡುತ್ತಿದ್ದಾನೆ ಎಂದರೆ ತಪ್ಪಿಲ್ಲ. 'ವಿನಾಶ ಕಾಲೇ ವಿಪರೀತ ಬುದ್ಧಿ' ಎನ್ನುವಂತೆ ತನ್ನ ವಿನಾಶಕ್ಕೆ ತಾನೇ ನಾಂದಿ ಹಾಡಿದಂತಿದೆ. ಮುಂದಿನ ಪೀಳಿಗೆಯವರು ಸರಿಪಡಿಸಲಾಗದಷ್ಟು ಮಣ್ಣು, ಜಲ ಹಾಗೂ ಪರಿಸರಕ್ಕೆ ಹಾನಿಮಾಡಿದ್ದಾನೆ.

ಮಾನವ ಭೂಮಿಯ ಮೇಲೆ ಒಂದು ಜೀವಿಯಾಗಿ ಬದುಕುವ ಬದಲು ಅತಿಮಾನವನಾಗಿ ಬದುಕಲು ಬಯಸುತ್ತಿರುವುದು ಅಸಹಜ ಬೆಳವಣಿಗೆಗಳಿಗೆ ನಾಂದಿಯಾಗುತ್ತಿದೆ. ಮನುಷ್ಯ ಕಂಡುಹಿಡಿಯುವ ಪ್ರತಿಯೊಂದು ವಸ್ತುವಿನ ಹಿಂದೆ ಒಳಿತಿಗಿಂತ ಕೆಡಕೇ ಜಾಸ್ತಿ ಎನ್ನಬಹುದು. ತಾನೇ ಅನೇಕ ಸಮಸ್ಯೆಗಳನ್ನು ಸೃಷ್ಟಿಸಿ, ಪುನಃ ಆ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ತನ್ನ ಬುದ್ಧಿಶಕ್ತಿಯನ್ನು ಬಳಸಿ ಏನನ್ನೋ ಸಾಧಿಸಿದೆ ಎಂದು ಬೀಗುತ್ತಿದ್ದಾನೆ.

ಪ್ರಕೃತಿಯ ವಿರುದ್ಧವಾಗಿ ಮನುಷ್ಯ ಏನನ್ನೂ ಮಾಡಲಾಗುವುದಿಲ್ಲ ಎಂಬುದು ಸತ್ಯ ಸಂಗತಿ. ವಿಜ್ಞಾನ–ತಂತ್ರಜ್ಞಾನ ಕ್ಷೇತ್ರದಲ್ಲಿ ಎಷ್ಟೇ ಅನ್ವೇಷಣೆಗಳಾಗಿದ್ದರೂ ಪ್ರಕೃತಿಗೆ ತಲೆಬಾಗಲೇಬೇಕು. ಪ್ರಕೃತಿಯ ಸಮತೋಲನ ಕಾಪಾಡುವಲ್ಲಿ ಗಿಡ, ಮರ, ಕಾಡು, ನದಿ ಅಷ್ಟೇ ಅಲ್ಲದೇ ಎಲ್ಲಾ ಜೀವಿಗಳ ಪಾತ್ರವಿರುತ್ತದೆ. ಪ್ರತಿಯೊಂದು ಸಹ ಪ್ರಸಂಗವೊಂದರ ನಿರ್ದಿಷ್ಟ ಪಾತ್ರ ನಿರ್ವಹಣೆ ಮಾಡುವ ಅಲಿಖಿತ ನಿಯಮವಿರುತ್ತದೆ. ಬೇರೆಲ್ಲವುಗಳು ತಮ್ಮ ಗುಣಸ್ವಭಾವದಂತೆ, ನಿಸರ್ಗವು ತಮಗೆ ನೀಡಿರುವ ಪಾತ್ರವನ್ನು ಸೂಕ್ತವಾಗಿ ಇತಿಮಿತಿಯಲ್ಲಿ ನಿರ್ವಹಿಸುತ್ತಿದ್ದರೆ, ಮನುಷ್ಯ ಮಾತ್ರ ತನ್ನ ಪಾತ್ರವನ್ನು ಮೀರಿ ವರ್ತಿಸುತ್ತಿದ್ದಾನೆ, ಎಲ್ಲೆ ಮೀರಿ ಆರ್ಭಟಿಸುತ್ತಿದ್ದಾನೆ. ಅದರಿಂದ ತಾನು ತೊಂದರೆ ಅನುಭವಿಸುವುದಲ್ಲದೆ ಸಹಜೀವಿಗಳ ಜೀವಕ್ಕೂ ಗಂಡಾಂತರ ತಂದೊಡ್ಡಿದ್ದಾನೆ.

ಭೂಮಿಯ ಮೇಲೆ ಸ್ವರ್ಗವನ್ನು ಕಾಣಬಹುದಾದ ಅವಕಾಶವಿದ್ದರೂ, ತನ್ನ ದುರಾಸೆ, ದುರ್ಬುದ್ಧಿ, ಶೋಕಿ ಸ್ವಭಾವದಿಂದ ಅನೇಕ ಅಸ್ವಾಭಾವಿಕ ಸಂಗತಿಗಳನ್ನು ರೂಢಿಸಿಕೊಂಡು ಅಸಮತೋಲನವಾಗುವಂತೆ ಮಾಡಿ, ತಾನು ಕಷ್ಟನಷ್ಟ ಅನುಭವಿಸುವುದರ ಜೊತೆಗೆ ಏನೂ ತಪ್ಪುಮಾಡದ ಗಿಡ, ಮರ, ಪ್ರಾಣಿ–ಪಕ್ಷಿಗಳು ಬಲಿಯಾಗುವಂತೆ ಮಾಡುತ್ತಿದ್ದಾನೆ. ಮನುಷ್ಯನ ಹೊಟ್ಟೆಬಟ್ಟೆಗೆ ನಡೆಸುವ ಹೋರಾಟದಿಂದ ಪ್ರಕೃತಿಗೆ ಲುಕ್ಸಾನು ಆಗುತ್ತಿಲ್ಲ. ಬದಲಿಗೆ ಅವನ ಶೋಕಿಗೆ ಪ್ರಕೃತಿ ನಲುಗುತ್ತಿದೆ. ಮನುಷ್ಯನ ಹುಚ್ಚಾಟಗಳಿಗೆ ಅನೇಕ ಮೂಕಜೀವಿಗಳು ತಮ್ಮ ಅಮೂಲ್ಯವಾದ ಜೀವವನ್ನು ಬಲಿಕೊಡುತ್ತಿದ್ದಾವೆ. ಅನೇಕ ಪ್ರಾಣಿ–ಪಕ್ಷಿಗಳನ್ನು ವಧಿಸಿ ತಿನ್ನುವುದಷ್ಟೇ ಅಲ್ಲ ಅವುಗಳ ಚರ್ಮ ಸುಲಿದು ತಾನು ಧರಿಸಿ ವಿಕೃತಿ ಮೆರೆಯುತ್ತಾ, ಇವನು ಮಾನವನೋ? ದಾನವನೋ? ಎಂದು ಅನುಮಾನ ಪಡುವ ಹಾಗೆ ಬದುಕುತ್ತಿದ್ದಾನೆ.

ಯಾವುದೇ ಪ್ರಾಣಿಪಕ್ಷಿಗಳಿಗೆ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆ ಎಂಬುದಿಲ್ಲ. ಪ್ರಕೃತಿಯೇ ಅವುಗಳಿಗೆ ಪಾಠಶಾಲೆ ಹಾಗೂ ಪಾಕಶಾಲೆ. ಸಾವಿರಾರು ವರ್ಷಗಳಿಂದ ಆಹಾರಕ್ರಮ, ಜೀವನಕ್ರಮದಲ್ಲಿ ಅಷ್ಟೇನೂ ಮಾರ್ಪಾಡು ಇಲ್ಲದೆ ನಿಶ್ಚಿಂತೆಯಿಂದ ಬದುಕಲು ಬಯಸುತ್ತಿವೆ. ತಮ್ಮ ಜೀವಕ್ಕೆ ಕುತ್ತು ಬಂದರೂ ರಕ್ಷಿಸಿಕೊಳ್ಳಲಾಗದ ಪರಿಸ್ಥಿತಿಯಲ್ಲಿ ಅನೇಕ ಜೀವಿಗಳು ಇವೆ. ಅವುಗಳಿಗೆ ಅಷ್ಟೇನೂ ಅನ್ವೇಷಣಾ ಯುಕ್ತಿಯಾಗಲಿ ಅಥವಾ ಶಕ್ತಿಯಾಗಲಿ ಇರುವುದಿಲ್ಲ. ಆದರೆ ಮನುಷ್ಯನಿಗೆ ಅನ್ವೇಷಿಸಿರುವ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯು ಮನುಷ್ಯನನ್ನು ಕ್ರಿಯಾಶೀಲವಾಗಿ ಚಿಂತಿಸುವ ಹಾಗೂ ಕಾರ್ಯರೂಪಕ್ಕೆ ತರುವಲ್ಲಿ ಸಹಕಾರಿಯಾಗಿದೆ. ಆದರೆ ನಿತ್ಯ ತಿರುಗಿ ಅನ್ನ ಸಂಪಾದಿಸಿ ಉಣ್ಣುವ ಬದಲು ಕುಳಿತಲ್ಲಿಯೇ ಅನ್ನ ಸಂಪಾದಿಸಿ ಉಣ್ಣುವ ವ್ಯವಸ್ಥೆಯನ್ನು ಕಲ್ಪಿಸಲು ಸಹಕಾರಿಯಾಗಿರುವುದು ಇದೇ ಶಿಕ್ಷಣ ವ್ಯವಸ್ಥೆ ಎಂಬುದು ವಿಪರ್ಯಾಸದ ಸಂಗತಿ.

ಆದರೆ ಪ್ರತಿಯೊಂದು ಜೀವಿಯೂ ಪ್ರತಿದಿನ ತಮ್ಮ ಹೊಟ್ಟೆ ಹೊರೆಯಲು ಬೆಳಗಿನಿಂದಲೇ ಸಿದ್ಧತೆ ನಡೆಸುತ್ತವೆ. ಕಷ್ಟಪಟ್ಟು ಆಹಾರ ಸಂಪಾದಿಸಿ, ತನ್ನ ಕುಟುಂಬಕ್ಕೂ ಒದಗಿಸುವ ಹೊಣೆಯನ್ನು ನಿರ್ವಹಿಸುತ್ತವೆ. ತಮಗೆ ನಿಸರ್ಗ ಕೊಟ್ಟಿರುವ ಆಹಾರವನ್ನು ಹೊರತುಪಡಿಸಿ ಬೇರೆ ಆಹಾರ ಹತ್ತಿರದಲ್ಲಿದ್ದರೂ ಮುಟ್ಟುವುದಿಲ್ಲ. ಕೆಲವು ಸಸ್ಯಹಾರಿಯಾಗಿದ್ದರೆ, ಕೆಲವು ಮಾಂಸಾಹಾರಿಯಾಗಿರುತ್ತವೆ. ಕೆಲವು ಪ್ರಾಣಿಗಳು ಮಾತ್ರ ಎರಡನ್ನು ತಿನ್ನುತ್ತವೆ. ತಮ್ಮ ಅಂದಿನ ಆಹಾರಕ್ಕೆ ಮಾತ್ರ ಅವು ಅಲೆದಾಡುತ್ತವೆ. ಆದರೆ ಮನುಷ್ಯನ ಅಂದಿನ ಆಹಾರ ಅಂದೇ ಸಂಪಾದಿಸುವುದಿಲ್ಲ, ಮುಂದಿನ ದಿನದ ಆಹಾರವನ್ನು ಇಂದೇ ಸಂಪಾದಿಸುತ್ತಾನೆ, ಭದ್ರತೆ ದೃಷ್ಟಿಯಿಂದ ಆಹಾರವನ್ನು ಕೂಡಿಡುವ ದುರಾಸೆಯನ್ನು ಹೊಂದಿದ್ದಾನೆ. ಅಷ್ಟೇ ಅಲ್ಲದೆ ಸಸ್ಯಹಾರ, ಮಾಂಸಾಹಾರವಲ್ಲದೇ ತನ್ನ ನಾಲಗೆ ರುಚಿಗೆ ಕಟ್ಟುಬಿದ್ದು ಅನೇಕ ಹೊಸ ಬಗೆಯ ಆಹಾರಗಳನ್ನು ಕಂಡುಹಿಡಿಯುತ್ತಿದ್ದಾನೆ. ತನ್ನ ಕುಚೇಷ್ಟೆಯಿಂದ ಅಳಿವಿನಂಚಿನಲ್ಲಿರುವ ಪ್ರಾಣಿ–ಪಕ್ಷಿಗಳನ್ನು ನಿರ್ದಯವಾಗಿ ಕೊಂದು ತಿಂದು ತೇಗಿಬಿಡುತ್ತಿದ್ದಾನೆ.

ಆಹಾರವಾದ ನಂತರ ರಕ್ಷಣೆ ದೃಷ್ಟಿಯಿಂದ ವಾಸಿಸಲು ಒಂದು ಗೂಡನ್ನು ಹೊಂದಿಸಿಕೊಳ್ಳುವುದು ಪ್ರತಿಯೊಂದು ಜೀವಿ ಆದ್ಯತೆಯಾಗಿರುತ್ತದೆ. ತಾನು ಮಲಗಲು ಅವಶ್ಯವಿರುವಷ್ಟು ಮನೆಯನ್ನು ನಿರ್ಮಿಸುವ ಬದಲು ತನ್ನ ಸಂಪಾದನೆಗೆ ಅನುಗುಣವಾಗಿ ಬಹುವಿಸ್ತಾರದ ನಿವೇಶನಗಳಲ್ಲಿ ಮನೆ ನಿರ್ಮಿಸಿಕೊಳ್ಳುತ್ತಿದ್ದಾನೆ. ಒಂದು ಮನೆ ಸಾಲದು ಎಂದು ಭಾವಿಸಿ ಒಂದೇ ಕುಟುಂಬಕ್ಕೆ ನಾಲ್ಕಾರು ಮನೆ ನಿರ್ಮಿಸುವ ಬಯಕೆ ಹೊಂದಿರುತ್ತಾನೆ. ಮನೆ ನಿರ್ಮಾಣಕ್ಕೆ ಭೂಮಿಯನ್ನು ಅಗೆಯುತ್ತಾನೆ, ಕಲ್ಲುಗುಡ್ಡಗಳನ್ನು ಕರಗಿಸಿ ಸೈಜುಗಲ್ಲುಗಳನ್ನು ತರುತ್ತಾನೆ, ನದಿಗಳ ಒಡಲನ್ನು ಅಗೆದು ಮರಳನ್ನು ತರುತ್ತಾನೆ, ಮರಗಳನ್ನು ಕತ್ತರಿಸಿ ಕಿಟಕಿಬಾಗಿಲುಗಳನ್ನು ಮಾಡಿಸುತ್ತಾನೆ, ತನ್ನ ಮನೆ ನಿರ್ಮಾಣಕ್ಕೋಸ್ಕರ ನಿಸರ್ಗಮಾತೆಯ ಮನೆಯನ್ನೇ ಹಂತಹಂತವಾಗಿ ದುರ್ಬಲಗೊಳಿಸುತ್ತಿದ್ದಾನೆ. ಮುಂದೊಂದು ದಿನ ತನ್ನ ಮೇಲಿನ ಚಾವಣಿ ಕಳಚಿ ಬೀಳುತ್ತದೆ ಎಂಬ ಅಪಾಯದ ಅರಿವಿದ್ದರೂ ತಿಳಿಗೇಡಿಯಂತೆ ತನ್ನ ದುಸ್ಸಾಹಸಗಳನ್ನು ಮುಂದುವರಿಸಿದ್ದಾನೆ.

ಹುಟ್ಟಿದ ಪ್ರತಿಯೊಂದು ಜೀವಿಯೂ ಸಾಯಲೇಬೇಕು ಎಂಬುದು ಪ್ರಕೃತಿ ನಿಯಮ. ಪ್ರಾಣಿ–ಪಕ್ಷಿಗಳು, ಜಲಚರಗಳು, ಗಿಡ–ಮರಗಳು ಹುಟ್ಟಿನಿಂದ ಸಾಯುವವರೆವಿಗೆ ತಮ್ಮ ಶಕ್ತಿಯುಕ್ತಿಗೆ ತಕ್ಕದಾಗಿ ಬದುಕಿ ತಮ್ಮ ಆಯುಷ್ಯ ಮುಗಿದ ಮೇಲೆ ಮಣ್ಣಲ್ಲಿ ಮಣ್ಣಾಗಿಬಿಡುತ್ತವೆ. ಆದರೆ ಮನುಷ್ಯ ಮಾತ್ರ ತನ್ನ ಜೀವಿತಾವಧಿಗೆ ಮೀರಿದ ಸಂಪಾದನೆಯನ್ನು ಬಯಸುತ್ತಾನೆ, ತನ್ನ ಬದುಕಿಗಷ್ಟೇ ಅಲ್ಲದೇ ತನ್ನ ಮಕ್ಕಳು ಹಾಗೂ ಮೊಮ್ಮಕ್ಕಳಿಗೂ ಇರಲಿ ಎಂದು ಗಳಿಸಿ ಗುಡ್ಡೆ ಹಾಕಲು ಬಯಸುತ್ತಾನೆ. ಬಹುಶಃ ಯಾವುದೇ ಪ್ರಾಣಿಯು ತಮ್ಮ ಮುಂದಿನ ಪೀಳಿಗೆಗೆ ಆಸ್ತಿ ಮಾಡಿಹೋಗುವ ಪರಿಪಾಠ ಹೊಂದಿಲ್ಲ. ಈ ದುರಾಸೆಯಿಂದಲೇ ತನ್ನ ನೆಮ್ಮದಿಯನ್ನು ಕಳೆದುಕೊಳ್ಳುವುದಷ್ಟೇ ಅಲ್ಲದೆ ಅನ್ಯಾಯ, ಅಧರ್ಮ ಹಾಗೂ ಅನೀತಿ ಅನುಸರಿಸಿ ಅನೇಕರಿಗೆ ಮೋಸ ಮಾಡುತ್ತಾನೆ. ತನ್ನ ಹೊಟ್ಟೆ ತುಂಬಿಸಿಕೊಳ್ಳಲು ಮತ್ತೊಬ್ಬರು ಉಪವಾಸದಿಂದ ಸಾಯುವಂತೆ ಮಾಡುತ್ತಾನೆ, ತಾನು ಒಳ್ಳೆಯ ಬಟ್ಟೆ ಧರಿಸಲು ಮತ್ತೊಬ್ಬರು ಹರಿದ ಬಟ್ಟೆ ಧರಿಸುವಂತೆ ಮಾಡುತ್ತಾನೆ. ಹೆಸರಿಗೆ ಮನುಷ್ಯ ಎಂದು ಕರೆಯಿಸಿಕೊಂಡರು ಮನುಷ್ಯತ್ವವೇ ಇಲ್ಲದ ಪ್ರಾಣಿಯಂತೆ ವರ್ತಿಸಿಬಿಡುತ್ತಾನೆ.

ಮಾನವೀಯತೆ ಮನುಷ್ಯನಿಗೆ ಮಾತ್ರ ಇದೆ ಎಂಬುದು ತಪ್ಪು ಅಭಿಪ್ರಾಯ. ಮನುಷ್ಯನ ಅರ್ಧದಷ್ಟು ಜ್ಞಾನವಿಲ್ಲದ ಅನೇಕ ಜೀವಿಗಳು ಮನುಷ್ಯನಿಗಿಂತ ಉತ್ತಮ ಮನೋಭಾವಗಳನ್ನು ಹೊಂದಿರುತ್ತವೆ. ಸ್ವಾರ್ಥ ಹಾಗೂ ದುರಾಸೆಯಿಂದ ಮತ್ತೊಬ್ಬರಿಗೆ ದ್ರೋಹ ಬಗೆಯುವ ದುಷ್ಟ ಮನೋಭಾವ ಮನುಷ್ಯನಲ್ಲಿ ಮಾತ್ರ ಕಾಣಲು ಸಾಧ್ಯ. ಸಾವಿರಾರು ವರ್ಷಗಳಿಂದ ಅನೇಕ ಗ್ರಂಥಗಳಿಂದ ಬಹು ವಿಧವಾದ ಪಾಠಗಳನ್ನು ಕಲಿಯುತ್ತಲೇ ಇದ್ದರೂ ಮನುಷ್ಯ ಇಂದಿಗೂ ಮನುಷ್ಯನಾಗದೇ ಇರುವುದು ವಿಪರ್ಯಾಸದ ಸಂಗತಿ. ಮಣ್ಣಿಗೆ ಸಂಸ್ಕಾರ ಕೊಟ್ಟರೆ ಮಡಿಕೆಯಾಗುತ್ತದೆ, ಸಗಣಿಗೆ ಸಂಸ್ಕಾರ ಕೊಟ್ಟರೆ ವಿಭೂತಿಯಾಗುತ್ತದೆ, ಚಿನ್ನಕ್ಕೆ ಸಂಸ್ಕಾರ ಕೊಟ್ಟರೆ ಒಡವೆಯಾಗುತ್ತದೆ, ಮನುಷ್ಯನಿಗೆ ಸಂಸ್ಕಾರ ಕೊಟ್ಟರೆ ಮಹಾದೇವನಾಗಬೇಕು, ಆದರೆ ಮಾನವನಾಗುವ ಬದಲು ದಾನವನಾಗುತ್ತಿರುವುದು ದುರದೃಷ್ಟಕರ.

ಮನುಷ್ಯ ತನ್ನ ದಾನವಗುಣಗಳನ್ನು ಮುಚ್ಚಿ ಪ್ರಪಂಚಕ್ಕೆ ಸುಂದರವಾಗಿ ಕಾಣಲು ಅನೇಕ ರೀತಿಯ ಧಿರಿಸು, ಸೌಂದರ್ಯವರ್ಧಕಗಳನ್ನು ಬಳಸುತ್ತಾನೆ. ಅನೇಕ ಗಿಡಮೂಲಿಕೆಗಳಲ್ಲದೆ, ಪ್ರಾಣಿಪಕ್ಷಿಗಳನ್ನು ಕೊಂದು ಅಲಂಕಾರಿಕ ವಸ್ತುಗಳನ್ನಾಗಿ ಧರಿಸುತ್ತಾನೆ. ಆದರೆ ಸತ್ಯ ಸಂಗತಿ ಏನೆಂದರೆ ಮನುಷ್ಯನ ಶರೀರದಲ್ಲಿ ಯಾವ ಸೌಂದರ್ಯವೂ ಇರುವುದಿಲ್ಲ. ಸೌಂದರ್ಯ ಇರುವುದು ವ್ಯಕ್ತಿಯ ಕರ್ಮದಲ್ಲಿ, ವ್ಯಕ್ತಿಯ ವಿಚಾರದಲ್ಲಿ, ಅವನ ಮಾತಿನಲ್ಲಿ, ಅವನ ವ್ಯವಹಾರದಲ್ಲಿ, ಅವನ ಸಂಸ್ಕಾರದಲ್ಲಿ, ಅವನ ಚಾರಿತ್ರ್ಯದಲ್ಲಿ, ಯಾರ ಜೀವನದಲ್ಲಿ ಇವೆಲ್ಲವೂ ಇವೆಯೋ ಅವನು ಪ್ರಪಂಚದಲ್ಲಿ ಅತಿ ಸುಂದರ ವ್ಯಕ್ತಿಯಾಗಿ ಕಾಣುತ್ತಾನೆ.

ಭೂಮಿಯ ಮೇಲೆ ಇರುವ ಎಲ್ಲಾ ಸ್ಥಿರ ವಸ್ತು, ಚರ ಪ್ರಾಣಿಗಳು ತನಗೋಸ್ಕರ ಸೃಷ್ಟಿಯಾಗಿರುವುದು ಎಂದು ಮನುಷ್ಯ ತಪ್ಪು ಭಾವಿಸಿದಂತಿದೆ. ಪ್ರತಿಯೊಂದು ಜೀವಿಗೂ ಭೂಮಿಯ ಮೇಲೆ ಬದುಕುವ ಹಕ್ಕಿದೆ. ಆದರೆ ಮನುಷ್ಯನ ಸ್ವೇಚ್ಛಾಚಾರದಿಂದ ಪ್ರಾಣಿಪಕ್ಷಿಗಳ ಬದುಕಿಗೆ ಸಂಚಕಾರ ಬಂದಿದೆ. ಜೇನು ಸವಿಯುವ ಆಸೆಗೋಸ್ಕರ ಜೇನುನೊಣದಂತೆ ಸಣ್ಣಕೀಟಗಳನ್ನು ನಾಶಪಡಿಸುತ್ತಾ ಬಂದರೆ ಮುಂದೊಂದು ಪರಾಗಸ್ಪರ್ಶವಿಲ್ಲದೆ ಮುಂದೊಂದು ದಿನ ಆಹಾರಕ್ಕೆ ಹಾಹಾಕಾರವಾಗುವ ಸಾಧ್ಯತೆ ಇರುತ್ತದೆ. ಪ್ರಕೃತಿಯಲ್ಲಿ ಅಸಮ ತೋಲನ ಉಂಟಾಗುವಂತೆ ಮಾಡುವ ಮೂಲಕ ತನಗರಿವಿಲ್ಲದಂತೆ ತನ್ನ ಸಮಾಧಿಗೆ ತಾನೇ ಹಳ್ಳತೋಡು ತ್ತಿದ್ದಾನೆ ಎಂದರೆ ತಪ್ಪಿಲ್ಲ. 'ವಿನಾಶ ಕಾಲೇ ವಿಪರೀತ ಬುದ್ಧಿ' ಎನ್ನುವಂತೆ ತನ್ನ ವಿನಾಶಕ್ಕೆ ತಾನೇ ನಾಂದಿ ಹಾಡಿದಂತಿದೆ. ಮುಂದಿನ ಪೀಳಿಗೆಯವರು ಸರಿಪಡಿಸ ಲಾಗದಷ್ಟು ಮಣ್ಣು, ಜಲ ಹಾಗೂ ಪರಿಸರಕ್ಕೆ ಹಾನಿಮಾಡಿದ್ದಾನೆ.

ಈಗಲೂ ಮನುಷ್ಯ ಎಚ್ಚೆತ್ತುಕೊಳ್ಳದಿದ್ದರೆ ಇಂದಿನ ತಪ್ಪಿಗೆ ಮುಂದಿನ ಪೀಳಿಗೆಯವರು ಶಿಕ್ಷೆ ಅನುಭವಿಸುವುದನ್ನು ತಪ್ಪಿಸಲು ಸಾಧ್ಯವಿಲ್ಲ. ಇತಿಮಿತಿಯಲ್ಲಿ ಬದುಕುವ ಮನೋಭಾವ ಬೆಳೆಸಿಕೊಳ್ಳಬೇಕು. ದುರಾಸೆ, ದುರ್ಬುದ್ಧಿಯನ್ನು ಬಿಡಬೇಕು. ಪ್ರತಿಯೊಂದು ಜೀವಿಗೂ ಇರುವ ಹಕ್ಕನ್ನು ಕಾಪಾಡಬೇಕು. 'ವಸುದೈವ ಕುಟುಂಬಕಂ' ಎಂಬುದು ಕೇವಲ ಮನುಷ್ಯರಿಗಷ್ಟೇ ಸೀಮಿತವಾಗಿಸದೆ ಆ ವ್ಯಾಪ್ತಿಗೆ ಪ್ರಾಣಿಪಕ್ಷಿ, ಗಿಡಮರಗಳನ್ನು ಸೇರಿಸಿಕೊಂಡರೆ ಭುವಿಯು ಸ್ವರ್ಗ ಸದೃಶವಾಗುವುದರಲ್ಲಿ ಅನುಮಾನವೇ ಇಲ್ಲ. ಏನಂತೀರಿ?

**ಪದ ತಾಂಬೂಲ :** ಅತೀತನಾಗಿ ಮೆರೆಯುವ ಬದಲು ಮತಿವಂತನಾಗಿ ಬದುಕುವುದು ಮೇಲು!

# ಶುಶ್ರೂಷಕ ವೃತ್ತಿಯಲ್ಲಿ ಸೇವಾ ಮನೋಭಾವದಿಂದಷ್ಟೇ ತೃಪ್ತಭಾವವಿದೆ: ಡಾ.ಟಿ. ದಿಲೀಪ್ ಕುಮಾರ್

ಮೈಸೂರು, ಏ.23– ಶುಶ್ರೂಷಕ ವೃತ್ತಿ ಆರಂಭದಲ್ಲಿ ಕಷ್ಟವೆನಿಸಿದರೂ ಅದರಲ್ಲಿನ ಸೇವಾ ಮನೋಭಾವನೆಯನ್ನು ಅರಿತಾಗ ತೃಪ್ತಭಾವ ಮೂಡುತ್ತದೆ ಎಂದು ನವದೆಹಲಿಯ ಭಾರತೀಯ ಶುಶ್ರೂಷ ಮಂಡಳಿಯ ಅಧ್ಯಕ್ಷ ಡಾ. ಟಿ. ದಿಲೀಪ್ ಕುಮಾರ್ ಹೇಳಿದ್ದಾರೆ.

ಚಾಮರಾಜನಗರದಲ್ಲಿ ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ಜೆಎಸ್‌ಎಸ್ ನರ್ಸಿಂಗ್ ಕಾಲೇಜು ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ತಿಳಿಸಿದರು.

ವಿದ್ಯಾಭ್ಯಾಸದ ಆರಂಭದ ದಿನದಿಂದಲೇ ನರ್ಸಿಂಗ್ ವಿದ್ಯಾಭ್ಯಾಸದಲ್ಲಿ ಶಿಸ್ತು ಇರಬೇಕು. ಆರೋಗ್ಯ ಕ್ಷೇತ್ರದಲ್ಲಿ ನರ್ಸ್‌ಗಳ ಪಾತ್ರ ಅಪಾರವಾದುದು. ನರ್ಸ್‌ಗಳು ಆಸ್ಪತ್ರೆಯ ರಾಯಭಾರಿಗಳು. ಭಾರತದ ನರ್ಸಿಂಗ್ ಶಿಕ್ಷಣಕ್ಕೆ ವಿಶ್ವದಲ್ಲಿಯೇ ಅಪಾರ ಬೇಡಿಕೆ ಇದೆ. ಈ ಹುದ್ದೆಯಲ್ಲಿ ನಿರಂತರ ಅಧ್ಯಯನ ಅನಿವಾರ್ಯ. ಚಾಮರಾಜನಗರದ ಜನರಿಗೆ ಜೆಎಸ್‌ಎಸ್ ಬಿಎಸ್ಸಿ ನರ್ಸಿಂಗ್ ಕಾಲೇಜು ಅಮೂಲ್ಯವಾದ ಕೊಡುಗೆ. ಜೆಎಸ್‌ಎಸ್ ಸಂಸ್ಥೆಯು ಶಿಸ್ತಿನ ವಿದ್ಯಾಭ್ಯಾಸವನ್ನು ನೀಡುತ್ತಾ ಬಂದಿದೆ. ಸಮಾಜಕ್ಕೆ ಅಪಾರ ಕೊಡುಗೆ ನೀಡುತ್ತಿದೆ ಎಂದು ತಿಳಿಸಿದರು.

ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಶೀರ್ವಚನ ನೀಡುತ್ತಾ ಚಾಮರಾಜನಗರದ ಬಗ್ಗೆ ರಾಜೇಂದ್ರ ಮಹಾಸ್ವಾಮಿಗಳವರಿಗೆ ವಿಶೇಷವಾದ ಕಾಳಜಿ ಇತ್ತು. ಹೀಗಾಗಿಯೇ ಇಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಧರ್ಮದಲ್ಲಿ ಅತ್ಯಂತ ಉತ್ಕೃಷ್ಟ ಧರ್ಮ ಎಂದರೆ ಸೇವೆ. ಅಂತಹ ಸೇವಾ ಮನೋಭಾವವಿರುವ ಹುದ್ದೆಗೆ ವಿದ್ಯಾರ್ಥಿಗಳು ತಯಾರಾಗುತ್ತಿದ್ದೀರಿ, ಇದು ಅತ್ಯಂತ ಜವಾಬ್ದಾರಿಯುತವಾದ ಹುದ್ದೆ. ಆಸ್ಪತ್ರೆಗೆ ದಾಖಲಾದವರಿಗೆ ಮಾತ್ರ ನರ್ಸ್‌ಗಳ ಬೆಲೆ ಗೊತ್ತಿರುತ್ತದೆ. ನರ್ಸ್‌ಗಳಿಗೆ ರೋಗಿಗಳಲ್ಲಿ ಆತ್ಮವಿಶ್ವಾಸ ಮೂಡಿಸುವ ಸಾಮರ್ಥ್ಯವಿದೆ ಎಂದು ಹೇಳಿದರು.



ಬೆಂಗಳೂರಿನ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಎಂ.ಕೆ. ರಮೇಶ್ ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ದೇಶ ಬಡತನ, ಅನಕ್ಷರತೆ, ಅನಾರೋಗ್ಯ ಮುಂತಾದವುಗಳಿಂದ ಕೂಡಿತ್ತು. ಅನೇಕ ಸಾಂಕ್ರಾಮಿಕ ರೋಗಗಳ ತವರಾಗಿತ್ತು. ಇದನ್ನು ಹೋಗಲಾಡಿಸಲು ಸರ್ಕಾರದ ಜೊತೆ ಮಠಮಾನ್ಯಗಳು ಕೈ ಜೋಡಿಸಿದವು. ಅಂದಿನ ಕಾಲದಲ್ಲಿ ಭಕ್ತರಿಂದ ಬಂದ ಕಾಣಿಕೆಯಿಂದ ಶಿಕ್ಷಣ ಸಂಸ್ಥೆಗಳು ಮತ್ತು ಆಸ್ಪತ್ರೆಗಳನ್ನು ಪ್ರಾರಂಭಿಸಿ ಜಾತಿ ಭೇದವಿಲ್ಲದೆ ಬಡವ–ಬಲ್ಲಿದ ಎನ್ನದೆ ಸೇವೆ ಸಲ್ಲಿಸುತ್ತಿವೆ ಎಂದು ತಿಳಿಸಿದರು.

ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ.ಎಂ.ಆರ್. ಗಂಗಾಧರ್, ಜೆಎಸ್‌ಎಸ್ ದೇಶದಲ್ಲೇ ಒಳ್ಳೆಯ ಹೆಸರು ಮಾಡಿದ ಸಂಸ್ಥೆ. ಸುಮಾರು 300ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಗ್ರಾಮೀಣ ಪ್ರದೇಶಗಳಿಗೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಸಂಸ್ಥೆಯ ವಿದ್ಯಾರ್ಥಿಗಳು ಪ್ರಪಂಚದಾದ್ಯಂತ ಸೇವೆ ಸಲ್ಲಿಸುತ್ತಿದ್ದಾರೆ ಎಂದು ತಿಳಿಸಿದರು.

ಚಾಮರಾಜನಗರ ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಶ್ರೀಮತಿ ಕಾತ್ಯಾಯಿನಿದೇವಿ, ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡೀನ್ ಮತ್ತು ನಿರ್ದೇಶಕ ಡಾ. ಪಿ. ಸಂಜೀವ್, ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರಮಠ ಮಾತನಾಡಿದರು.

# ಕೆಆರ್ ಕ್ಷೇತ್ರದಲ್ಲಿ ಸುಂಡಹಳ್ಳಿ ಸೋಮಶೇಖರ ಸ್ಪರ್ಧೆ



ಮೈಸೂರು,ಏ.23(ಪಿಎಂ)– ಸ್ನೇಹಿತರು, ಬಂಧುಗಳು ಹಾಗೂ ವೀರಶೈವ ಲಿಂಗಾಯತ ಸಂಘಟನೆಗಳ ಮುಖಂಡರ ಒತ್ತಾಯದಂತೆ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ತಮಗೆ ಕ್ಷೇತ್ರದ ಮತದಾರರು ಮತ ನೀಡಬೇಕೆಂದು ಮೈಸೂರಿನ ಜೆಪಿ ನಗರದ ಸುಂಡಹಳ್ಳಿ ಸೋಮಶೇಖರ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಸದಸ್ಯನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಕಳೆದ 2018ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಮೇಲುಕೋಟೆ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದೆ. ಇದೀಗ ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ, ಕೃಷ್ಣರಾಜ ಕ್ಷೇತ್ರದಲ್ಲಿ ಪಕ್ಷೇತರನಾಗಿ ಸ್ಪರ್ಧಿಸಿದ್ದೇನೆ. ಕ್ಷೇತ್ರದ ಅಭಿವೃದ್ಧಿಯ ಆಶಯದಲ್ಲಿ ಸ್ಪರ್ಧಿಸಿದ್ದು, ನನ್ನನ್ನು ಗೆಲ್ಲಿಸಿ ಜನಸೇವೆಗೆ ಅವಕಾಶ ನೀಡಬೇಕೆಂದು ಕೋರಿದರು. ವೀರಶೈವ ಲಿಂಗಾಯತ ಸಮುದಾಯದ ಮುಖಂಡ ಬಿ.ಕೆ. ಶ್ರೀಕಂಠಸ್ವಾಮಿ ಗೋಷ್ಠಿಯಲ್ಲಿದ್ದರು.


*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

# ಸಾಂಸ್ಕೃತಿಕ ನಗರಿಯಲ್ಲಿ ಬಸವ ಜಯಂತಿ





ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕ್ರಾಂತಿಕಾರಿ ಬಸವಣ್ಣ ಅವರ ಜನ್ಮ ದಿನವನ್ನು ಭಾನುವಾರ ಆಚರಿಸಲಾಯಿತು. ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಜಿಲ್ಲಾಡಳಿತದ ಪರವಾಗಿ ಸರಳ ಮತ್ತು ಸಾಂಪ್ರದಾಯಿಕವಾಗಿ ಬಸವಣ್ಣನವರ ಜಯಂತಿ ಆಚರಿಸಿ, ಗೌರವ ಸಮರ್ಪಿಸಲಾಯಿತು. ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಗನ್‌ಹೌಸ್ ಬಳಿ ಇರುವ ಬಸವಣ್ಣನವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು. ಈ ವೇಳೆ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ, ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್‌ಪಿ ಸೀಮಾ ಲಾಟ್ಕರ್, ಉಪ ವಿಭಾಗಾಧಿಕಾರಿ ಕಮಲಾಬಾಯಿ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಗನ್‌ಹೌಸ್ ಬಳಿ ಇರುವ ಬಸವೇಶ್ವರ ಪ್ರತಿಮೆಗೆ ಭಾನುವಾರ ಬಸವ ಜಯಂತಿ ಪ್ರಯುಕ್ತ ಜಿಲ್ಲಾ ಜೆಡಿಎಸ್ ವತಿಯಿಂದ ಮಾಲಾರ್ಪಣೆ ಮಾಡಲಾಯಿತು. ಜಿಲ್ಲಾ ಜೆಡಿಎಸ್ ಉಪಾಧ್ಯಕ್ಷ ಕೆ.ಆರ್.ಮಿಲ್ ಶಿವಣ್ಣ, ನಗರ ಪ್ರಧಾನ ಕಾರ್ಯದರ್ಶಿ ಮಧುಸೂದನ್, ಎಂ.ಸುರೇಶ್, ಉಮಾಶಂಕರ್, ಪ್ರಮೀಳಾ ಅವರನ್ನು ಚಿತ್ರದಲ್ಲಿ ಕಾಣಬಹುದು.



ಮೈಸೂರಿನ ಕೆ.ಆರ್.ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ.ಸೋಮಶೇಖರ್ ಹಾಗೂ ಇನ್ನಿತರರು ಬಸವಣ್ಣನವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ನಮಿಸಿದರು. ಈ ವೇಳೆ ಮಾಜಿ ಮೇಯರ್ ಓಂಕಾರ್ ಪ್ರಸಾದ್, ಮುಖಂಡ ಪ್ರತಿಧ್ವನಿ ಪ್ರಸಾದ್ ಇನ್ನಿತರರನ್ನು ಕಾಣಬಹುದು.




ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ನಮಿಸಿದರು.



ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಹಾಗೂ ಜೆಡಿಎಸ್ ಅಭ್ಯರ್ಥಿ ಜಿ.ಟಿ.ದೇವೇಗೌಡ ಬಸವೇಶ್ವರರ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು.



ಬಸವ ಬಳಗಗಳ ವತಿಯಿಂದ ಹೊಸ ಮಠದ ಶ್ರೀ ಚಿದಾನಂದ ಸ್ವಾಮೀಜಿಗಳ ನೇತೃತ್ವದಲ್ಲಿ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಗೌರವ ಸಮರ್ಪಿಸಲಾಯಿತು.



ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ, ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವಿಸಿದರು. ಈ ಸಂದರ್ಭದಲ್ಲಿ ಮಾಜಿ ಮೇಯರ್ ಸುನಂದಾ ಪಾಲನೇತ್ರ, ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ಜಗದೀಶ್, ಜಗನ್ನಾಥ್, ಸಂತೋಷ್‌ಕುಮಾರ್ ಇನ್ನಿತರರು ಇದ್ದರು.


















## ವಿವಿಧೆಡೆ ಶಾಸಕ ಪುಟ್ಟರಾಜು ಬಿರುಸಿನ ಪ್ರಚಾರ



ಪಾಂಡವಪುರ, ಏ.23– ತಾಲೂಕಿನ ಬಿ.ಟಿ.ಕೊಪ್ಪಲು, ಎಣ್ಣೆಹೊಳೆಕೊಪ್ಪಲು ಹಾಗೂ ಚಲುವರಸನಕೊಪ್ಪಲು ಗ್ರಾಮದಲ್ಲಿ ಜೆಡಿಎಸ್ ಅಭ್ಯರ್ಥಿ, ಶಾಸಕ ಸಿ.ಎಸ್.ಪುಟ್ಟರಾಜು ಶನಿವಾರ ರಾತ್ರಿ ಬಿರುಸಿನ ಪ್ರಚಾರ ನಡೆಸಿದರು.

ಪುಟ್ಟರಾಜು ಬಿ.ಟಿ.ಕೊಪ್ಪಲು ಗ್ರಾಮದಲ್ಲಿ ಬನ್ನಾರಿಯಮ್ಮ ದೇವರಿಗೆ ಪೂಜೆ ಸಲ್ಲಿಸಿ ಪ್ರಚಾರ ನಡೆಸಿದರು. ಬಳಿಕ ಎಣ್ಣೆಹೊಳೆ ಕೊಪ್ಪಲು ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು. ನಂತರ ರೈತ ನಾಯಕ ದಿ.ಕೆ.ಎಸ್.ಪುಟ್ಟಣ್ಣಯ್ಯ, ಕಾವೇರಿ ಮಾತೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ವಿಶ್ವೇಶ್ವರಯ್ಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದ ಬಳಿಕ ಗ್ರಾಮದ ಹಲವು ಬೀದಿಗಳಲ್ಲಿ ಮತಯಾಚನೆ ನಡೆಸಿದರು. ಇದೇ ವೇಳೆ ಹಲವು ಮಂದಿ ಯುವಕರು, ಮುಖಂಡರು ರೈತ ಸಂಘ ತೊರೆದು ಜೆಡಿಎಸ್ ಪಕ್ಷ ಸೇರ್ಪಡೆಗೊಂಡರು. ನಂತರ ಚಲುವರಸನಕೊಪ್ಪಲು ಗ್ರಾಮದಲ್ಲಿ ತೆರೆದ ವಾಹನದಲ್ಲಿ ಮತಯಾಚಿಸಿದರು. ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಚುನಾವಣೆಯಲ್ಲಿ ಈ ಬಾರಿಯೂ ಅಧಿಕ ಮತಗಳಿಂದ ಗೆಲ್ಲುತ್ತೇನೆ. ಬಿ.ಟಿ.ಕೊಪ್ಪಲು, ಎಣ್ಣೆಹೊಳೆಕೊಪ್ಪಲು ಹಾಗೂ ಚಲುವರಸನಕೊಪ್ಪಲು ಗ್ರಾಮದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದೇನೆ. ಎಣ್ಣೆಹೊಳೆ ಕೊಪ್ಪಲು ಗ್ರಾಮಕ್ಕೆ ಕಾವೇರಿ ನದಿ ನೀರು ಬರದಂತೆ ತಡೆಗೋಡೆ ನಿರ್ಮಿಸಿದ್ದೇನೆ. ಕಾಶಿ ವಿಶ್ವನಾಥಸ್ವಾಮಿ ದೇವಸ್ಥಾನ ಜೀರ್ಣೋದ್ಧಾರ ಮಾಡಲಾಗಿದೆ. ಅಲ್ಲದೇ ಗ್ರಾಮಸ್ಥರು ಕ್ರೀಡಾಂಗಣ ಹಾಗೂ ತಡೆಗೋಡೆ ಪಕ್ಕ ಚರಂಡಿಗೆ ಈ ಹಿಂದೆಯೇ ಮನವಿ ಮಾಡಿದ್ದರು. ಅದರಂತೆ ಕ್ರಮವಹಿಸಲಾಗಿದೆ. ಮುಂದಿನ ದಿನಗಳಲ್ಲೂ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಲಾಗುವುದು. ಹೀಗಾಗಿ ಕ್ಷೇತ್ರದ ಜನತೆ ಅಭಿವೃದ್ಧಿಗಾಗಿ ನನಗೆ ಮತ ನೀಡಬೇಕೆಂದು ಮನವಿ ಮಾಡಿದರು.

ಈ ವೇಳೆ ಸಿಎಸ್‌ಪಿ ಪುತ್ರ ಸಿ.ಪಿ.ಶಿವರಾಜು, ಗ್ರಾಪಂ ಅಧ್ಯಕ್ಷ ಮಿಥುನ್, ಶ್ಯಾಮ್, ಯೋಗೇಶ್, ಮುಖಂಡರಾದ ಗವಿಗೌಡ, ಪ್ರವೀಣ್, ಸುನೀಲ್, ದೀಪು, ರಾಘವೇಂದ್ರ, ಶ್ರೀನಿವಾಸ್, ರಾಜೇಶ್, ಗಿರೀಶ್, ನಿರಂಜನ್, ಚಲುವರಾಜು ಇತರರಿದ್ದರು.

## ಬಿಜೆಪಿ ಅಭ್ಯರ್ಥಿ ಸಚ್ಚಿದಾನಂದ ಪ್ರಚಾರ


ಮಂಡ್ಯ, ಏ.23– ಬಿಜೆಪಿ ಅಭ್ಯರ್ಥಿ ಎಸ್.ಸಚ್ಚಿದಾನಂದ ತಾಲೂಕಿನ ಶ್ರೀರಂಗಪಟ್ಟಣ ಕ್ಷೇತ್ರದ ಹುಲಿಕೆರೆಕೊಪ್ಪಲು ಗ್ರಾಮದ ಮನೆ ಮನೆಗೆ ತೆರಳಿ ಬಿರುಸಿನ ಪ್ರಚಾರ ನಡೆಸಿದರು.

ಬಳಿಕ ಮಾತನಾಡಿದ ಅವರು, ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಈ ಬಾರಿ ಬಿಜೆಪಿ ಬೆಂಬಲಿಸಿ. ಕ್ಷೇತ್ರದ ಜನತೆ ಈ ಬಾರಿ ಬದಲಾವಣೆ ಬಯಸಿದ್ದು, ಬಿಜೆಪಿಗೆ ಉತ್ತಮ ವಾತಾವರಣವಿದೆ. ಆದ್ದರಿಂದ ಕ್ಷೇತ್ರದ ಮತದಾರರು ನನಗೆ ಆಶೀರ್ವಾದ ಮಾಡಬೇಕೆಂದು ತಿಳಿಸಿದರು.

ಕ್ಷೇತ್ರದ ಜನತೆ ಜೆಡಿಎಸ್ ಹಾಗೂ ಕಾಂಗ್ರೆಸ್ ಆಡಳಿತ ನೋಡಿ ಸಾಕಾಗಿದ್ದಾರೆ. ಬಿಜೆಪಿ ಅಭ್ಯರ್ಥಿಯಾದ ನನಗೊಂದು ಅವಕಾಶ ಕಲ್ಪಿಸಬೇಕು. ನಿಮ್ಮ ಮನೆ ಮಗನನ್ನು ಗೆಲ್ಲಿಸಿ ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸಿ ಎಂದರು.

ಇದೇ ವೇಳೆ ಗ್ರಾಮದ ಯೋಗೇಶ್, ಚೇತನ್, ಶೇಖರ್, ನಟರಾಜ್, ಗಿರಿಗೌಡ, ಆದರ್ಶ ಹರ್ಷಿತ್, ಶ್ರೀನಿವಾಸ, ತಿಮ್ಮೇಗೌಡ, ಶ್ರೀನಿವಾಸ, ಜವರೇಗೌಡ, ದಿಲೀಪ್, ಪ್ರಸನ್ನ, ತಿಮ್ಮೇಗೌಡ, ದೀಪಕ್,ಚನ್ನೆಗೌಡ, ವೆಂಕಟೇಶ್, ದೇವರಾಜ್, ಹೊನ್ನೆಗೌಡ, ಕಿರ್ತನ್ ಸೇರಿದಂತೆ ಮತ್ತಿತರರು ಕಾಂಗ್ರೆಸ್ ಹಾಗೂ ಜೆಡಿಎಸ್ ತೊರೆದು ಬಿಜೆಪಿಗೆ ಸೇರ್ಪಡೆಗೊಂಡರು.

ಶ್ರೀರಂಗಪಟ್ಟಣ ಕ್ಷೇತ್ರ ಅರಕೆರೆ ಹೋಬಳಿ ಬನ್ನಹಳ್ಳಿ ಗ್ರಾಮದ ಮನೆ ಮನೆಗಳಿಗೆ ತೆರಳಿ ಕ್ಷೇತ್ರದಲ್ಲಿ ಸಮಗ್ರ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ನಾನು ಇಟ್ಟಿರುವ ಈ ದಿಟ್ಟ ನಿಲುವಿಗೆ ನಿಮ್ಮೆಲ್ಲರ ಆಶೀರ್ವಾದ ನೀಡಿ ಪ್ರೋತ್ಸಾಹಿಸಿ ಎಂದು ಮನವಿ ಮಾಡಿದರು. ಅರಕೆರೆ ಹೋಬಳಿಯ ಬೆಟ್ಟಳ್ಳಿ, ಬಳ್ಳೆಕೆರೆ ಗ್ರಾಮದ ಮನೆ ಮನೆಗಳಿಗೆ ಭೇಟಿ ನೀಡಿ ಮತ ಬಾಂಧವರಲ್ಲಿ ನಿಮ್ಮ ಮನೆ ಮಗನಿಗೆ ಆಶೀರ್ವಾದ ನೀಡಿ ಪ್ರೋತ್ಸಾಹಿಸಿ ಎಂದರು.



ಈ ಸಂದರ್ಭ ಗ್ರಾಮದ ಹರೀಶ್, ಅನಿಲ್, ಪ್ರದೀಪ್, ರಮೇಶ್, ತಿಮ್ಮೇಗೌಡ, ನಂದೀಶ್, ಯೋಗೇಶ್, ಸತೀಶ್, ಅರುಣ್, ಅಭಿಷೇಕ, ಅಪ್ಪು, ದರ್ಶನ್, ಧನುಷ್, ವಿನೋದ್, ನವೀನ್, ವಿಜಯೇಂದ್ರ, ಅವಿನಾಶ್, ನಾಗೇಂದ್ರ, ಚರಣ್, ರೋಹಿತ್, ವಿನೋದ್, ಅಂದಾನಿಗೌಡ, ಶಂಕರೇಗೌಡ, ಗಿರಿಗೌಡ, ರುತಿಕ್, ವಿನಯ್, ವಿಕಾಸ್, ಸವಿತಾ, ಪ್ರಕೃತಿ, ಸುಷ್ಮಾ, ಗಗನ, ಲಕ್ಷ್ಮಮ್ಮ, ಜಯರಾಮೇಗೌಡ, ಪ್ರಕಾಶ್, ನೀಲಮ್ಮ, ಮಾಯಮ್ಮ, ವೀಣಾ, ಸುಶೀಲಮ್ಮ ಇನ್ನಿತರರು ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷ ತೊರೆದು ಬಿಜೆಪಿಗೆ ಸೇರ್ಪಡೆಗೊಂಡರು.

## ಯುವಕನ ಹತ್ಯೆಗೆ ಯತ್ನ

ಮದ್ದೂರು, ಏ.23– ತನ್ನ ಸಹೋದರಿಯನ್ನು ಪ್ರೀತಿಸುತ್ತಿದ್ದ ಎಂಬ ಕಾರಣಕ್ಕೆ ಆಕೆಯ ಅಣ್ಣ ಯುವಕನೋರ್ವನನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಲು ಯತ್ನಿಸಿರುವ ಘಟನೆ ತಾಲೂಕಿನ ಗೊರವನಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ಕಾಳಯ್ಯ ಅವರ ಪುತ್ರ ಅರುಣ (28) ಚಾಕುವಿನಿಂದ ಇರಿತಕ್ಕೊಳಗಾದವರು. ಈತನಿಗೆ ಮದ್ದೂರು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈತನಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡುತ್ತಿದ್ದು, ಪರಿಸ್ಥಿತಿ ಚಿಂತಾಜನಕವಾಗಿದೆ. ಘಟನೆ ಸಂಬಂಧ ಗೊರವನಹಳ್ಳಿಯ ವೆಂಕಟೇಶ್ ಪುತ್ರ ಭರತ್ ವಿರುದ್ಧ ಪೊಲೀಸರು ಕೊಲೆ ಯತ್ನ ಪ್ರಕರಣ ದಾಖಲಿಸಿಕೊಂಡಿದ್ದು, ಭರತ್ ತಲೆಮರೆಸಿಕೊಂಡ ಹಿನ್ನೆಲೆಯಲ್ಲಿ ಈತನ ತಂದೆ ವೆಂಕಟೇಶ್‌ನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಈ ಸಂಬಂಧ ಮದ್ದೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿ ಬಂಧನಕ್ಕೆ ಮುಂದಾಗಿದ್ದಾರೆ.

## ಶ್ರೀರಂಗಪಟ್ಟಣದಲ್ಲಿ ಸರಳ ಬಸವ ಜಯಂತಿ



ಶ್ರೀರಂಗಪಟ್ಟಣ, ಏ.23– ಪಟ್ಟಣದ ತಾಲೂಕು ಕಚೇರಿಯಲ್ಲಿ ಶ್ರೀಜಗಜ್ಯೋತಿ ಬಸವೇಶ್ವರ ಸಂಘ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ತಾಲೂಕು ಘಟಕದ ಸಹಯೋಗದೊಂದಿಗೆ ಬಸವೇಶ್ವರ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.

ಈ ವೇಳೆ ಪ್ರೊ.ಶಿವಕುಮಾರ್ ಮಾತನಾಡಿ, 12ನೇ ಶತಮಾನದಲ್ಲೇ ಬಸವಣ್ಣನವರು ಸಮಾಜದಲ್ಲಿದ್ದ ಜಾತಿ ವ್ಯವಸ್ಥೆ, ಮೇಲು–ಕೀಳು ಎಂಬ ಭಾವನೆಗಳನ್ನು ತೊಡೆದು ಹಾಕಿದರು. ಎಲ್ಲಾ ಸಮುದಾಯವನ್ನು ಸಮಾನವಾಗಿ ಕಂಡ ಅವರ ತತ್ವಾದರ್ಶಗಳು ಇಂದು ವಿಶ್ವದಾದ್ಯಂತ ಪ್ರಚಾರಗೊಂಡಿವೆ. ಹೀಗಾಗಿ ಪ್ರತಿಯೊಬ್ಬರೂ ಅವರ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಈ ವೇಳೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಬಿ.ನಾಗರಾಜ್, ಜಗಜ್ಯೋತಿ ಬಸವೇಶ್ವರ ಸಂಘ ಟೌನ್ ಅಧ್ಯಕ್ಷ ವಿ.ಎಂ.ಜಗದೀಶ್, ತಾಲೂಕು ಪ್ರಧಾನ ಕಾರ್ಯದರ್ಶಿ ಎಂ. ಶಿವಕುಮಾರ್, ಉಪಾಧ್ಯಕ್ಷ ಸಿ.ಎಸ್.ದೀಪಕ್, ಟೌನ್ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಪ್ರದೀಪ್ ಕುಮಾರ್, ಖಜಾಂಚಿ ಪರಶಿವಮೂರ್ತಿ, ನಿರ್ದೇಶಕರಾದ ಎಸ್.ಕುಮಾರ್, ಪ್ರಕಾಶ್, ಸೋಮಶೇಖರ್, ಶ್ರೀಕಂಠ, ಸೌಮ್ಯ ಹಾಗೂ ಕ್ಷೇತ್ರ ಆರೋಗ್ಯಾಧಿಕಾರಿ ಡಾ.ಬೆನ್ನೂರು ತಾಲೂಕು ಆಡಳಿತ ಸಿಬ್ಬಂದಿ ವರ್ಗ ಹಾಗೂ ವೀರಶೈವ ಮುಖಂಡರು ಇದ್ದರು.

## ಶಾಸಕ ಶ್ರೀನಿವಾಸ್ ಮನೆಗೆ ದೇವೇಗೌಡರ ಪುತ್ರ ರಮೇಶ್ ಭೇಟಿ: ಸಂಧಾನ ವಿಫಲ



ಮಂಡ್ಯ, ಏ.23– ಮಂಡ್ಯ ಕ್ಷೇತ್ರದ ಜೆಡಿಎಸ್ ಟಿಕೆಟ್ ಮನ್‌ಮುಲ್ ಅಧ್ಯಕ್ಷ ರಾಮಚಂದ್ರ ಅವರಿಗೆ ಕೊಟ್ಟ ಹಿನ್ನೆಲೆಯಲ್ಲಿ ಬಂಡಾಯ ಸಾರಿರುವ ಶಾಸಕ ಎಂ.ಶ್ರೀನಿವಾಸ್ ಮನೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಪುತ್ರ ಡಾ. ರಮೇಶ್ ಭೇಟಿ ನೀಡಿದರು.

ಡಾ.ರಮೇಶ್ ಜೊತೆಗೆ ಅಭ್ಯರ್ಥಿ ರಾಮಚಂದ್ರ, ಜೆಡಿಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಫ್ರುಲ್ಲಾ ಖಾನ್, ಮಾಜಿ ಶಾಸಕ ಕೆ.ಟಿ.ಶ್ರೀಕಂಠೇಗೌಡ ಭೇಟಿ ನೀಡಿದ್ದರು. ಈ ಸಂದರ್ಭ ರಮೇಶ್, ಶ್ರೀನಿವಾಸ್ ಮನವೊಲಿಸಲು ಯತ್ನಿಸಿದರಾದರೂ ಸಂಧಾನ ವಿಫಲವಾಯಿತು.

ಬಳಿಕ ಅಭ್ಯರ್ಥಿ ರಾಮಚಂದ್ರ, ಶ್ರೀನಿವಾಸ್ ಕಾಲಿಗೆ ಬಿದ್ದು ಆಶೀರ್ವಾದ ಪಡೆಯಲು ಯತ್ನಿಸಿದರಾದರೂ ರಾಮಚಂದ್ರರನ್ನು ಕಾಲಿಗೆ ಬೀಳಿಸಿಕೊಳ್ಳಲು ಶ್ರೀನಿವಾಸ್ ಹಿಂದೇಟು ಹಾಕಿದರು. ಬಂದ ದಾರಿಗೆ ಸುಂಕವಿಲ್ಲದೇ ಡಾ.ರಮೇಶ್, ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡದೇ ವಾಪಸ್ಸಾದರು. ಬಳಿಕ ಮಾತನಾಡಿದ ಶಾಸಕ ಶ್ರೀನಿವಾಸ್, ನನ್ನ ನಿರ್ಧಾರ ಅಚಲವಾಗಿದ್ದು, ನಾಮಪತ್ರ ಸಲ್ಲಿಕೆ ಮಾಡಿರುವ ವಿಜಯಾನಂದ, ಯೋಗೇಶ್, ಮಹಾಲಿಂಗು ಪೈಕಿ ಒಬ್ಬರು ಕಣದಲ್ಲುಳಿಯುವುದು ಖಚಿತವೆಂದರು.

## ಕಸಾಪ ಅಧ್ಯಕ್ಷ ರವಿಕುಮಾರ್ ವಿರುದ್ಧ ಎಫ್ಐಆರ್



ಮಂಡ್ಯ, ಏ.23– ಮಹಿಳೆಯೊಬ್ಬರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಕೆ.ರವಿಕುಮಾರ್ ಚಾಮಲಾಪುರ ವಿರುದ್ಧ ನಗರದ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಿದ್ಯಾನಗರದ ನಿವಾಸಿ ಎಸ್.ಬಿ.ರಶ್ಮಿ ಅವರು ರವಿಕುಮಾರ್ ವಿರುದ್ಧ ಶುಕ್ರವಾರ ದೂರು ನೀಡಿದ್ದು, ಏ.20 ರಂದು ರಾತ್ರಿ 8 ಗಂಟೆ ಸಮಯದಲ್ಲಿ ತಮ್ಮ ಮನೆ ಮುಂದೆ ಕಾರೊಂದು ನಿಲ್ಲಿಸಿದ್ದು, ತಮ್ಮ ಸಂಬಂಧಿಯೊಬ್ಬರನ್ನು ಬೆಂಗಳೂರಿನ ಏರ್‌ಪೋರ್ಟ್‌ಗೆ ಬಿಟ್ಟು ಬರುವ ಉದ್ದೇಶದಿಂದ ಗೇಟನ್ನು ತಳ್ಳಿ ಹೊರಗೆ ಬಂದೆನು. ಅಷ್ಟಕ್ಕೇ ಪಕ್ಕದ ಮನೆಯ ಮುಂದೆ ನಿಂತಿದ್ದ ರವಿಕುಮಾರ್ ಚಾಮಲಾಪುರ ಅವರು ತಕ್ಷಣ ಬಂದು ಗೇಟನ್ನು ಏಕೆ ತೆಗೆದೆ ಎಂದು ಪ್ರಶ್ನಿಸಿದಲ್ಲದೇ ಹಲ್ಲೆ ಮಾಡಲು ಮುಂದಾದರು. ಅವಾಚ್ಯ ಶಬ್ದಗಳಿಂದ ನಿಂದಿಸಿದ್ದೂ ಅಲ್ಲದೇ ಕೊಲೆ ಬೆದರಿಕೆಯೊಡ್ಡಿದರು. ಈತನ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ದೂರು ನೀಡಿದ್ದಾರೆ. ಈ ಸಂಬಂಧ ಪಶ್ಚಿಮ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ರವಿಕುಮಾರ್ ವಿರುದ್ಧ ಎಫ್ಐಆರ್ ದಾಖಲು ಮಾಡಿದ್ದಾರೆ.

## ನಿಮ್ಮ ಸೇವೆಗೆ ಅನುವು ಮಾಡಿಕೊಡಿ: ರಾಮಚಂದ್ರ



ಮಂಡ್ಯ, ಏ.23– ಮಂಡ್ಯ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ವರಿಷ್ಠರು ನನ್ನನ್ನು ಕಣಕ್ಕಿಳಿಸಿದ್ದು, ನನಗೊಂದು ಅವಕಾಶ ನೀಡುವ ಮೂಲಕ ನಿಮ್ಮ ಸೇವೆಗೆ ಅನುವು ಮಾಡಿಕೊಡಬೇಕು ಎಂದು ಜೆಡಿಎಸ್ ಅಭ್ಯರ್ಥಿ ಬಿ.ಆರ್.ರಾಮಚಂದ್ರ ಮನವಿ ಮಾಡಿದರು.

ತಾಲೂಕು ವ್ಯಾಪ್ತಿಯ ಹಲ್ಲೆಗೆರೆ, ಮೋಳೆ, ಚಂದಗಾಲು, ಚಲ್ಲನಾಯಕನಹಳ್ಳಿ, ದ್ಯಾಪಸಂದ್ರ ಆನಸೋಸಲು, ರಾಜೇಗೌಡನದೊಡ್ಡಿ, ಚಿಕ್ಕಬಳ್ಳಿ ಹಾಗೂ ತಂಗಳಗೆರೆ ಮತ್ತಿತರ ಗ್ರಾಮದಲ್ಲಿ ಜೆಡಿಎಸ್ ನಾಯಕರು ಏರ್ಪಡಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು. ಜೆಡಿಎಸ್ ವರಿಷ್ಠ ದೇವೇಗೌಡರು ನನಗೆ 'ಬಿ' ಫಾರಂ ನೀಡಿ ಅಭ್ಯರ್ಥಿ ಮಾಡಿದ್ದಾರೆ. ಇದರಿಂದ ಇತರ ಟಿಕೆಟ್ ಆಕಾಂಕ್ಷಿಗಳಿಗೆ ಬೇಸರವಾಗಿದೆ. ಆದರೂ ಪಕ್ಷ ನೀಡಿರುವ ಜವಾಬ್ದಾರಿ ಹೊತ್ತು, ಮಂಡ್ಯ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಮುಂದಾಗುವೆ ಎಂದರು. ನಂತರ ಬಿ.ಆರ್.ರಾಮಚಂದ್ರ ಅವರು ಮನೆ ಮನೆಗೆ ತೆರಳಿ ಪ್ರಚಾರ ನಡೆಸಿ ಮತಯಾಚಿಸಿದರು.




### ಅಂಕಪಟ್ಟಿ ವಿವರ

| ತಂಡ | ಪಂದ್ಯಗಳು | ಗೆಲುವು | ಸೋಲು | ಡ್ರಾ | ಅಂಕ |
|---|---|---|---|---|---|
| ಸಿಎಸ್‌ಕೆ | 7 | 5 | 2 | 0 | 10 |
| ರಾಜಸ್ಥಾನ್ | 7 | 4 | 3 | 0 | 8 |
| ಲಕ್ನೋ | 7 | 4 | 3 | 0 | 8 |
| ಗುಜರಾತ್ | 6 | 4 | 2 | 0 | 8 |
| ಆರ್‌ಸಿಬಿ | 7 | 4 | 3 | 0 | 8 |
| ಪಂಜಾಬ್ | 7 | 4 | 3 | 0 | 8 |
| ಮುಂಬೈ | 6 | 3 | 3 | 0 | 6 |
| ಕೋಲ್ಕತ್ತಾ | 7 | 2 | 5 | 0 | 4 |
| ಎಸ್‌ಆರ್‌ಹೆಚ್ | 6 | 2 | 4 | 0 | 4 |
| ಡೆಲ್ಲಿ | 6 | 1 | 5 | 0 | 2 |






ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ಮಾವಿನಹಳ್ಳಿ ಗ್ರಾಮದ ಜೈ ಭೀಮ್ ಯುವಕರ ಸಂಘದ ಪದಾಧಿಕಾರಿಗಳು, ಯುವಕರು ಶಾಸಕ ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಈ ವೇಳೆ ಮಾವಿನಹಳ್ಳಿ ರಾಮೇಗೌಡ, ರಮೇಶ್, ರಾಜೇಶ್, ಅಭಿ, ವಕೀಲ ಪಾಲಾಕ್ಷ, ಜಯಪುರ ಗ್ರಾಪಂ ಸದಸ್ಯ ಜವರನಾಯ್ಕ್, ನಾಗರಾಜು, ಮಂಜುನಾಥ್, ಬೈರೇಶ್, ಮುತಾಲಿಕ್ ಮತ್ತಿತರರಿದ್ದರು.

## ರಾಜಸ್ಥಾನ್ ವಿರುದ್ಧ ಆರ್‌ಸಿಬಿಗೆ ರೋಚಕ ಗೆಲುವು

● ಗ್ಲೆನ್ ಮ್ಯಾಕ್ಸ್‌ವೆಲ್, ಫಾಫ್ ಡು ಪ್ಲೆಸಿಸ್ ಅಬ್ಬರ ● ಹಸಿರು ಜೆರ್ಸಿಯಲ್ಲಿ ಮಿಂಚಿದ ಕೊಹ್ಲಿ ಬಾಯ್ಸ್



ಬೆಂಗಳೂರು, ಏ.23– ಗ್ಲೆನ್ ಮ್ಯಾಕ್ಸ್‌ವೆಲ್ ಹಾಗೂ ಫಾಫ್ ಡುಪ್ಲೆಸಿಸ್ ಅವರ ಸ್ಫೋಟಕ ಅರ್ಧಶತಕಗಳ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು, ರಾಜಸ್ಥಾನ ರಾಯಲ್ಸ್ ವಿರುದ್ಧ 7 ರನ್ ರೋಚಕ ಜಯ ಸಾಧಿಸಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಸಿರು ಜರ್ಸಿ ತೊಟ್ಟು ಆಡಿದ ಪಂದ್ಯಗಳಲ್ಲಿ ಜಯ ದಾಖಲಿಸಿದಾಗಲೆಲ್ಲಾ ಪ್ಲೇಆಫ್‌ಗೆ ಅರ್ಹತೆ ಪಡೆದಿದೆ ಇದೀಗ ಐಪಿಎಲ್ 2023 ಟೂರ್ನಿಯಲ್ಲೂ ನಾಕ್‌ಔಟ್ ಹಂತಕ್ಕೆ ಕಾಲಿಡುವುದು ಖಚಿತ ಎಂಬ ಸುಳಿವಿನಂತೆ ಗೋ–ಗ್ರೀನ್ ಮಂತ್ರ ಪಠಿಸುತ್ತಾ ವಿರಾಟ್ ಕೊಹ್ಲಿ ನೇತೃತ್ವದಲ್ಲಿ ಆರ್‌ಸಿಬಿ ಸತತ 2 ಗೆಲುವು ದಾಖಲಿಸುವ ಮೂಲಕ ಅಂಕಪಟ್ಟಿಯಲ್ಲಿ ಮತ್ತೆ 5ನೇ ಸ್ಥಾನಕ್ಕೆ ಲಗ್ಗೆಯಿಟ್ಟಿದೆ.

ಇಲ್ಲಿನ ಎಂ.ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಆರ್‌ಸಿಬಿ ನೀಡಿದ 190 ರನ್‌ಗಳ ಸವಾಲಿನ ಗುರಿ ಬೆನ್ನತ್ತಿದ ರಾಜಸ್ಥಾನ ರಾಯಲ್ಸ್ ತಂಡದ ಆರಂಭ ಉತ್ತಮವಾಗಿರಲಿಲ್ಲ. ಆರಂಭಿಕ ಜೋಸ್ ಬಟ್ಲರ್ ಖಾತೆ ತೆರೆಯುವ ಮುನ್ನವೇ ವಿಕೆಟ್ ಒಪ್ಪಿಸಿದರು. 2ನೇ ವಿಕೆಟ್‌ಗೆ ಜೊತೆಯಾದ ಕನ್ನಡಿಗ ದೇವದತ್ ಪಡಿಕ್ಕಲ್ ಹಾಗೂ ಯಶಸ್ವಿ ಜೈಸ್ವಾಲ್ 98 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡವನ್ನು ಆರಂಭಿಕ ಆಘಾತದಿಂದ ಪಾರು ಮಾಡಿದರು. ಬಿರುಸಿನ ಬ್ಯಾಟಿಂಗ್ ಮಾಡಿದ ದೇವದತ್ತ ಪಡಿಕ್ಕಲ್ 34 ಎಸೆತಗಳಲ್ಲಿ 7 ಬೌಂಡರಿ ಹಾಗೂ ಒಂದು ಸಿಕ್ಸರ್ ಸಹಿತ 52 ರನ್ ಗಳಿಸಿ ಔಟಾದರು. ಇದರ ಬೆನ್ನಲ್ಲೇ ಯಶಸ್ವಿ ಜೈಸ್ವಾಲ್ 37 ಎಸೆತಗಳಲ್ಲಿ 5 ಬೌಂಡರಿ, 2 ಸಿಕ್ಸರ್ ಒಳಗೊಂಡ 47 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ನಾಯಕ ಸಂಜು ಸ್ಯಾಮ್ಸನ್ 22, ಧ್ರುವ್ ಜುರೇಲ್ 34 ರನ್ ಗಳಿಸಿ ಪ್ರತಿರೋಧ ಒಡ್ಡಿದರಾದರೂ ತಂಡಕ್ಕೆ ಜಯ ತಂದು ಕೊಡುವಲ್ಲಿ ವಿಫಲರಾದರು. ಅಂತಿಮವಾಗಿ ರಾಜಸ್ಥಾನ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 182 ರನ್ ಗಳಿಸಿತು. ಆರ್‌ಸಿಬಿ ಪರ ಹರ್ಷಲ್ ಪಟೇಲ್ 3, ಮೊಹಮ್ಮದ್ ಸಿರಾಜ್ ಹಾಗೂ ಡೇವಿಡ್ ವಿಲ್ಲಿ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಇದಕ್ಕೂ ಮೊದಲು ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಆರ್‌ಸಿಬಿ ಖಾತೆ ತೆರೆಯುವ ಮುನ್ನವೇ ವಿರಾಟ್ ಕೊಹ್ಲಿ ವಿಕೆಟ್ ಕಳೆದುಕೊಂಡಿತು. ನಂತರ ಬಂದ ಶಹಬಾಜ್ ಅಹ್ಮದ್ 2 ರನ್ ಗಳಿಸಲಷ್ಟೇ ಶಕ್ತರಾಗಿ ಪೆವಿಲಿಯನ್ ಸೇರಿದರು. ಆದರೆ 3ನೇ ವಿಕೆಟ್‌ಗೆ ಜೊತೆಯಾದ ಫಾಫ್ ಡು ಪ್ಲೆಸಿಸ್ ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ ಅಬ್ಬರದ ಬ್ಯಾಟಿಂಗ್ ನಡೆಸುವ ಮೂಲಕ ತಂಡಕ್ಕೆ ಆಸರೆಯಾದರು. ಇವರಿಬ್ಬರೂ ಕೇವಲ 66 ಎಸೆತಗಳಲ್ಲಿ 127 ರನ್‌ಗಳ ಜತೆಯಾಟವಾಡಿ ತಂಡದ ಬೃಹತ್ ಮೊತ್ತ ದಾಖಲಿಸುವ ಸೂಚನೆ ನೀಡಿದರಾದರೂ, ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಫಾಫ್ ಡು ಪ್ಲೆಸಿಸ್ 39 ಎಸೆತಗಳಲ್ಲಿ 2 ಸಿಕ್ಸ್, 8 ಬೌಂಡರಿ ಒಳಗೊಂಡ 62 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದು ತುದಿಯಲ್ಲಿ ಸ್ಫೋಟಕ ಬ್ಯಾಟಿಂಗ್ ನಡೆಸಿದ ಗ್ಲೆನ್ ಮ್ಯಾಕ್ಸ್‌ವೆಲ್ ಕೇವಲ 44 ಎಸೆತಗಳಲ್ಲಿ 6 ಬೌಂಡರಿ ಹಾಗೂ 4 ಸಿಕ್ಸರ್ ಸಹಿತ 77 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಇನ್ನಿಂಗ್ಸ್‌ನ ಅಂತಿಮ 5 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ಬಾಲ್ ಟು ಬಾಲ್ ರನ್ ಗಳಿಸಿದ ಆರ್‌ಸಿಬಿ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 189 ರನ್‌ಗಳ ಸವಾಲಿನ ಮೊತ್ತ ದಾಖಲಿಸಿತು. ರಾಜಸ್ಥಾನ್ ಪರ ಟ್ರೆಂಟ್ ಬೋಲ್ಟ್, ಸಂದೀಪ್ ಶರ್ಮಾ ತಲಾ 2, ಆರ್.ಅಶ್ವಿನ್ ಹಾಗೂ ಯಜುವೇಂದ್ರ ಚಹಲ್ ಒಂದೊಂದು ವಿಕೆಟ್ ಕಬಳಿಸಿದರು. ಗ್ಲೆನ್ ಮ್ಯಾಕ್ಸ್‌ವೆಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

## ಬಿಜೆಪಿ ಮುಖಂಡ ಜೆಪಿ ನಿರ್ಧಾರಕ್ಕೆ ಅಭಿಮಾನಿ ಬಳಗ ಬೆಂಬಲ



ಮೈಸೂರು,ಏ.23(ಪಿಎಂ)– ಚಲನಚಿತ್ರ ನಾಯಕ ನಟರೂ ಆದ ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್ (ಜೆಪಿ) ಅವರ ನಾಮಪತ್ರ ತಿರಸ್ಕೃತಗೊಂಡಿರುವುದು ಬೇಸರ ತಂದಿದ್ದು, ಅವರು ರಾಜಕೀಯವಾಗಿ ಯಾವುದೇ ನಿರ್ಧಾರ ಕೈಗೊಂಡರೂ ಅಖಿಲ ಕರ್ನಾಟಕ ಜೆ.ಪಿ. ಅಭಿಮಾನಿ ಬಳಗವು ಸಂಪೂರ್ಣ ಬೆಂಬಲ ನೀಡಲಿದೆ ಎಂದು ಬಳಗದ ರಾಜ್ಯಾಧ್ಯಕ್ಷೆ ಯಶೋಧ ರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಸಭಾ ಚುನಾವಣೆಯಲ್ಲಿ ಚಾಮರಾಜ ಕ್ಷೇತ್ರದಿಂದ ಸ್ಪರ್ಧಿಸಲು ಜೆಪಿಯವರು ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದರು. ಆದರೆ ಅವರ ನಾಮಪತ್ರ ತಿರಸ್ಕೃತಗೊಂಡಿದ್ದು, ಇದು ಅವರ ಅಭಿಮಾನಿಗಳಿಗೆ ಅತ್ಯಂತ ಬೇಸರ ಉಂಟು ಮಾಡಿದೆ ಎಂದರು.

ಕಳೆದ 25 ವರ್ಷಗಳಿಂದ ಬಿಜೆಪಿ ಪಕ್ಷ ಸಂಘಟನೆಗಾಗಿ ದುಡಿಯುತ್ತಿರುವ ಜೆಪಿಯವರಿಗೆ ಈವರೆಗೆ ಯಾವುದೇ ಸೂಕ್ತ ಸ್ಥಾನಮಾನ ನೀಡದಿರುವುದು ಬೇಸರ ತಂದಿದೆ. ಜೆಪಿಯವರು ನಟಿಸಿರುವ 'ದಿ ಸ್ಪರ್ಶಕ' ಸಿನಿಮಾ ಶೀಘ್ರ ಬಿಡುಗಡೆಯಾಗುತ್ತಿದ್ದು, ನಾಡಿನ ಜನತೆ ಈ ಚಿತ್ರವನ್ನು ವೀಕ್ಷಿಸಿ ಪ್ರೋತ್ಸಾಹಿಸಬೇಕೆಂದು ಕೋರಿದರು. ಮುಖಂಡರಾದ ಕೃಷ್ಣ, ಭಾರತಿ, ಪ್ರಜ್ವಲ್, ಮಂಜುನಾಥ್ ಗೋಷ್ಠಿಯಲ್ಲಿದ್ದರು.

## ಕೆಕೆಆರ್ ವಿರುದ್ಧ ಗೆದ್ದು ಅಗ್ರಸ್ಥಾನಕ್ಕೇರಿದ ಸಿಎಸ್‌ಕೆ




ಕೋಲ್ಕತ್ತಾ, ಏ.23– ಅಜಿಂಕ್ಯಾ ರಹಾನೆ, ಡೆವೋನ್ ಕಾನ್ವೆ ಹಾಗೂ ಶಿವಂ ದುಬೆ ಅವರುಗಳ ಭರ್ಜರಿ ಅರ್ಧಶತಕಗಳ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್, ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ 49ರನ್‌ಗಳ ಜಯ ಸಾಧಿಸಿದೆ. ಆ ಮೂಲಕ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಇಲ್ಲಿನ ಈಡನ್ ಗಾರ್ಡನ್ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಸಿಎಸ್‌ಕೆ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 235ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರ ಅಜಿಂಕ್ಯಾ ರಹಾನೆ ಕೇವಲ 29 ಎಸೆತಗಳಲ್ಲಿ 5 ಸಿಕ್ಸರ್, 6 ಬೌಂಡರಿ ಒಳಗೊಂಡ 71ರನ್ ಗಳಿಸಿ ಅಜೇಯರಾಗಿ ಉಳಿದರು. ಉಳಿದಂತೆ ಋತುರಾಜ್ ಗಾಯಕ್ವಾಡ್ 35, ಡೆವೋನ್ ಕಾನ್ವೆ 56, ಶಿವಂ ದುಬೆ 50, ರವೀಂದ್ರ ಜಡೇಜಾ 18 ರನ್ ಗಳಿಸಿದರು. ಕೆಕೆಆರ್ ಪರ ಕುಲ್ವಂತ್ ಖೆಜ್ರೋಲಿಯಾ 2, ವರುಣ್ ಚಕ್ರವರ್ತಿ ಹಾಗೂ ಸುಯೇಶ್ ಶರ್ಮಾ ತಲಾ ಒಂದೊಂದು ವಿಕೆಟ್ ಪಡೆದರು.

236 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಕೆಕೆಆರ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 186ರನ್ ಗಳಿಸಿತು. ತಂಡದ ಪರ ಜೇಸನ್ ರಾಯ್ 61, ವೆಂಕಟೇಶ್ ಅಯ್ಯರ್ 20, ನಿತೀಶ್ ರಾಣಾ 27, ರಿಂಕು ಶರ್ಮಾ 53 ರನ್ ಗಳಿಸಿದರು. ತುಷಾರ್ ದೇಶಪಾಂಡೆ, ಮಹೇಶ್ ತೀಕ್ಷಣ ತಲಾ 2, ಆಕಾಶ್ ಸಿಂಗ್, ಮೊಯಿನ್ ಅಲಿ, ರವೀಂದ್ರ ಜಡೇಜಾ ಹಾಗೂ ಮತೀಶ ಪತಿರಾನ ತಲಾ ಒಂದೊಂದು ವಿಕೆಟ್ ಪಡೆದರು. ಅಜಿಂಕ್ಯಾ ರಹಾನೆ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



# ಮಲಬಾರ್ ಗೋಲ್ಡ್ & ಡೈಮಂಡ್ಸ್‌ಗೆ ಬಾಲಿವುಡ್ ತಾರೆ ಅಲಿಯಾ ಭಟ್ ನೂತನ ಬ್ರ್ಯಾಂಡ್ ಅಂಬಾಸಿಡರ್



ಬೆಂಗಳೂರು,ಏ.23–ಜಾಗತಿಕ ಮಟ್ಟದಲ್ಲಿ 6ನೇ ಅತಿ ದೊಡ್ಡ ಆಭರಣ ರೀಟೆಲರ್ ಕಂಪನಿಯಾಗಿರುವ ಮಲಬಾರ್ ಗೋಲ್ಡ್ & ಡೈಮಂಡ್ಸ್, ವಿಶ್ವದ 10 ದೇಶಗಳಲ್ಲಿ 312 ಶೋರೂಂಗಳನ್ನು ಹೊಂದಿದ್ದು, ಇದೀಗ ಬಾಲಿವುಡ್‌ನ ಖ್ಯಾತ ತಾರೆ ಅಲಿಯಾ ಭಟ್ ಅವರನ್ನು ತನ್ನ ನೂತನ ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಕ ಮಾಡಿಕೊಂಡಿದೆ.

2012ರಲ್ಲಿ ಚಿತ್ರರಂಗಕ್ಕೆ ಕಾಲಿಟ್ಟ ಅಲಿಯಾ ಭಟ್ ಅವರು ವರ್ಷದಿಂದ ವರ್ಷಕ್ಕೆ ಖ್ಯಾತಿ ಗಳಿಸುತ್ತಾ ಕ್ಷಿಪ್ರವಾಗಿ ಖ್ಯಾತಿಯ ಉತ್ತುಂಗಕ್ಕೇರಿದ್ದಾರೆ. ಈ ಮೂಲಕ ದೇಶದ ಬಹು ಬೇಡಿಕೆಯ ನಟಿ ಎಂಬ ಹೆಗ್ಗಳಿಕೆ ಪಡೆದಿದ್ದಾರೆ. ತಮ್ಮ ಅತ್ಯದ್ಭುತ ನಟನೆ, ಸೌಮ್ಯ ಸ್ವಭಾವ ಮತ್ತು ಸ್ಟನ್ನಿಂಗ್ ಲುಕ್‌ನಿಂದ ಭಾರತದ ಅತ್ಯುತ್ತಮ ನಟಿ ಎನಿಸಿದ್ದಾರೆ. ಹಾರ್ಟ್ ಆಫ್ ಸ್ಟೋನ್ ಎಂಬ ಚಿತ್ರದ ಮೂಲಕ ಹಾಲಿವುಡ್ ಪ್ರವೇಶ ಮಾಡಿದ್ದು, ಈ ಚಿತ್ರ ಸದ್ಯದಲ್ಲಿಯೇ ಬಿಡುಗಡೆಯಾಗಲಿದೆ.

1993ರಲ್ಲಿ ಆರಂಭವಾದ ಮಲಬಾರ್ ಗ್ರೂಪ್ ಇದೀಗ ತನ್ನ 30ನೇ ವಾರ್ಷಿಕೋತ್ಸವವನ್ನು ಆಚರಿಸಿಕೊಳ್ಳುತ್ತಿದ್ದು, ಈ ಶುಭ ವೇಳೆಯಲ್ಲಿ ಅಲಿಯಾ ಭಟ್ ಅವರನ್ನು ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಕ ಮಾಡಿಕೊಂಡಿರುವ ವಿಚಾರವನ್ನು ಪ್ರಕಟಿಸಿದೆ. ಭಾರತ, ಯುಎಇ, ಕೆಎಸ್‌ಎ, ಕತಾರ್, ಬಹರೇನ್, ಒಮಾನ್, ಕುವೈತ್, ಮಲೇಷ್ಯಾ, ಸಿಂಗಾಪುರ ಮತ್ತು ಯುಎಸ್‌ಗಳಲ್ಲಿ ಶೋರೂಂಗಳನ್ನು ಹೊಂದಿರುವ ಮಲಬಾರ್ ಗ್ರೂಪ್ ಇದೀಗ ಅಲಿಯಾ ಭಟ್ ಅವರೊಂದಿಗೆ ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಕ ಮಾಡಿಕೊಳ್ಳುವ ಮೂಲಕ ಜಾಗತಿಕವಾಗಿ ಹೊಸ ಔಟ್‌ಲುಕ್ ನೀಡಲಿದೆ. ಈ ಮೂಲಕ ಯುಕೆ, ಆಸ್ಟ್ರೇಲಿಯಾ, ಕೆನಡಾ, ದಕ್ಷಿಣ ಆಫ್ರಿಕಾ, ಈಜಿಪ್ಟ್, ಬಾಂಗ್ಲಾದೇಶ, ಟರ್ಕಿ ಮತ್ತು ನ್ಯೂಜಿಲೆಂಡ್ ದೇಶಗಳಲ್ಲಿ ಹೊಸ ಮಾರುಕಟ್ಟೆಗಳನ್ನು ಪ್ರವೇಶಿಸುವತ್ತ ಹಾಗೂ ಹಾಲಿ ಇರುವ ಮಾರುಕಟ್ಟೆಗಳನ್ನು ಬಲವರ್ಧನೆ ಮಾಡುವತ್ತ ಚಿತ್ತ ಹರಿಸಿದೆ.

ಈ ವೇಳೆ ಅಲಿಯಾ ಭಟ್ ಮಾತನಾಡಿ, ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಂತಹ ಜಾಗತಿಕ ಬ್ರ್ಯಾಂಡ್‌ಗೆ ನಾನು ರಾಯಭಾರಿಯಾಗುತ್ತಿರುವುದು ಸಂತಸ ತಂದಿದೆ. ಭಾರತೀಯರು ಮತ್ತು ಭಾರತೀಯ ಉಪಖಂಡದ ಜನರಲ್ಲಿ ಅವರ ಸ್ವೀಕಾರವನ್ನು ಪ್ರತ್ಯಕ್ಷವಾಗಿ ಕಂಡ ನಂತರ ವಿದೇಶಗಳಲ್ಲಿಯೂ ಗಳಿಸಿರುವ ಅಗಾಧವಾದ ಯಶಸ್ಸು ಹೆಮ್ಮೆ ಎನಿಸುತ್ತಿದೆ. ನಾನು ಮಲಬಾರ್ ಕುಟುಂಬದ ಭಾಗವಾಗುತ್ತಿರುವುದಕ್ಕೆ ಅತ್ಯಂತ ಸಂತಸವೆನಿಸುತ್ತಿದೆ. ಮಲಬಾರ್ ಗೋಲ್ಡ್ & ಡೈಮಂಡ್ಸ್ ತಮ್ಮ ಮಹತ್ವಾಕಾಂಕ್ಷೆಯ ವಿಸ್ತರಣಾ ಯೋಜನೆಯನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಸಜ್ಜುಗೊಳ್ಳುತ್ತಿದ್ದು, ವಿಶ್ವಾದ್ಯಂತ ಆಭರಣ ಪ್ರಿಯರಲ್ಲಿ ತಮ್ಮ ವ್ಯಾಪ್ತಿಯನ್ನು ಹೆಚ್ಚಿಸಲು ಅವರೊಂದಿಗೆ ನಿಕಟವಾಗಿ ಕೆಲಸ ಮಾಡುವುದನ್ನು ನಾನು ಎದುರು ನೋಡುತ್ತಿದ್ದೇನೆ ಎಂದರು. ಮಲಬಾರ್ ಗ್ರೂಪ್‌ನ ಅಧ್ಯಕ್ಷ ಎಂ.ಪಿ.ಅಹ್ಮದ್ ಮಾತನಾಡಿದರು.

# ನಾಳೆ ಮೈಸೂರಲ್ಲಿ ಜೆಡಿಎಸ್ ಕಾರ್ಯಕರ್ತರ ಸಭೆ



ಮೈಸೂರು, ಏ.23(ಪಿಎಂ)–ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಏ.25ರಂದು ಜೆಡಿಎಸ್ ಪಕ್ಷದ ವತಿಯಿಂದ ಚಾಮರಾಜ ಕ್ಷೇತ್ರ ಮತ್ತು ಕೃಷ್ಣರಾಜ ಕ್ಷೇತ್ರದ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಸಭೆ ಹಮ್ಮಿಕೊಳ್ಳಲಾಗಿದ್ದು, ಪ್ರತ್ಯೇಕವಾಗಿ ನಡೆಯುವ ಎರಡೂ ಸಭೆಗಳಲ್ಲಿ ಜೆಡಿಎಸ್ ನಾಯಕರೂ ಆದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪಾಲ್ಗೊಳ್ಳಲಿದ್ದಾರೆ.

ಅಂದು ಬೆಳಗ್ಗೆ 9.30ಕ್ಕೆ ಮೈಸೂರಿನ ವಿಜಯನಗರದ ಸಪ್ತಪದಿ ಕಲ್ಯಾಣ ಮಂಟಪದಲ್ಲಿ ಚಾಮರಾಜ ಕ್ಷೇತ್ರದ ಸಭೆಯನ್ನು ಹೆಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಿ, ಮಾತನಾಡಲಿದ್ದಾರೆ. ಚಾಮರಾಜ ಕ್ಷೇತ್ರದ ಅಭ್ಯರ್ಥಿ ಹೆಚ್.ಕೆ.ರಮೇಶ್, ಶಾಸಕರಾದ ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಅಂತೆಯೇ ಅಂದು ಮಧ್ಯಾಹ್ನ 12ಕ್ಕೆ ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಕೃಷ್ಣರಾಜ ಕ್ಷೇತ್ರದ ಸಭೆ ನಡೆಯಲಿದ್ದು, ಹೆಚ್.ಡಿ.ಕುಮಾರ ಸ್ವಾಮಿ ಉದ್ಘಾಟಿಸಲಿದ್ದಾರೆ. ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕೆ.ವಿ.ಮಲ್ಲೇಶ್, ಪಕ್ಷದ ಶಾಸಕರು, ಮುಖಂಡರು ಮತ್ತು ಕಾರ್ಯಕರ್ತರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



**ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಸಿದ್ದೇಗೌಡ, ಕೃಷ್ಣರಾಜ ಕ್ಷೇತ್ರದ ಅಭ್ಯರ್ಥಿ ಎಂ.ಕೆ.ಸೋಮಶೇಖರ್, ಚಾಮರಾಜ ಕ್ಷೇತ್ರದ ಅಭ್ಯರ್ಥಿ ಹರೀಶ್‌ಗೌಡ ಅವರು ಮೈಸೂರು ಕೋರ್ಟ್‌ನ ಆವರಣದಲ್ಲಿ ವಕೀಲರನ್ನು ಭೇಟಿ ಮಾಡಿ ಮತಯಾಚಿಸಿದರು. ಈ ವೇಳೆ ಕೆ.ಮರೀಗೌಡ, ಕೃಷ್ಣಕುಮಾರ್‌ಸಾಗರ್, ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಕಾರ್ಯದರ್ಶಿ ಉಮೇಶ್, ಹಿರಿಯ ವಕೀಲರಾದ ಶಿವಣ್ಣ, ಬಸವರಾಜು, ರಾಮಕೃಷ್ಣ, ಸುರೇಶ್, ಸುನೀಲ್, ಸವಿತ ಕಾಳೆ, ಮೈಸೂರು ಬಸವಣ್ಣ ಇನ್ನಿತರರಿದ್ದಾರೆ.**

# ಮತ್ತೆ ಮತ್ತೆ ನೆನಪಾಗುವ ಡಾ.ರಾಜ್





ಜೆ.ಬಿ.ರಂಗಸ್ವಾಮಿ
ನಿವೃತ್ತ ಪೊಲೀಸ್ ಅಧಿಕಾರಿ
ಮೊ : 94490–10009

## ಪ್ರಸಂಗ–1

ಅಶ್ವಮೇಧ ಚಿತ್ರದ ಗೀತೆ ಸಿದ್ಧವಾಗಿತ್ತು. ಯಾರಿಂದ ಹಾಡಿಸಿದರೆ ಚೆನ್ನ. ಅದರಲ್ಲಿನ ಧೀರೋದಾತ್ತ ಧಾಟಿಗೆ ರಾಜ್ ಕಂಠವಲ್ಲದೆ ಮತ್ತಾರದು ಸಾಟಿ?

ಸನ್ನಿವೇಶ, ಹಾಡಿನ ಧಾಟಿಯನ್ನು ವಿವರಿಸಿದ ಸಂಗೀತ ನಿರ್ದೇಶಕ ಸಂಗೀತರಾಜ್ ಅದು ಹಾಡುವಂತೆ ರಾಜ್‌ರನ್ನು ಕೋರಿಕೊಂಡರು.

'ಕೊನೆಯಲ್ಲಿ ಅಶ್ವಮೇಧ ಅಶ್ವಮೇಧಾ ಎಂದು ಏರು ಧನಿಯಲ್ಲಿ ದಬಾಯಿಸಿ ಹಾಡಲು ಈಗ ನನ್ನ ಕಂಠ ಸಹಕರಿಸದು, ಬೇಡಿ ಹಾಡಲಾರೆ' ಎಂದು ಡಾ.ರಾಜ್ ನಿರಾಕರಿಸಿಯೂ ಬಿಟ್ಟರು.

ಪೌರಾಣಿಕ ಮಟ್ಟಿನಲ್ಲಿರುವ ರೋಷತಪ್ತ ಭೀಭತ್ಸ ಗೀತೆಗೆ ರಾಜ್ ಮಾತ್ರ ಹಾಡಿ, ನ್ಯಾಯ ಒದಗಿಸಬಲ್ಲರು ಎಂಬುದು ಇಡೀ ಚಿತ್ರ ತಂಡದ ನಂಬಿಕೆ. ಡಾ.ರಾಜ್ ಸಾಕಷ್ಟು ಪೌರಾಣಿಕ, ಚಾರಿತ್ರಿಕ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದ ಗಾಯಕರು. ಈ ಗೀತೆಗೂ ಅವರೇ ಸರಿ. ಆದರೆ ಒಪ್ಪುತ್ತಿಲ್ಲ. ಚಿತ್ರತಂಡ ರಾಜ್‌ರ ಸಹೋದರ ವರದಣ್ಣನವರಲ್ಲಿ ಪರಿಸ್ಥಿತಿ ವಿವರಿಸಿತು.

ಗೀತೆಯ ಧಾಟಿ ಕೇಳಿದಾಗ, ಅಣ್ಣಾವರು ಸಮರ್ಥವಾಗಿ ಅದನ್ನು ಹಾಡಬಲ್ಲರು ಎಂದು ಅವರಿಗೂ ಅನ್ನಿಸಿತು. ಸಹೋದರನನ್ನು ಕಂಡು "ನಿನ್ನಿಂದ ಆಗುತ್ತೆ. ಹಾಡಪ್ಪಾ" ಎಂದರು ವರದಪ್ಪ.

'ನೀನೇನು ಹೇಳ್ತಿಯಪ್ಪಾ?. ಆಕಾಶವೇ ಮೇಲ್ಬೀಳಲಿ, ಭೂತಾಯಿಯೇ ಬಾಯ್ಬಿರಿಯಲಿ... ಇಲ್ಲಿಂದ ಮುಂದಕ್ಕೆ ಅದೇ ವೇಗದಲ್ಲಿ ಅದೇ ಜೋರತ್ತಿನಲ್ಲಿ ಹೋಗೋದಿಕ್ಕೆ ಆಗೋದಿಲ್ಲ. ನಂಗೂ ವಯಸ್ಸಾಗಿದೆ ಅನ್ನೋದನ್ನ ಮರೀಬೇಡ' ಅಂದರು ಡಾ.ರಾಜ್.

'ಇಲ್ಲ. ನಿನ್ನ ಕೈಲಿ ಆಗುತ್ತಪ್ಪಾ. ಯೋಚಿಸ್ಬೇಡಾ ಹಾಡು' ಎಂದು ಪಟ್ಟು ಹಿಡಿದು ಒಪ್ಪಿಸಿದರು ವರದಣ್ಣ.

ಕೊನೆಯ ಸಾಲುಗಳನ್ನು ರೌದ್ರಾವೇಶದಿಂದ ಹಾಡಬೇಕಾಗುತ್ತದೆ. ಅದಕ್ಕೆ ತಕ್ಕ ಆಂಗಿಕ ಅಭಿನಯವೂ ಇದ್ದರೆ ಇನ್ನೂ ಪರಿಣಾಮಕಾರಿಯಾಗಿ ಬರುತ್ತೆ. 'ಪೌರಾಣಿಕದಲ್ಲಿ ಗದೆ ಹಿಡಿದುಕೊಂಡು ನಾಲ್ಕು ಹೆಜ್ಜೆ ಹಾಕಿ ಮುಂದೆ ಬಂದು ಅಬ್ಬರಿಸಿ ಹೇಳ್ತೀರಲ್ಲಾ? ಆ ರಭಸದಲ್ಲೇ ಹಾಡಬೇಕು' ಎಂಬುದು ಸಂಗೀತ ನಿರ್ದೇಶಕರ ಕೋರಿಕೆ.

'ಹಾಗೇನೋ ಹಾಡಬಲ್ಲೆ. ಆದರೆ ಮೈಕ್ ಒಂದು ಕಡೆಗೆ ಫಿಕ್ಸ್ ಆಗಿರುತ್ತೆ. ನಾನು ಹೆಜ್ಜೆ ಹಾಕಿದರೆ ಧ್ವನಿ ಏರುಪೇರಾಗೋದಿಲ್ವೇ?' ಹೀಗೆ ತಾಂತ್ರಿಕ ಸಮಸ್ಯೆ ಮುಂದಿಟ್ಟರು ಡಾ.ರಾಜ್.

'ಅದನ್ನು ನಾವು ಹೇಗೋ ಮ್ಯಾನೇಜ್ ಮಾಡಿ ಕೊಳ್ತೀವಿ. ತಾವು ನಾಲ್ಕು ಹೆಜ್ಜೆ ಮುಂದೆ ಹಾಕಿ ಹಾಡಿಬಿಡಿ' ಛಬಕಿನ ವೇಗ ಸಿಕ್ಕ ಕುದುರೆಯಂತೆ ಲೀಲಾಜಾಲವಾಗಿ ರಾಜ್ ಹಾಡಿಬಿಟ್ಟರು. ಅಭಿನಂದಿಸಲೆಂದು ನಿರ್ದೇಶಕ ಸಿ.ಆರ್.ಸಿಂಹ ಎಲ್ಲರೂ ರಾಜ್ ಹತ್ತಿರ ಬಂದರು.

ರಾಜ್‌ರ ಕಣ್ಣುಗಳು ಕೆಂಪಾಗಿ ಧಗಧಗಿಸುತ್ತಿವೆ. ಮುಷ್ಟಿ ಹಿಡಿದಿದ್ದ ಕೈಗಳ ನರ ಉಬ್ಬಿವೆ. ಆವೇಶಭರಿತವಾದ ದೇಹ ಕಂಪಿಸುತ್ತಿದೆ. ಅವರ ಸ್ಥಿತಿ ನೋಡಿ ತಂಡದವರು ದಿಗ್ಭ್ರಮೆಗೊಂಡ ಒಂದೂ ಮಾತಾಡದೆ ದೂರದಲ್ಲೇ ನಿಂತರು.

ಏಳೆಂಟು ನಿಮಿಷ ದೀರ್ಘ ಶ್ವಾಸೋಚ್ಛ್ವಾಸ ಮಾಡಿದ ನಂತರ ಡಾ.ರಾಜ್ ಸಹಜ ಸ್ಥಿತಿಗೆ ಮರಳಿದರು.

'ಯಾರ–ಯಾರನ್ನೋ ನಾವು ಲೆಜೆಂಡ್ ಅಂದು ಬಿಡ್ತೇವೆ. ನಿಜವಾದ ಲೆಜೆಂಡ್ ಅಂದ್ರೆ ಡಾ.ರಾಜ್‌ಕುಮಾರ್ ಮಾತ್ರ. ಅವರಿಗೆ ಅವರೇ ಸಾಟಿ. ಯಾವುದೇ ಪಾತ್ರವಿರಲಿ ಪರಕಾಯ ಪ್ರವೇಶ ಮಾಡಿ ಬಿಡ್ತಾರೆ. ಅವರೊಂದು ಡೈಲಾಗ್ ಹೇಳಲಿ. ಅದೇ ಫೈನಲ್. ಅದಕ್ಕಿಂತ ಚೆನ್ನಾಗಿ ಹೇಳೋಕಾಗೋದಿಲ್ಲ. ಅಷ್ಟು ಪರ್‌ಫೆಕ್ಟು. ಅಷ್ಟು ಅಚ್ಚುಕಟ್ಟು ಲೆಜೆಂಡ್ ಅಂದ್ರೆ ಅದೇ...' ಉದ್ಗರಿಸಿದರು ನಿರ್ದೇಶಕ ಸಿ.ಆರ್.ಸಿಂಹ.

## ಪ್ರಸಂಗ–2

ಸಂಪತ್ತಿಗೆ ಸವಾಲ್ ಚಿತ್ರೀಕರಣ ನಡೆಯುತ್ತಿತ್ತು. ಕಡು ದರ್ಪದ ಸಾಹುಕಾರ ವಜ್ರಮುನಿಯನ್ನು ಧಿಕ್ಕರಿಸಿ ಭಡ ಸವಾಲೆಸೆಯುವುದೇ ಮುಂದಿನ ದೃಶ್ಯ.

ಡಾ.ರಾಜ್ ಒಂದೆಡೆ ಒಬ್ಬರೇ ನಿಂತು ಡೈಲಾಗನ್ನು ತಮ್ಮಲ್ಲೇ ಗುನು ಗುನಿಸಿಕೊಂಡು ಸಿದ್ಧವಾಗುತ್ತಿದ್ದರು.

ದೂರದಲ್ಲಿ ಸಹ ನಟರೊಂದಿಗೆ ಹರಟುತ್ತಿದ್ದ ವಜ್ರಮುನಿಯವರನ್ನು ಕಂಡು 'ವಜ್ರಣ್ಣಾ ಇಲ್ಲಿಗೆ ಬಾರಣ್ಣಾ' ಎಂದು ಕೂಗಿ ಕರೆದರು ರಾಜ್. ವಜ್ರಮುನಿಯವರಿಗೆ ಗೊತ್ತು ರಾಜ್ ಕರೆಯ ಗುಟ್ಟು. ಕೇಳಿಸದವರಂತೆ ಹರಟೆಯಲ್ಲಿ ತಮ್ಮಷ್ಟಕ್ಕೆ ತಲ್ಲೀನರಾಗಿದ್ದರು.

ರಾಜ್ ತಾವೇ ಹತ್ತಿರ ನಡೆದು ಬಂದು ಕರೆದರು. ಹೋಗದೆ ವಿಧಿಯಿಲ್ಲ. 'ವಜ್ರಣ್ಣಾ ಮುಂದಿನ ಸೀನಲ್ಲಿ ನಿಮ್ಮ ಡೈಲಾಗ್ ಇದೆಯಲ್ಲಾ ಅದ್ಯಾವುದು? ಅದೆಂಗೆ ಸ್ವಲ್ಪ ಹೇಳಿ' ಅಮಾಯಕ ಕೋರಿಕೆ.

ವಜ್ರಮುನಿಯವರಿಗೆ ರಾಜ್‌ರ ತಳಮಳ ಗೊತ್ತು. ಆಟವಾಡಿಸಲು ಇದೇ ಚಾನ್ಸು. 'ಅದೇ ಅಣ್ಣಾ ಮಾಮೂಲಿ ಡೈಲಾಗು!. ರಿಹರ್ಸಲ್ಲೇನು ಬೇಡ. ಸುಮ್ನೇ ಹಾಗೇ ಹೇಳಿದರಾಯ್ತು' ಅದ್ಸರಿ. ನಿಮ್ಮ ಡೈಲಾಗ್ ಬರುತ್ತಲ್ಲಾ? ಅದೆಂಗೆ ಹೇಳ್ತೀರಾ? ಒಂದ್ಸಲಾ ಹಾಗೇ ಹೇಳಿ!' ವಜ್ರಮುನಿಗೆ ಇನ್ನಷ್ಟು ಆಟವಾಡಿಸಿ ಗೋಳು ಹೊಯ್ದುಕೊಳ್ಳುವ ಆಸೆ. ಹೇಳದೆ ಬಹುಹೊತ್ತು ಸತಾಯಿಸಿ ಕೊನೆಗೊಮ್ಮೆ ಹೇಳಿದರು.

ಖಳನ ಆಟಾಟೋಪದ ಆರ್ಭಟಕ್ಕೆ ಅದೇ ಬಿರುಸಿನಲ್ಲೇ ನಾಯಕ ಉತ್ತರಿಸಬೇಕು. ಇಲ್ಲದಿದ್ದರೆ ಇಡೀ ದೃಶ್ಯವೇ ಠುಸ್!

ವಜ್ರಮುನಿ ಕೇವಲ ಖಳ ನಟನಲ್ಲ. ಶತಮಾನದ ಪ್ರಚಂಡ ರಾವಣ! ವಜ್ರಮುನಿಯ ಡೈಲಾಗ್ ಡೆಲಿವರಿ ಸಿಡಿಗುಂಡಿನಂತೆ. ಅದಕ್ಕೆ ಫಿರಂಗಿ ಧ್ವನಿಯಲ್ಲೇ ಘರ್ಜಿಸಬೇಕು. ರಾಜ್ ಪಾತ್ರಗಳು ಅವಿಸ್ಮರಣೀಯ ವಾಗಿರುವುದೇ ಈ ಬಗೆಯ ಸಿದ್ಧತೆಗಳಿಂದ.

## ಪ್ರಸಂಗ–3

ಮೈಸೂರಿನ ಶಕ್ತಿಧಾಮಕ್ಕೆ ಡಾ.ರಾಜ್ ದಂಪತಿ ವಾರಕ್ಕೊಮ್ಮೆ ಬರುತ್ತಿದ್ದರು. ಅದೊಂದು ವಾರ ಬರಲಿಲ್ಲ. ಕಾರಣ ಪುನೀತ್ ಹುಟ್ಟುಹಬ್ಬ. ಮುಂದಿನ ಮೀಟಿಂಗಿಗೆ ಪುನೀತರೊಂದಿಗೆ ಬಂದವರು ಎಲ್ಲರಿಗೂ ಸಿಹಿ ಹಂಚಿದರು.

ಬಾಲಕ ಪುನೀತನ ಹುಟ್ಟುಹಬ್ಬಕ್ಕೆ ಮುದ್ದು ಕೃಷ್ಣನ ವೇಷ ಹಾಕಿ ರಾಜ್‌ರಿದ್ದಲ್ಲಿಗೆ ಕರೆದೊಯ್ದರು. ಸೆಟ್‌ನಲ್ಲಿ ಬಿಜಿಯಾಗಿದ್ದ ರಾಜ್ ಮಗುವನ್ನು ಅಷ್ಟೇನು ಮುದ್ದಾಡಲಿಲ್ಲ. ಅನ್ಯಮನಸ್ಕರಾಗಿದ್ದರು. ಷೂಟಿಂಗ್ ನಂತರ ಮನೆಗೆ ಹೊರಡುವಾಗ ಮಗು ನಿದ್ರಿಸಿತ್ತು. ರಾಜ್ ಏನೂ ಮಾತಾಡದೆ ಕಾರಲ್ಲಿ ಕುಳಿತರು. ಪಾರ್ವತಮ್ಮನವರಿಗೋ ಆಶ್ಚರ್ಯ. ಎಷ್ಟೇ ಬಿಜಿ ಇರಲಿ ಪುನೀತ್ ಎಂದರೆ ಎತ್ತಿ ಮುದ್ದಾಡುತ್ತಿದ್ದವರು ಇಂದೇಕೆ ಬೇಸರದಿಂದಿದ್ದಾರೆ?

ವಿಚಾರಿಸಿದಾಗಲೂ ಏನೋ ಬೇಸರದ ಉತ್ತರ ರಾಜ್‌ರದ್ದು. ರಾತ್ರಿ ಮಲಗುವಾಗ ಪಾರ್ವತಮ್ಮ ಬೇಸರದ ಕಾರಣ ಕೇಳಿದರು.

ಸೆಟ್ಟಿನಲ್ಲಿ ಸ್ಟಂಟ್ ಮಾಸ್ಟರ್ ವೈ.ಶಿವಯ್ಯ ಸಿಗರೇಟ್ ಸೇದುತ್ತಾ ತನ್ನ ಸಹಾಯಕರ ಮೇಲೆ ಕೂಗಾಡುತ್ತಿದ್ದರಂತೆ. ಸೆಟ್‌ನಲ್ಲಿ ಬೂಟುಗಾಲಲ್ಲಿದ್ದುದನ್ನು ನೋಡಿ ತುಂಬಾ ಬೇಸರವಾಯ್ತಂತೆ.

'ನೀವೇನಂದ್ರೀ? ದಬಾಯಿಸಿದಿರಾ?' ಎಂದರಂತೆ ಪಾರ್ವತಮ್ಮನವರು.

'ಇಲ್ಲ. ಏನೂ ಮಾತಾಡಲಿಲ್ಲ. ಯಾಕೋ ನನಗೇ ಕಸಿವಿಸಿಯಾಯಿತು. ಶೂಟಿಂಗ್ ನಿಲ್ಲಿಸಿ ಬಂದುಬಿಟ್ಟೆ' ಎಂದರು ರಾಜ್.

ಮಾರನೇ ದಿನ ಪಾರ್ವತಮ್ಮನವರು ಶಿವಯ್ಯರನ್ನು ಕರೆದು ವಿಚಾರಿಸಿದರು. ಆ ಕ್ಷಣ ಹೌಹಾರಿದ ಶಿವಯ್ಯ, ತಾನು ಸೆಟ್‌ನಲ್ಲಿ ಷೂ ಹಾಕಿಕೊಂಡಿದ್ದು, ಸಿಗರೇಟ್ ಸೇದಿದ್ದು, ಅರಿವೇ ಇರಲಿಲ್ಲವಂತೆ. ಸೆಟ್‌ನಲ್ಲಿ ಡಾ.ರಾಜ್‌ರ ಪಾವಿತ್ರ್ಯ ಪಾಲನೆಯ ಉಲ್ಲಂಘಿಸಿದ್ದಕ್ಕೆ ಕ್ಷಮೆಯಾಚಿಸಿದರಂತೆ.

ಡಾ.ರಾಜ್‌ರಿಗೆ ಪ್ರತಿ ಚಿತ್ರದ ಸೆಟ್ ಪವಿತ್ರ ಸ್ಥಳ. ಅಲ್ಲಿ ಯಾವ ಅಪಚಾರಕ್ಕೆ ಅವಕಾಶವಿರಕೂಡದು. ನಿರ್ಮಲತೆ ನೆಲೆಗೊಂಡಿರಬೇಕು. ಚಿತ್ರಗಳ ದೃಶ್ಯ, ಸನ್ನಿವೇಶಕ್ಕೆ ಸಿಗರೇಟು, ಮದ್ಯಪಾನ, ವೇಷಭೂಷಣ ಅನಿವಾರ್ಯವಾದರೆ ಸರಿ. ಆದರೆ ಅನಾವಶ್ಯಕವಾಗಿ ಇಂತಹ ವರ್ತನೆಗೆ ಆಸ್ಪದವಿರಬಾರದು ಎಂಬುದು ಡಾ.ರಾಜ್‌ರ ನೈತಿಕ ನಿಯಮ ಪಾಲನೆಯಾಗಿತ್ತು.

ಅಣ್ಣಾವ್ರ ಒಂದು ವಿಶೇಷ ಗುಣವೆಂದರೆ ಯಾರು ತಪ್ಪು ಮಾಡಿದರೂ ಮರುಗುವುದು, ತಾವೇ ನೊಂದು ಕೊಳ್ಳುವುದು. ಇದೊಂದು ರೀತಿ ದೈವಿಕ ಕ್ಷಮಾ ಗುಣ ಎನ್ನಬಹುದಲ್ಲವೇ?

# ಡಾ.ರಾಜ್ ಮರೆಯಲಾಗದ ಮಾಣಿಕ್ಯ

**ಡಾ.ರಾಜ್ ಗಾನ ಸವಿ ಸಂಜೆ ಹಾಗೂ ಅಭಿನಂದನಾ ಕಾರ್ಯಕ್ರಮದಲ್ಲಿ ಲಯನ್ ಕೆ. ದೇವೇಗೌಡ ಅಭಿಮತ**



ಮೈಸೂರು, ಏ.23(ಜಿಎ)–ಡಾ.ರಾಜ್‌ಕುಮಾರ್ ಅವರು ಭಾಷೆಯನ್ನು ತಾಯಿಯಂತೆ, ಗುರು ಹಿರಿಯರನ್ನು ತಂದೆಯಂತೆ, ಅಭಿಮಾನಿಗಳನ್ನು ದೇವರಂತೆ, ಚಿತ್ರರಂಗವನ್ನು ಕುಟುಂಬದಂತೆ ಕಂಡಂತಹ ಅಪರೂಪದ ಕಲಾ ತಪಸ್ವಿ ಎಂದು ಲಯನ್ ಕೆ. ದೇವೇಗೌಡ ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ, ಶ್ರೀ ಸಾಯಿ ಮೆಲೋಡಿಸ್ ವತಿಯಿಂದ ಶನಿವಾರ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಏರ್ಪಡಿಸಿದ್ದ ಡಾ. ರಾಜ್‌ಕುಮಾರ್ ಜನ್ಮದಿನ, ಡಾ.ರಾಜ್ ಗಾನ ಸವಿಸಂಜೆ ಹಾಗೂ ಅಭಿನಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೆಲವರು ನೂರು ವರ್ಷ ದಾಟಿದರೂ ಬದುಕುತ್ತಾರೆ. ಆದರೆ ರಾಜ್‌ಕುಮಾರ್ ಅವರು ಇನ್ನಷ್ಟು ವರ್ಷ ಕಾಲ ಬದುಕಿರಬೇಕಿತ್ತು ಎನ್ನುವಾಗಲೇ ನಮ್ಮಿಂದ ದೂರವಾದರು. ಡಾ.ರಾಜ್‌ಕುಮಾರ್ ಅವರು ಮರೆಯಲಾಗದ ಮಾಣಿಕ್ಯ. ಅವರ ದಾರಿಯಲ್ಲಿಯೇ ಅವರ ಪುತ್ರ ಪುನೀತ್ ರಾಜ್‌ಕುಮಾರ್ ಅವರು 46ನೇ ವಯಸ್ಸಿಗೆ ನಿಧನರಾಗಿದ್ದು ಮತ್ತೊಂದು ದುರಂತ ಎಂದು ಅವರು ವಿಷಾದಿಸಿದರು.

ಈ ವೇಳೆ ಪಂಪ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಪ್ರೊ.ಸಿಪಿಕೆ ಮಾತನಾಡಿ, ನನ್ನ ಬದುಕು, ನನಗೆ ಬಂದ ಪ್ರಶಸ್ತಿಗಳು ಎಲ್ಲವೂ ವಿಚಿತ್ರ. ಕೆಲವರು ಆತ್ಮಕಥೆ ಬರೆಯಿರಿ ಎನ್ನುತ್ತಾರೆ. ಆತ್ಮ ಇರೋರು ಬರೆಯಲಿ ಎಂದು ವಿನೋದಕ್ಕೆ ಹೇಳುತ್ತೇನೆ. ಆದರೆ ಆತ್ಮಕಥೆ ಬರೆದರೂ ಎಲ್ಲಾ ಸಂಗತಿಗಳು ಪ್ರಾಮಾಣಿಕವಾಗಿರುವು ದಿಲ್ಲ ಎಂಬ ಹಿಂಜರಿಕೆ ಕಾರಣ ಎಂದರು.

ಖ್ಯಾತ ಮನೋವೈದ್ಯ ಡಾ.ಬಿ.ಎನ್.ರವೀಶ್ ಮಾತನಾಡಿ, ನಮ್ಮನ್ನು ನಾವು ಪುನರ್ ಸಂಶೋಧನೆ ಮಾಡಿಕೊಳ್ಳಬೇಕು. ಸಂಸ್ಕೃತಿ ಉಳಿವಿನ ಕಡೆಗೆ ಗಮನ ಕೊಡಬೇಕು. ಗಂಗರ ಬಗ್ಗೆ ಮದ್ರಾಸ್ ವಿವಿಯ ತಮಿಳು ಸೆಲ್ಲಿಯವರು ಸಂಶೋಧನೆ ಮಾಡಿದ್ದಾರೆ. ಆದರೆ ಸರ್ಕಾರ ಹಾಗೂ ಸಮಾಜದ ಕಣ್ಣಿಗೆ ತಲಕಾಡಿನ ಗಂಗರು ಬೀಳುತ್ತಿಲ್ಲ. ಹಿತ್ತಲಗಿಡ ಮದ್ದಲ್ಲ ಎನ್ನುತ್ತಾರೆ ಎಂದು ಅವರು ವಿಷಾದಿಸಿದರು.

ಗಂಗರ ಬಗ್ಗೆ ನಾನು ಬರೆದ ಇಂಗ್ಲಿಷ್ ಪುಸ್ತಕಕ್ಕೆ ಪ್ರೊ.ಬಿ.ಷೇಕ್ ಅಲಿ ಅವರು ತಮ್ಮ 99ನೇ ವಯಸ್ಸಿನಲ್ಲಿ ಮುನ್ನುಡಿ ಬರೆದುಕೊಟ್ಟಿದ್ದರು. ಕನ್ನಡ ಪುಸ್ತಕಕ್ಕೆ ಪ್ರೊ.ಸಿಪಿಕೆ ಬರೆದುಕೊಟ್ಟಿದ್ದಾರೆ ಎಂದ ಅವರು, ಮನೋವಿಜ್ಞಾನ ಹಾಗೂ ಪರಿಸರ ಸಮತೋಲನ ಮಾಡದಿದ್ದಲ್ಲಿ ಸಮಾಜ ಆತ್ಮಸಾಕ್ಷಿಗೆ ವಿರುದ್ಧವಾಗಿ ಹೋಗುತ್ತದೆ ಎಂದು ಎಚ್ಚರಿಸಿದರು.

ಕಾರ್ಯಕ್ರಮದಲ್ಲಿ ಪ್ರೊ.ಸಿಪಿಕೆ ಮತ್ತು ಡಾ.ಬಿ.ಎನ್.ರವೀಶ್ ಅವರನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅಭಿನಂದಿಸಿದರು. ಮೈಸೂರು ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಾಹಿತ್ಯ ಲೋಕ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಒಕ್ಕಲಿಗರ ಮಹಾಸಭಾ ಅಧ್ಯಕ್ಷ ಎನ್.ಬೆಟ್ಟೇಗೌಡ, ಚಂದ್ರಕಲಾ ಕುಮಾರ್ ಉಪಸ್ಥಿತರಿದ್ದರು.

## ನಾಳೆ ವಿಶ್ವ ಮಲೇರಿಯಾ ದಿನ

ಮೈಸೂರು, ಏ.23– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿಗಳ ಕಚೇರಿ ವತಿಯಿಂದ ವಿಶ್ವ ಮಲೇರಿಯಾ ದಿನವನ್ನು ಏ.25ರಂದು ಬೆಳಗ್ಗೆ 11ಕ್ಕೆ ನಗರದ ಎಚ್‌ಎಚ್‌ಎಂಬಿಜಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ (ಜಾಕಿ ಕ್ವಾಟ್ರಸ್ ಎದುರು) ಹಮ್ಮಿಕೊಳ್ಳಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಇಂದು ವಿದ್ಯುತ್ ವ್ಯತ್ಯಯ

ಮೈಸೂರು. ಏ.23– ನಾಚನಹಳ್ಳಿ ಫೀಡರ್‌ನಲ್ಲಿ ತುರ್ತು ಕಾರ್ಯ ನಿಮಿತ್ತ ಏ.24ರಂದು ನಾಚನಹಳ್ಳಿ ಪಾಳ್ಯ, ಕವಿತಾ ಬೇಕರಿ ವೃತ್ತ, ಕಾಮಾಕ್ಷಿ ಆಸ್ಪತ್ರೆ ಸುತ್ತ–ಮುತ್ತ 'ಡಿ' ಬ್ಲಾಕ್ ಜೆ.ಪಿ ನಗರ, ಜೆ.ಪಿ ನಗರ ಕೊನೆಯ ಬಸ್ ನಿಲ್ದಾಣ, ಸಿದ್ದಲಿಂಗೇಶ್ವರ ಬಡಾವಣೆ 1ನೇ ಹಂತ, ಮುಡಾ ಎ ಮತ್ತು ಬಿ ವಲಯ, ನವೋದಯ ಬಡಾವಣೆ, ಪೊಲೀಸ್ ಬೂತ್ ಸರ್ಕಲ್ ಸುತ್ತ–ಮುತ್ತ, ನಂಜನಗೂಡು ರಿಂಗ್ ರಸ್ತೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

# ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಪರ ರಾಮದಾಸ್ ಪ್ರಚಾರ



ಮೈಸೂರು,ಏ.23(ಎಂಟಿವೈ)– ಕೆ.ಆರ್. ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಪರವಾಗಿ ಹಾಲಿ ಶಾಸಕ ಎಸ್.ಎ.ರಾಮದಾಸ್ ಭಾನುವಾರ ಬಿರುಸಿನ ಪ್ರಚಾರ ನಡೆಸಿ ಮತಯಾಚಿಸಿದರು.

ಮೇಯರ್ ಶಿವಕುಮಾರ್ ಹಾಗೂ ಸ್ಥಳೀಯ ಕಾರ್ಯಕರ್ತರೊಂದಿಗೆ 47ನೇ ವಾರ್ಡಿನ ವ್ಯಾಪ್ತಿಯ ಕುವೆಂಪುನಗರದ ಸುಮಸೋಪಾನ ಉದ್ಯಾನವನದಿಂದ ಪ್ರಚಾರ ಆರಂಭಿಸಿದರು. ಉದ್ಯಾನವದಲ್ಲಿ ವಾಯುವಿಹಾರ ನಡೆಸುತ್ತಿದ್ದವರು, ಸುತ್ತಮುತ್ತಲಿನ ಅಂಗಡಿಗಳು, ಹೋಟೆಲ್, ಬಸ್ ನಿಲ್ದಾಣ, ಆಟೋ ನಿಲ್ದಾಣದಲ್ಲಿದ್ದವರು ಹಾಗೂ ಅಕ್ಕಪಕ್ಕದ ಮನೆಗಳಿಗೆ ತೆರಳಿ ಮತ ಪ್ರಚಾರ ನಡೆಸಿ, 5 ವರ್ಷಗಳಿಂದ ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಮತ್ತು ವಾರ್ಡಿನ ಮಟ್ಟದಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮನವರಿಕೆ ಮಾಡಿ ಬೆಂಬಲ ನೀಡುವಂತೆ ಕೋರಿದರು.

ಪ್ರಧಾನಿ ಮೋದಿ ಅವರ ಕೈ ಬಲಪಡಿಸಲು ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರ ಜಾರಿಗೆ ತಂದಿರುವ ಯೋಜನೆಗಳನ್ನು ಮನಗಂಡು ಈ ಬಾರಿ ಬಿಜೆಪಿಗೆ ಮತ ನೀಡುವಂತೆ ನಿವಾಸಿಗಳಲ್ಲಿ ಮತ ಯಾಚಿಸಲಾಯಿತು. ಇದೇ ವೇಳೆ ಬಸವ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ವ್ಯವಸ್ಥೆ ವಿರುದ್ಧ ಹೋರಾಡಲು ಸಂಘರ್ಷದ ಹಾದಿ ತೋರಿಸಿಕೊಟ್ಟವರು ಭಕ್ತಿಭಂಡಾರಿ ಬಸವಣ್ಣ. ಧರ್ಮ–ಅಧರ್ಮದ ನಡುವೆ ಇಂದು ಕುರುಕ್ಷೇತ್ರ ನಡೆಯುತ್ತಿದೆ. ಧರ್ಮದ ಹಾದಿಯಲ್ಲಿ ಸಾಗುವುದು ಕಷ್ಟವಾಗಿದೆ. ನೋವು–ನಲಿವು, ಕಷ್ಟ ಸಹಿಸಿಕೊಂಡು ನಡೆಯಬೇಕಾದ ಅನಿವಾರ್ಯತೆ. ಕಷ್ಟ ಎಂಬುದು ಬಸವಣ್ಣನವರನ್ನೇ ಬಿಡಲಿಲ್ಲ. ಅವರ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಲಾಯಿತು. ಇದು ಬಸವಣ್ಣನವರ ಬದುಕಿನ ಹಾದಿ ಕಲ್ಲು, ಮುಳ್ಳುಗಳನ್ನು ಸೃಷ್ಟಿಸಿತ್ತು. ಬ್ರಾಹ್ಮಣ ಸಮಾಜದಿಂದ ಬಂದವರಾದರೂ ಸಮಾಜದ ಸುಧಾರಣೆಗಾಗಿ ಪರಿವರ್ತನೆಗೊಂಡ ಮಹಾನ್ ಸುಧಾರಕ ಹಾಗೂ ಚೇತನ ಎಂದು ಬಣ್ಣಿಸಿದರು. ಈ ಸಂದರ್ಭದಲ್ಲಿ ಬೂತ್ ಅಧ್ಯಕ್ಷೆ ಶೋಭಾ ಸೇರಿದಂತೆ ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

# ಕೆ.ಪುಟ್ಟಸ್ವಾಮಿ ಪದವಿಪೂರ್ವ ಕಾಲೇಜಿಗೆ ಶೇ.100 ಫಲಿತಾಂಶ




ಮೋಹನಕುಮಾರಿ ಮಧುಕಿರಣ್

ಮೈಸೂರು,ಏ.23–ಮೈಸೂರಿನ ಗೋಕುಲಂ 3ನೇ ಹಂತದಲ್ಲಿರುವ ಕೆ.ಪುಟ್ಟಸ್ವಾಮಿ ಪದವಿ ಪೂರ್ವ ಕಾಲೇಜಿಗೆ ಈ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಬಂದಿದೆ. ವಿಜ್ಞಾನ ವಿಭಾಗದಲ್ಲಿ 60 ಮತ್ತು ವಾಣಿಜ್ಯ ವಿಭಾಗದಲ್ಲಿ 60 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅತ್ಯುನ್ನತ ಶ್ರೇಣಿಯಲ್ಲಿ –58, ಪ್ರಥಮ ದರ್ಜೆಯಲ್ಲಿ–60 ಮತ್ತು ದ್ವಿತೀಯ ದರ್ಜೆಯಲ್ಲಿ –2 ತೇರ್ಗಡೆಯಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಮಧುಕಿರಣ್–566, ವಾಣಿಜ್ಯ ವಿಭಾಗದಲ್ಲಿ ಮೋಹನ ಕುಮಾರಿ–583 ಅಂಕಗಳೊಂದಿಗೆ ಅತ್ಯುನ್ನತ ಶ್ರೇಣಿ ಪಡೆದಿದ್ದಾರೆ.

# ಸರ್ಕಾರಿ ದೂರದರ್ಶನದಲ್ಲಿ ಭ್ರಷ್ಟಾಚಾರ ಕುರಿತು ಪ್ರಸಾರ ಮಾಡದಂತಹ ಪರಿಸ್ಥಿತಿ

**ಶ್ರೀ ಬಸವೇಶ್ವರ ಜಯಂತಿಯಲ್ಲಿ ಪ್ರೊ. ಡಿ.ಎಸ್.ಸದಾಶಿವಮೂರ್ತಿ ವಿಷಾದ**





ಮೈಸೂರು, ಏ.23(ಎಸ್‌ಪಿಎನ್)– ಖಾಸಗಿ ದೃಶ್ಯ ಮತ್ತು ಮುದ್ರಣ ಮಾಧ್ಯಮಗಳಲ್ಲಿ ರಾಜಕಾರಣದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಗಳು ಹೆಚ್ಚು ಪ್ರಸಾರವಾಗುತ್ತವೆ. ಆದರೆ, ಸರ್ಕಾರದ ವಾಹಿನಿ ದೂರದರ್ಶನದಲ್ಲಿ ಭ್ರಷ್ಟಾಚಾರ ಕುರಿತು ಪ್ರಸಾರವಾಗಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ಇದೆ ಎಂದು ಪ್ರೊ.ಡಿ.ಎಸ್.ಸದಾಶಿವಮೂರ್ತಿ ವಿಷಾಧಿಸಿದರು.

ಮೈಸೂರು ಕಬೀರ್ ರಸ್ತೆಯಲ್ಲಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂಟಪದಲ್ಲಿ ಮೈಸೂರು ವೀರಶೈವ ಸಜ್ಜನ ಸಂಘದ ವತಿಯಿಂದ ಆಯೋಜಿಸಿದ್ದ ಶ್ರೀ ಬಸವೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿ ಪ್ರಧಾನಮಂತ್ರಿಗಳಾಗಿದ್ದರು. ಈ ವೇಳೆ ಆ ಸಂಸ್ಥಾನದ ಕೆಲವರು, ಬಸವಣ್ಣನವರ ಮೇಲೆ ಹಣಕಾಸು ಕುರಿತು ಬಿಜ್ಜಳನಲ್ಲಿ ದೂರು ನೀಡಿರುತ್ತಾರೆ. ಈ ದೂರಿನ ಬಗ್ಗೆ ವಿಚಾರಣೆ ಮಾಡಲು ಖುದ್ದಾಗಿ ಬಿಜ್ಜಳನೇ ಮಾರುವೇಷದಲ್ಲಿ ಬಸವಣ್ಣನವರ ಮನೆಗೆ ಆಗಮಿಸಿ, ವಿಚಾರಣೆ ನಡೆಸುತ್ತಾನೆ. ಆಗ ಬಿಜ್ಜಳ ಬಂದಿದ್ದು, ಬಸವಣ್ಣನವರು ರಾಜ್ಯದ ಬೊಕ್ಕಸದಿಂದ ವ್ಯಯ್ಯ ಮಾಡಲು ಸಾಧ್ಯವೇ ಇಲ್ಲ ನಿರ್ಧಾರಕ್ಕೆ ಬಂದ ಘಟನೆಯನ್ನು ವಿವರಿಸಿದರು.

ಆದರೆ, ಈ ಕಾಲದ ರಾಜಕಾರಣದಲ್ಲಿ ಇವೆಲ್ಲಾ ನೋಡಲು ಸಾಧ್ಯವೇ? ಬಸವಣ್ಣನವರ ತತ್ವಾದರ್ಶಗಳು ಪ್ರಸ್ತುತ ರಾಜಕಾರಣಕ್ಕೆ ಅವಳಡಿಸುವುದು ಅತ್ಯಾವಶ್ಯಕ. ಬಸವಣ್ಣನವರ ಆಡಳಿತ ನೀತಿ, ಪ್ರಾಮಾಣಿಕತೆ, ವೈಚಾರಿಕತೆ ಬಗ್ಗೆ ರಾಜಕಾರಣದಲ್ಲಿ ಅರಿವು ಮೂಡಿಸಬೇಕಾಗಿದೆ ಎಂದು ಅವರು ತಿಳಿಸಿದರು.

**ಪ್ರಮುಖ ಬೀದಿಗಳಲ್ಲಿ ಮೆರವಣಿಗೆ:** ಮಂಡಿಮೊಹಲ್ಲಾದ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂಟಪದ ಮುಂಭಾಗದಿಂದ ಶ್ರೀ ಬಸವೇಶ್ವರರ ಭಾವಚಿತ್ರದ ಮೆರವಣಿಗೆಯನ್ನು ರಾಜ ಬೀದಿಗಳಲ್ಲಿ ವಿದ್ಯುತ್ ದೀಪಾಲಂಕಾರದೊಂದಿಗೆ ವೀರಶೈವ ನಂದಿ ಧ್ವಜ ಸಂಘದವರಿಂದ ನಂದಿ ಧ್ವಜ ಮೆರವಣಿಗೆ, ವೀರಗಾಸೆ, ಇತರೆ ಜಾನಪದ ತಂಡಗಳೊಂದಿಗೆ ಮೆರವಣಿಗೆ ಮಾಡಲಾಯಿತು. ಮೆರವಣಿಗೆಯು ಕಬೀರ್ ರಸ್ತೆ, ಸಂತ ಫಿಲೋಮಿನಾ ರಸ್ತೆ, ಅಶೋಕ ರಸ್ತೆ ಸೇರಿದಂತೆ ವಿವಿಧ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ಕಂಠಿ ಮಲ್ಲಣ್ಣನವರ ಕಲ್ಯಾಣಮಂಟಪದಲ್ಲಿ ಮುಕ್ತಾಯಗೊಂಡಿತು.

ಈ ಮೈಸೂರು ವೀರಶೈವ ಸಜ್ಜನ ಸಂಘದ ಅಧ್ಯಕ್ಷ ಎಸ್.ರಮಾನಂದ, ಉಪಾಧ್ಯಕ್ಷ ಎಂ.ಟಿ.ಮಲ್ಲಿಕಾರ್ಜುನ್, ಸಹ ಕಾರ್ಯದರ್ಶಿ ಎಂ.ಸಿ.ಪ್ರಾಣೇಶ್‌ಕುಮಾರ್, ಖಜಾಂಚಿ ಎಂ.ಪಿ.ನಾಗಪ್ರಸಾದ್ ಸೇರಿದಂತೆ ಇತರರಿದ್ದರು.

### ಕೈಕೊಟ್ಟ ಮಳೆ, ಬತ್ತಿ ಹೋದ ಜಲಮೂಲಗಳು, ಏರಿದ ತಾಪಮಾನ

# ಕೊಡಗು ಜಿಲ್ಲೆಯಲ್ಲಿ ಬರದ ಛಾಯೆ, ಒಣಗುತ್ತಿರುವ ಕಾಫಿ, ಮೆಣಸು ಸಸಿಗಳು





**ಮಡಿಕೇರಿ, ಏ.23– ಕೊಡಗು ಜಿಲ್ಲೆಯಲ್ಲಿ ಏಪ್ರಿಲ್ 4ನೇ ವಾರದಲ್ಲೂ ನಿರೀಕ್ಷಿತ ಮಳೆಯಾಗದ ಕಾರಣ ಬರದ ಛಾಯೆ ಎಲ್ಲೆಡೆ ಆವರಿಸುತ್ತಿದೆ. ಜಲಮೂಲಗಳು ಬತ್ತಿ ಹೋಗಿದ್ದು, ದಿನದಿಂದ ದಿನಕ್ಕೆ ಏರಿಕೆಯಾಗುತ್ತಿರುವ ಬಿಸಿಲ ಧಗೆಗೆ ಕೊಡಗಿನ ಬಹುತೇಕ ಕಡೆಗಳಲ್ಲಿ ತೋಟಗಾರಿಕಾ ಬೆಳೆಗಳು ಬೆಂದು ಹೋಗುತ್ತಿವೆ.**

ಮಕ್ಕಳಂತೆ ಸಾಕಿ ಸಲಹಿದ ಕಾಫಿ ಗಿಡಗಳು, ಕರಿ ಮೆಣಸು ಬಳ್ಳಿಗಳು ಕಣ್ಣು ಮುಂದೆಯೇ ಒಣಗುತ್ತಿದ್ದು, ಬೆಳೆಗಾರರು ಅಸಹಾಯಕರಾಗಿ ಕೈಕಟ್ಟಿ ಕೂರಬೇಕಾದ ಸ್ಥಿತಿ ತಲೆದೋರಿದೆ. ತೋಟಕ್ಕೆ ನೀರು ಹಾಯಿಸಲು ಇರುವ ಕೆರೆಗಳು, ನದಿಗಳಲ್ಲೂ ನೀರು ಬತ್ತಿ ಹೋಗಿದ್ದು, ಬೆಳೆಗಾರರು ಆಕಾಶದ ಕಡೆ ಮುಖ ಮಾಡಿ ಮಳೆಯನ್ನು ಎದುರು ನೋಡುತ್ತಿದ್ದಾರೆ.

ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಹೋಬಳಿಯ ಪೂಕೋಳ, ಪರಕಟಗೇರಿ, ನೆಮ್ಮಲೆ, ಕುರ್ಚಿ, ಬೀರುಗ, ಟಿ.ಶೆಟ್ಟಿಗೇರಿ, ಹರಿಹರ ಬಾಡಗರಗೇರಿ, ತೆರಾಲು, ಬಿರುನಾಣಿ, ಶ್ರೀಮಂಗಲ, ನಾಲ್ಕೇರಿ, ಮಂಚಳ್ಳಿ, ಪೂಜೆಕಲ್, ಕುಟ್ಟ, ಹೈಸೊಡ್ಲೂರು, ಬೆಳ್ಳೂರು, ಕುಮಟೂರು ಸೇರಿದಂತೆ ಇನ್ನಿತರ ಗ್ರಾಮಗಳಲ್ಲಿ ಕಾಫಿ, ಕರಿಮೆಣಸು, ಅಡಿಕೆ ಸೇರಿದಂತೆ ಇತರ ಬೆಳೆಗಳು ಬಿಸಿಲಿನ ಬೇಗೆಗೆ ಬೆಂದು ಕರಕಲಾಗಿದ್ದು, ಬೆಳೆಗಾರರು ಕಂಗಾಲಾಗುವಂತಹ ಪರಿಸ್ಥಿತಿ ಸೃಷ್ಟಿಯಾಗಿದೆ.

ಅಧಿಕ ಮಳೆಯಾಗುವಂತಹ ಪ್ರದೇಶಗಳಲ್ಲೂ ಸಹ ಈ ವರ್ಷ ವಾಡಿಕೆ ಮಳೆಯಾಗದೇ ಇರುವುದರಿಂದ ಬಿಸಿಲಿನ ತಾಪದಲ್ಲಿ ಏರಿಕೆಯಾಗಿದ್ದು, ಜಲಮೂಲಗಳು ಒಣಗಿವೆ. ಪೊನ್ನಂಪೇಟೆ ತಾಲೂಕಿನ ಹಾತೂರು, ಕುಂದಾ, ಈಚೂರು, ಬಿ. ಶೆಟ್ಟಿಗೇರಿ, ಹಳ್ಳಿಗಟ್ಟು, ಬಿ. ಬಾಡಗ, ಕುಟ್ಟಂದಿ, ಕೊಂಗಣ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಬಿರುಬಿಸಿಲಿನ ಝಳಕ್ಕೆ ಕಾಫಿಗಿಡಗಳು ಸುಟ್ಟು ಕರಕಲಾಗುತ್ತಿರುವ ಬೆನ್ನಲ್ಲೇ ಇದೀಗ ಅಧಿಕ ಮಳೆ ಸುರಿಯುವ ಶ್ರೀಮಂಗಲ ಹೋಬಳಿಯಲ್ಲೂ ಕಾಫಿಗಿಡಗಳು ಬೆಂದು ಹೋಗುತ್ತಿರುವುದು ಬೆಳೆಗಾರರಲ್ಲಿ ಆತಂಕ ಸೃಷ್ಟಿಸಿದೆ.

ನೀರಿನ ಮೂಲಗಳಾದ ಕೆರೆಕಟ್ಟೆಗಳು ಒಣಗಿ ನಿಂತಿದ್ದು, ಜನ ಜಾನುವಾರುಗಳು, ಪ್ರಾಣಿ ಪಕ್ಷಿಗಳು ನೀರಿಗಾಗಿ ಹಾಹಾಕಾರ ಪಡುವಂತಾಗಿದೆ. ಕೊಡಗಿನ ಪ್ರಮುಖ ವಾಣಿಜ್ಯ ಬೆಳೆಯಾದ ಕಾಫಿತೋಟಗಳು ಬಿಸಿಲಿನ ತಾಪಕ್ಕೆ ಸುಟ್ಟು ಕರಕಲಾಗಿದ್ದು, ಇದರೊಂದಿಗೆ ಕರಿ ಮೆಣಸು, ಬಾಳೆ, ಇನ್ನಿತರ ಫಸಲುಗಳು ಬೆಂದು ಹೋಗಿವೆ. ಕಾಫಿತೋಟಗಳನ್ನೇ ನಂಬಿ ಬದುಕು ಕಟ್ಟಿಕೊಂಡಿದ್ದ ಬೆಳೆಗಾರರು ಕಂಗಾಲಾಗಿದ್ದಾರೆ. ಪ್ರಸ್ತುತ ಕಾಫಿಗೆ ಉತ್ತಮ ಧಾರಣೆಯಿದೆ. ಬಿಸಿಲಿನ ತಾಪಕ್ಕೆ ಸುಟ್ಟು ಮುರುಟಿ ಹೋಗುತ್ತಿರುವ ಕಾಫಿ ಗಿಡಗಳಿಂದ ಮುಂದಿನ ವರ್ಷದ ಫಸಲನ್ನು ನಿರೀಕ್ಷಿಸುವುದು ಅಸಾಧ್ಯವಾಗಿದೆ ಹೊಸಗಿಡಗಳನ್ನು ನೆಟ್ಟು ಉತ್ತಮ ಫಸಲು ಪಡೆಯಲು ಸುಮಾರು ಇಪ್ಪತ್ತು ವರ್ಷಗಳು ತಗಲುವುದರಿಂದ ಕಾಫಿ ಬೆಳೆಗಾರರು ಆರ್ಥಿಕ ಹೊಡೆತಕ್ಕೆ ಸಿಲುಕುವುದರಲ್ಲಿ ಸಂದೇಹವಿಲ್ಲ.

ಮಾತ್ರವಲ್ಲದೇ ಮುಂದಿನ ವರ್ಷದ ಕಾಫಿ ಉತ್ಪಾದನೆಯ ಮೇಲೆ ಭಾರೀ ಅಡ್ಡ ಪರಿಣಾಮ ಬೀರಲಿದ್ದು, ದೇಶದ ಆರ್ಥಿಕತೆಯ ಮೇಲೂ ಇದರ ಕರಿ ಛಾಯೆ ಆವರಿಸಲಿದೆ ಎಂಬ ಮಾತುಗಳು ಕೇಳಿ ಬರುತ್ತಿದೆ.

# ದಂತ ವಿಜ್ಞಾನದಲ್ಲಿ ಓರಲ್ ಮೆಡಿಸಿನ್ ರೇಡಿಯಾಲಜಿ ಬಗ್ಗೆ ಹೆಚ್ಚಿನ ಅಧ್ಯಯನ ಅಗತ್ಯ



ವಿರಾಜಪೇಟೆ, ಏ.23– ದಂತ ವಿಜ್ಞಾನದಲ್ಲಿ ಓರಲ್ ಮೆಡಿಸಿನ್ ಹಾಗೂ ರೇಡಿಯಾಲಜಿ ಎಂಬ ಎರಡು ಪ್ರಮುಖ ವಿಚಾರಗಳಿದ್ದು, ಭಾರತದಲ್ಲಿ ಇದರ ಅಧ್ಯಯನಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿಲ್ಲ ಎಂದು ಕೊಡಗು ದಂತ ಮಹಾವಿದ್ಯಾಲಯದ ಡೀನ್ ಡಾ. ಸುನೀಲ್ ಮುದ್ದಯ್ಯ ವಿಷಾದ ವ್ಯಕ್ತಪಡಿಸಿದ್ದಾರೆ.

ಕೊಡಗು ದಂತ ಮಹಾವಿದ್ಯಾಲಯದ ಸಭಾಂಗಣದಲ್ಲಿ ಪದವಿಪೂರ್ವ ವಿದ್ಯಾರ್ಥಿಗಳಿಗಾಗಿ ಐಎಒಎಂಆರ್ ಸಂಘದ ಸಹಯೋಗದಲ್ಲಿ ಓರಲ್ ಮೆಡಿಸಿನ್ ಹಾಗೂ ರೇಡಿಯಾಲಜಿ ವಿಷಯ ಆಧರಿಸಿ ಏರ್ಪಡಿಸಲಾಗಿದ್ದ ಎರಡು ದಿನಗಳ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪದವಿಪೂರ್ವ ವಿದ್ಯಾರ್ಥಿಗಳಿಗಾಗಿ ಈ ಸಮಾವೇಶ ನಡೆಸುತ್ತಿರುವುದು ಸಂತಸ ತಂದಿದೆ. ರೋಗವನ್ನೇ ಗುರುತಿಸದೆ ಚಿಕಿತ್ಸೆ ನೀಡುವ ಕಡೆ ಹೆಚ್ಚು ಗಮನ ಹರಿಸಲಾಗುತ್ತಿದ್ದು, ಇದು ಸರಿಯಲ್ಲ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಐಎಒಎಂಆರ್ ಪ್ರಮುಖರಾದ ಡಾ. ಗೋಪಕುಮಾರ್ ಆರ್.ನಾಯರ್ ಮಾತನಾಡಿ, ಕೊಡಗಿನ ದಂತ ಮಹಾವಿದ್ಯಾಲಯದಲ್ಲಿ ಅದ್ಭುತ ಸಮಾವೇಶವನ್ನು ಆಯೋಜನೆ ಮಾಡಿರುವುದು ಸಂತೋಷ ತಂದಿದೆ. ಓರಲ್ ಮೆಡಿಸಿನ್ ಹಾಗೂ ರೇಡಿಯಾಲಜಿಗೆ ಸಂಬಂಧಿಸಿದಂತೆ ನಮ್ಮ ದೇಶದಲ್ಲಿ ಸಮರ್ಪಕವಾದ ಸಂಶೋಧನೆಗಳು ನಡೆಯುತ್ತಿಲ್ಲ. ಈ ನಿಟ್ಟಿನಲ್ಲಿ ಸರಿಯಾದ ಸಂಶೋಧನೆಗಳು ನಡೆದಿದ್ದೇ ಆದಲ್ಲಿ ಹಲ್ಲಿನ ಆರೋಗ್ಯದ ಬಗ್ಗೆ ಅಧ್ಯಯನ ಮತ್ತು ಬಾಯಿಂಯ ಆರೋಗ್ಯದ ಜೊತೆಗೆ ಮನುಷ್ಯನ ಶಾರೀರಿಕ ಆರೋಗ್ಯದ ಬಗ್ಗೆಯೂ ಅರಿಯಬಹುದಾಗಿದೆ ಎಂದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಡಾ. ಪ್ರಶಾಂತ್ ಶೆಣೈ ಹಾಗೂ ದಂತ ಮಹಾವಿದ್ಯಾಲಯದ ಮುಖ್ಯಸ್ಥೆ ಡಾ. ಎ.ಪಿ.ಕವಿತಾ ಮಾತನಾಡಿದರು. ದಂತ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಕೆ.ಸಿ ಪೊನ್ನಪ್ಪ ಅವರು ಸಮಾವೇಶದ ಸದುಪಯೋಗಪಡಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಸೂಚನೆ ನೀಡಿದರು.

ಕಾರ್ಯಕ್ರಮದಲ್ಲಿ ಡಾ. ಜೈನಿ ಪ್ರಾರ್ಥಿಸಿದರು. ಸಮಾವೇಶದಲ್ಲಿ ದಂತ ವೈದ್ಯಕೀಯ ಕಾಲೇಜಿನ ಉಪಪ್ರಾಂಶುಪಾಲ ಜಿತೇಶ್ ಜೈನ್, ದಂತ ಮಹಾವಿದ್ಯಾಲಯದ ಉಪನ್ಯಾಸಕ ವೃಂದ ಸೇರಿದಂತೆ ಕರ್ನಾಟಕ, ಕೇರಳ, ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ ಸೇರಿದಂತೆ 40ಕ್ಕೂ ಅಧಿಕ ದಂತ ವೈದ್ಯಕೀಯ ಕಾಲೇಜುಗಳಿಂದ ಪದವೀಧರರು, ಉಪನ್ಯಾಸಕರು ಸೇರಿ ನೂರಾರು ಮಂದಿ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ನಂತರ ಹೆಸರಾಂತ ವೈದ್ಯರುಗಳಿಂದ ಓರಲ್ ಮೆಡಿಸಿನ್ ವಿಷಯ ಮಂಡನೆ, ಹಾಗೂ ಹಲವು ವೈಜ್ಞಾನಿಕ ಸಂಶೋಧನೆ ವಿಚಾರಗಳನ್ನು ಆಧರಿಸಿದ ಚರ್ಚೆ ಮತ್ತು ಸಂವಾದ ಕಾರ್ಯಕ್ರಮ ನಡೆಯಿತು.

## ವಿರಾಜಪೇಟೆ ವಕೀಲರ ಸಂಘದ ಅಧ್ಯಕ್ಷರಾಗಿ ಕೆ.ಜಿ. ಅಪ್ಪಣ್ಣ ಆಯ್ಕೆ



**ವಿರಾಜಪೇಟೆ ವಕೀಲರ ಸಂಘದ ಚುನಾವಣೆ ಈ ಬಾರಿ ಸಾಕಷ್ಟು ಕುತೂಹಲಕ್ಕೆ ಎಡೆಮಾಡಿಕೊಟ್ಟಿತ್ತು. ಗುರುವಾರ ವಿರಾಜಪೇಟೆ ನ್ಯಾಯಾಲಯ ಸಮುಚ್ಚಯದಲ್ಲಿ ನಡೆದ ವಿರಾಜಪೇಟೆ ವಕೀಲರ ಸಂಘದ ಚುನಾವಣೆಯಲ್ಲಿ ವಕೀಲರಾದ ಕೆ.ಜಿ ಅಪ್ಪಣ್ಣ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಬಿ.ಜಿ ಪ್ರಥಮ್, ಕಾರ್ಯದರ್ಶಿಯಾಗಿ ವಿ.ಜಿ ರಾಕೇಶ್, ಖಜಾಂಚಿಯಾಗಿ ವಿ.ಎಸ್ ಪ್ರೀತಮ್, ಎ.ಯು ತಾರ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾದರು. ವಕೀಲರ ಸಂಘದ ನಿರ್ದೇಶಕರುಗಳಾಗಿ ಕೆ.ವಿ ಸುನೀಲ್, ಬಿ.ಎಸ್ ಜಗದೀಶ್, ಎ.ಆರ್ ರಂಜನ್ ಅಮಿತ್ ಸೋಮಯ್ಯ, ಹಾಜೀರ ಶರೀಫ್, ಸಿಂಧೂರ ಎನ್.ಸ್ವಾಮಿ ಮಹಿಳಾ ಮೀಸಲು ನಿರ್ದೇಶಕರಾಗಿ ಆಯ್ಕೆಯಾದರು.**

### ಸ್ನೇಹಿತನ ತಾಯಿ ಅಂತ್ಯಸಂಸ್ಕಾರ ವೇಳೆ ದುರಂತ

## ನೀರಿನಲ್ಲಿ ಮುಳುಗಿ ಯುವಕ ಸಾವು

ಸಿದ್ದಾಪುರ, ಏ.23– ಸ್ನೇಹಿತನ ತಾಯಿಯ ಅಂತ್ಯಸಂಸ್ಕಾರ ಮುಗಿಸಿ, ಸಮೀಪದಲ್ಲೇ ಇದ್ದ ಕಾವೇರಿ ನದಿಯಲ್ಲಿ ಸ್ನಾನಕ್ಕೆ ತೆರಳಿದ ಯುವಕನೋರ್ವ ನೀರುಪಾಲಾದ ಘಟನೆ ಗುಹ್ಯ ಗ್ರಾಮದಲ್ಲಿ ನಡೆದಿದೆ. ಪಳ್ಳಕ್ಕರೆಯ ನಿವಾಸಿ ರಾಜೇಂದ್ರ (33) ಎಂಬುವರೇ ನೀರು ಪಾಲಾದ ದುರ್ದೈವಿ.



ಗುಹ್ಯ ಗ್ರಾಮದ ಕಕ್ಕಟ್ಟುಕಾಡು ಬಳಿಯ ಖಾಸಗಿ ತೋಟದಲ್ಲಿ ವಾಸವಾಗಿದ್ದ ಮಂಜುನಾಥ್ ಎಂಬವರ ತಾಯಿ ನಿಧನರಾಗಿದ್ದು, ಮಂಜುನಾಥ್ ಸ್ನೇಹಿತ ಪಳ್ಳಕ್ಕರೆಯ ನಿವಾಸಿ ರಾಜೇಂದ್ರ ಅಂತ್ಯಸಂಸ್ಕಾರಕ್ಕೆ ತೆರಳಿದ್ದರು. ಅಂತ್ಯಸಂಸ್ಕಾರದ ಬಳಿಕ ರಾಜೇಂದ್ರ ಹಾಗೂ ಸ್ನೇಹಿತರು ಸಮೀಪದ ಕಾವೇರಿ ಹೊಳೆಗೆ ಸ್ನಾನ ಮಾಡಲು ನೀರಿಗೆ ಇಳಿದಿದ್ದರು. ಈ ಸಂದರ್ಭದಲ್ಲಿ ಈಜುತ್ತಿದ್ದ ರಾಜೇಂದ್ರ ಆಯಾಸಗೊಂಡು ನೀರಿನಲ್ಲಿ ಮುಳುಗಿದ್ದಾನೆ. ಇದನ್ನು ಗಮನಿಸಿದ ಸ್ನೇಹಿತರು ಆತನನ್ನು ರಕ್ಷಿಸಲು ಮುಂದಾಗಿದ್ದು, ರಾಜೇಂದ್ರ ನೀರಿನಲ್ಲಿ ಮುಳುಗಿ ಕಣ್ಮರೆಯಾಗಿದ್ದಾನೆ.

ಮಾಹಿತಿ ತಿಳಿದು ಸ್ಥಳಕ್ಕೆ ಆಗಮಿಸಿದ ಪೊಲೀಸರು, ಅಗ್ನಿಶಾಮಕದಳ ಸ್ಥಳೀಯರ ಸಹಾಯದೊಂದಿಗೆ ಮೃತದೇಹಕ್ಕಾಗಿ ಶೋಧ ಕಾರ್ಯ ನಡೆಸಿದ್ದರು ಪತ್ತೆಯಾಗಿರಲಿಲ್ಲ. ಭಾನುವಾರ ಬೆಳಗ್ಗೆ ನೀರಿನಲ್ಲಿ ಪತ್ತೆಯಾದ ಮೃತದೇಹವನ್ನ ಸ್ಥಳೀಯರು ಹೊರತೆಗೆದಿದ್ದಾರೆ. ನಂತರ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬದವರಿಗೆ ಮೃತದೇಹವನ್ನು ಹಸ್ತಾಂತರಿಸಲಾಗಿದೆ. ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಕುತೇಟ್ ಅಪ್ಪಚ್ಚಿರ ಕುಟುಂಬಸ್ಥರಿಂದ

## ಚುನಾವಣೆ ಬಹಿಷ್ಕಾರ




ಮಡಿಕೇರಿ, ಏ.23– ಮುಂಬರುವ ವಿಧಾನಸಭಾ ಚುನಾವಣೆಯನ್ನು ಬಹಿಷ್ಕರಿಸಲು ಕುತೇಟ್ ಅಪ್ಪಚ್ಚಿರ ಕುಟುಂಬಸ್ಥರು ನಿರ್ಧರಿಸಿದ್ದಾರೆ.

ದೊಡ್ಡ ಪುಲಿಕೋಟು ಗ್ರಾಮದ ಕುತೇಟ್ ಅಪ್ಪಚ್ಚಿರ ಕುಟುಂಬಸ್ಥರನ್ನು ಕಳೆದ ಹಲವು ವರ್ಷಗಳಿಂದ ಸರ್ಕಾರದ ವಿವಿಧ ಕಾಮಗಾರಿಗಳಿಂದ ವಂಚಿಸಲಾಗಿದೆ ಎಂದು ಕುಟುಂಬಸ್ಥರು ಆರೋಪಿಸಿದರು. ಕುಟುಂಬದಲ್ಲಿ 84 ಮತದಾರರಿದ್ದು, ಈ ಬಾರಿ ನಾವು ಮತದಾನ ಮಾಡುವುದಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದ ಕುಟುಂಬಸ್ಥರು, ಚುನಾವಣೆ ಬಹಿಷ್ಕಾರದ ಬ್ಯಾನರ್ ಅಳವಡಿಸಿದ್ದಾರೆ

## ಕೊಡಗಿನಂತೆ ರಾಜ್ಯ ಕಾಂಗ್ರೆಸ್ ಮುಕ್ತವಾಗಲಿದೆ: ಅಪ್ಪಚ್ಚುರಂಜನ್



ಮಡಿಕೇರಿ, ಏ.23– ವಿಧಾನಸಭಾ ಚುನಾವಣೆಯ ನಂತರ ಕರ್ನಾಟಕ ರಾಜ್ಯ ಕೊಡಗು ಜಿಲ್ಲೆಯಂತೆ ಕಾಂಗ್ರೆಸ್ ಮುಕ್ತವಾಗಲಿದೆ ಎಂದು ಮಡಿಕೇರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂ.ಪಿ.ಅಪ್ಪಚ್ಚು ರಂಜನ್ ಭವಿಷ್ಯ ನುಡಿದಿದ್ದಾರೆ.

ಕೊಡ್ಲಿಪೇಟೆಯಲ್ಲಿ ಬಿಜೆಪಿ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಕೊಡಗು ಈಗಾಗಲೇ ಕಾಂಗ್ರೆಸ್ ಮುಕ್ತ ಜಿಲ್ಲೆಯಾಗಿದೆ. ಚುನಾವಣೆ ನಂತರ ಕರ್ನಾಟಕ ರಾಜ್ಯ ಕೂಡ ಕಾಂಗ್ರೆಸ್ ಮುಕ್ತವಾಗಲಿದೆ ಎಂದರು.

ಕೊಡಗು ಜಿಲ್ಲೆಯ ಎರಡೂ ವಿಧಾನ ಸಭಾ ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಲು ಕಾಂಗ್ರೆಸ್ ಪಕ್ಷಕ್ಕೆ ಸ್ಥಳೀಯ ಅಭ್ಯರ್ಥಿಗಳೇ ಸಿಕ್ಕಿಲ್ಲ, ಇಬ್ಬರೂ ಅಭ್ಯರ್ಥಿಗಳು ಹೊರಗಿನವರು, ಅವರಿಗೆ ಕ್ಷೇತ್ರಗಳ ಕನಿಷ್ಠ ಪರಿಚಯವೂ ಇಲ್ಲ ಎಂದು ಟೀಕಿಸಿದರಲ್ಲದೆ, ಕಾಂಗ್ರೆಸ್‌ಗೆ ಸ್ಥಳೀಯ ಅಭ್ಯರ್ಥಿಗಳು ಸಿಗದಿರುವುದು ಕೊಡಗು ಕಾಂಗ್ರೆಸ್ ಮುಕ್ತವಾಗಿರುವುದಕ್ಕೆ ಸಾಕ್ಷಿಯಾಗಿದೆ ಎಂದು ವ್ಯಂಗ್ಯವಾಡಿದರು. ತನ್ನ ಮತದಾರರನ್ನು ಸಂಪೂರ್ಣವಾಗಿ ಕಳೆದುಕೊಂಡಿರುವ ಕಾಂಗ್ರೆಸ್ ಈ ಬಾರಿ ಅಧಿಕಾರಕ್ಕೇರುವುದು ಕನಸಿನ ಮಾತು. ಬಿಜೆಪಿ 150ಕ್ಕೂ ಹೆಚ್ಚು ಸ್ಥಾನಗಳನ್ನು ಗೆದ್ದು ಮತ್ತೆ ಸರ್ಕಾರ ರಚನೆ ಮಾಡಲಿದೆ ಎಂದು ಅಪ್ಪಚ್ಚುರಂಜನ್ ವಿಶ್ವಾಸ ವ್ಯಕ್ತಪಡಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ಎಸ್.ಜಿ.ಮೇದಪ್ಪ, ಪ್ರಮುಖರಾದ ಅಭಿಮನ್ಯು ಕುಮಾರ್, ಕೊಡ್ಲಿಪೇಟೆ ಬಿಜೆಪಿ ಘಟಕದ ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಈ ಸಂದರ್ಭ ಹಾಜರಿದ್ದರು.

### ಗುಂಡ್ಲುಪೇಟೆ ಸುತ್ತಮುತ್ತ ಗುಡುಗು ಸಹಿತ ಮಳೆ

## ಸಿಡಿಲು ಬಡಿದು ಆರು ಹಸು, ಕುರಿ, ಮೇಕೆ ಸಾವು



ಗುಂಡ್ಲುಪೇಟೆ, ಏ.23– ಸಿಡಿಲು ಬಡಿದು ಆರು ಹಸುಗಳು, ಎರಡು ಕುರಿ ಮತ್ತು ಎರಡು ಮೇಕೆಗಳು ಸಾವಿಗೀಡಾದ ಘಟನೆ ತಾಲೂಕಿನ ಕುಂದಕೆರೆ ಗ್ರಾಮದಲ್ಲಿ ನಡೆದಿದೆ.

ಭಾನುವಾರ ಮಧ್ಯಾಹ್ನ ಗುಡುಗು ಸಹಿತ ಮಳೆಗೆ ಸಿಡಿಲು ಬಡಿದು ಗ್ರಾಮದ ರಾಜಪ್ಪ ಎಂಬುವವರಿಗೆ ಸೇರಿದ ಎರಡು ಆಡುಗಳು, ಎರಡು ಕುರಿಗಳು ಹಾಗೂ ಐದು ಹಸುಗಳು, ಅದೇ ಗ್ರಾಮದ ಬಸವಣ್ಣ ಎಂಬುವರಿಗೆ ಸೇರಿದ ಒಂದು ಹಸು ಸಾವಿಗೀಡಾಗಿವೆ. ಸ್ಥಳಕ್ಕೆ ತೆರಕಣಾಂಬಿ ಠಾಣೆಯ ಸಹಾಯಕ ಸಬ್ ಇನ್ಸ್‌ಪೆಕ್ಟರ್ ರಾಜಪ್ಪ, ಪಶುವೈದ್ಯ ಡಾ.ಗುರುಸ್ವಾಮಿ ಹಾಗೂ ಗ್ರಾಮ ಲೆಕ್ಕಾಧಿಕಾರಿ ಭೇಟಿ ನೀಡಿ ಪರಿಶೀಲಿಸಿದರು.

**ದಿಕ್ಕು ತೋಚದ ಪರಿಸ್ಥಿತಿಯಲ್ಲಿ ರೈತ ಕುಟುಂಬ:** ಗ್ರಾಮದ ರಾಜಪ್ಪ ಹೈನುಗಾರಿಕೆ ಮಾಡಿಕೊಂಡು ಜೀವನ ನಡೆಸುತ್ತಿದ್ದರು, ಭಾನುವಾರದ ತಮ್ಮ ಜಾನುವಾರುಗಳಿಗೆ ಸಿಡಿಲು ಬಡಿದು ಸಾವಪ್ಪಿರುವ ಹಿನ್ನೆಲೆಯಲ್ಲಿ ಇದನ್ನೇ ನಂಬಿ ಜೀವನ ನಡೆಸುತ್ತಿದ್ದ ಕುಟುಂಬಕ್ಕೆ ಬರಸಿಡಿಲು ಬಡಿದಂತಾಗಿದೆ. ತಾಲೂಕು ಆಡಳಿತ ಸೂಕ್ತ ಪರಿಹಾರವನ್ನು ನೀಡುವುದರೊಂದಿಗೆ ಅವರ ಕುಟುಂಬಕ್ಕೆ ಆಸರೆಯಾಗಬೇಕೆಂದು ಒತ್ತಾಯಿಸಿದ್ದಾರೆ.

# ಜಿಲ್ಲೆಯಲ್ಲಿ ಬಿಜೆಪಿ– ಕಾಂಗ್ರೆಸ್‌ನಲ್ಲಿ ಪಕ್ಷಾಂತರ ಪರ್ವ



ಚಾಮರಾಜನಗರ, ಏ.23– ವಿಧಾನ ಚುನಾವಣೆ ಸಮೀಪಿಸುತ್ತಿದ್ದಂತೆ ಜಿಲ್ಲೆಯಲ್ಲಿ ಪಕ್ಷಾಂತರ ಪರ್ವ ಆರಂಭಗೊಂಡಿದೆ.

ಜಿಲ್ಲೆಯ ಪ್ರಮುಖ ಮುಖಂಡರು ಮಾತ್ರವಲ್ಲದೆ ಹೋಬಳಿ, ಗ್ರಾಮೀಣ ಮಟ್ಟದಲ್ಲಿ ಮುಖಂಡರು ಹಾಗೂ ಕಾರ್ಯಕರ್ತರು ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಸೇರ್ಪಡೆಯಾಗುತ್ತಿದ್ದಾರೆ. ಇದಲ್ಲದೇ ಈಚೆಗೆ ಜಿಲ್ಲೆಯ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಇಬ್ಬರು ಪ್ರಭಾವಿ ಮುಖಂಡರ ಪಕ್ಷಾಂತರದಿಂದ ಮೂಲ ಬಿಜೆಪಿ ಹಾಗೂ ಕಾಂಗ್ರೆಸ್ಸಿಗರಲ್ಲಿ ದಿಢೀರನೇ ಒಗ್ಗಟ್ಟು ಸೃಷ್ಟಿಯಾಗಿದೆ. ಈ ಒಗ್ಗಟ್ಟು ಪಕ್ಷಾಂತರ ಮಾಡಿದ ಮುಖಂಡರಿಗೆ ಸವಾಲಾಗಿ ಪರಿಣಮಿಸಿದೆ.

ಕೊಳ್ಳೇಗಾಲದ ಮಾಜಿ ಶಾಸಕರಾದ ಜಿ.ಎನ್. ನಂಜುಂಡಸ್ವಾಮಿ ಅವರು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದರೆ, ಮತ್ತೊಬ್ಬ ಮಾಜಿ ಶಾಸಕ ಎಸ್. ಬಾಲರಾಜು ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಯಾಗುವ ಮೂಲಕ ರಾಜ್ಯ ಮಟ್ಟದಲ್ಲಿ ಸುದ್ದಿಯಾಗಿದ್ದಾರೆ.

**ಗ್ರಾಮೀಣ ಪ್ರದೇಶದಲ್ಲಿ ಜೋರು:** ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಹನೂರು ಹಾಗೂ ಕೊಳ್ಳೇಗಾಲ ಕ್ಷೇತ್ರಗಳ ವ್ಯಾಪ್ತಿಯ ಗ್ರಾಮೀಣ ಭಾಗಗಳಲ್ಲೂ ಪಕ್ಷಾಂತರ ಪರ್ವ ಜೋರಾಗಿದ್ದು, ಯಾರು ಬಂದರೂ ಪಕ್ಷಕ್ಕೆ ಸೇರಿಸಿಕೊಳ್ಳುವುದಕ್ಕೆ ರಾಜಕೀಯ ಪಕ್ಷಗಳ ಮುಖಂಡರು ಕಸರತ್ತು ನಡೆಸುತ್ತಿದ್ದಾರೆ.

ವಿವಿಧ ಪಕ್ಷಗಳ ಕಾರ್ಯಕರ್ತರು ಮತ್ತು ಮುಖಂಡರು ಬೇರೆ ಪಕ್ಷಗಳ ಯುವಕರು, ಮುಖಂಡರನ್ನು ತಮ್ಮ ಪಕ್ಷಗಳಿಗೆ ಸೇರ್ಪಡೆ ಮಾಡಿಕೊಳ್ಳುತ್ತಿದ್ದಾರೆ. ಹಾಲಿ ಶಾಸಕರು, ಪಕ್ಷಗಳ ಮುಖಂಡರು ಪಕ್ಷಕ್ಕೆ ಬರುವವರನ್ನು ಸ್ವಾಗತಿಸುತ್ತಿದ್ದಾರೆ.

**ಮುಖಂಡರಿಂದ ಒಗ್ಗಟ್ಟಿನ ಮಂತ್ರ:** ಜಿಲ್ಲೆಯಲ್ಲಿ ದಿಢೀರನೇ ಆದ ರಾಜಕೀಯ ಮೇಲಾಟದಿಂದ ದಿಕ್ಕು ತೋಚದವರಂತೆ ಆದ ಕಾಂಗ್ರೆಸ್ ಹಾಗೂ ಬಿಜೆಪಿಯ ಮೂಲ ನಿವಾಸಿಗಳು ಇದೀಗ ಒಗ್ಗಟ್ಟು ಪ್ರದರ್ಶಿಸಲಾರಂಭಿಸಿದ್ದಾರೆ. ವರಿಷ್ಠರ ಸೂಚನೆಯಂತೆ ಜಿಲ್ಲೆಯ ನಾಲ್ಕು ಕ್ಷೇತ್ರದಲ್ಲಿ ಟಿಕೆಟ್ ಘೋಷಣೆಯಾಗಿರುವ ಅಭ್ಯರ್ಥಿಗಳ ಪರವಾಗಿ ಮತಯಾಚನೆ ನಡೆಸುವ ಮೂಲಕ ಅವರನ್ನು ಬೆಂಬಲಿಸುವುದಾಗಿ ವಾಗ್ದಾನ ಮಾಡಿದ್ದಾರೆ.



## ಕಾಂಗ್ರೆಸ್‌ನತ್ತ ದತ್ತೇಶ್ ಕುಮಾರ್ ಚಿತ್ತ?

ಹನೂರು ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್ ತಪ್ಪಿರುವುದರಿಂದ ಅಸಮಾಧಾನಗೊಂಡಿರುವ ಬಿಜೆಪಿ ಜಿಲ್ಲಾ ಘಟಕದ ಉಪಾಧ್ಯಕ್ಷ ದತ್ತೇಶ್‌ಕುಮಾರ್ ಪಕ್ಷ ತೊರೆಯಲು ನಿರ್ಧರಿಸಿದ್ದು, ಶೀಘ್ರವೇ ಕಾಂಗ್ರೆಸ್ ಸೇರಲಿದ್ದಾರೆ ಎಂಬ ಸುದ್ದಿಯು ಹನೂರು ಕ್ಷೇತ್ರದಲ್ಲಿ ಹರಿದಾಡುತ್ತಿದೆ.

ಕಾಂಗ್ರೆಸ್ ಶಾಸಕ ಆರ್.ನರೇಂದ್ರ ಸೇರಿದಂತೆ ಹಲವು ಮುಖಂಡರೊಂದಿಗೆ ಅವರು ಮಾತುಕತೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಹನೂರು ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿ ಹೆಸರು ಘೋಷಣೆಯಾಗುತ್ತಲೇ, ದತ್ತೇಶ್ ಕುಮಾರ್ ಪಕ್ಷದ ಚಟುವಟಿಕೆಗಳಿಂದ ದೂರ ಉಳಿದಿದ್ದರು. ಪಕ್ಷದ ನಾಯಕರೊಂದಿಗೆ ಎಲ್ಲೂ ಕಾಣಿಸಿಕೊಂಡಿರಲಿಲ್ಲ ಬಹಿರಂಗವಾಗಿ ಯಾವುದೇ ಹೇಳಿಕೆ ನೀಡಿಲ್ಲ. ಪಕ್ಷದ ಅಭ್ಯರ್ಥಿ ಡಾ.ಪ್ರೀತನ್ ನಾಗಪ್ಪ ಅವರಿಗೆ ಬೆಂಬಲವನ್ನೂ ಘೋಷಿಸಿಲ್ಲ. ಹಾಗಾಗಿ, ಪಕ್ಷದ ವಲಯದಲ್ಲಿ ಅವರು ಪಕ್ಷ ಬಿಡುತ್ತಾರೆ ಎಂಬ ಗುಸು ಗುಸು ಕೇಳಿಸುತ್ತಿದೆ.

**ಬಿಜೆಪಿ ಕಾರ್ಯಕ್ರಮಕ್ಕೆ ಗೈರು:** ಸಚಿವ ಸೋಮಣ್ಣ ಸೇರಿದಂತೆ ಬಿಜೆಪಿ ಮುಖಂಡರೊಂದಿಗೆ ಆತ್ಮೀಯ ಒಡನಾಟ ಹೊಂದಿದ್ದ ದತ್ತೇಶ್, ಟಿಕೆಟ್ ಘೋಷಣೆಯ ನಂತರ ಬಿಜೆಪಿಯಿಂದ ಮಾನಸಿಕವಾಗಿ ದೂರವಾಗಿದ್ದಾರೆ.

ಪಕ್ಷದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿಲ್ಲ. ಕೊಳ್ಳೇಗಾಲ ಮತ್ತು ಹನೂರು ಕ್ಷೇತ್ರಗಳಲ್ಲಿ ನಡೆದ ವಿಜಯೇಂದ್ರ ಅವರ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಂಡಿಲ್ಲ. ಹೀಗಾಗಿ, ದತ್ತೇಶ್ ಪಕ್ಷ ತೊರೆಯುವುದು ನಿಶ್ಚಿತ ಎಂದು ಹೇಳಲಾಗುತ್ತಿದೆ.

## ನಗರದಲ್ಲಿ ಬಸವ ಜಯಂತಿ ಸರಳ ಆಚರಣೆ



ಚಾಮರಾಜನಗರ, ಏ.23– ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ನಗರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಯಿತು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿಂದು ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸರಳವಾಗಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಜಗತ್ತಿನ ಎಲ್ಲಾ ಧರ್ಮಗಳ ಮೂಲ ದಯೆ, ಕರುಣೆ, ಪ್ರೀತಿಯೇ ಆಗಿದೆ. ದಯೆ ಇಲ್ಲದ ಧರ್ಮ ಯಾವುದೂ ಇಲ್ಲ ಎಂದು ಪ್ರತಿಪಾದಿಸಿದ ಬಸವಣ್ಣನವರು ಅನುಭವ ಮಂಟಪದ ಮೂಲಕ ಎಲ್ಲಾ ವರ್ಗಗಳ ಜನರಲ್ಲಿ ಸಮಾನತೆ, ಸಹೋದರತೆ, ಭ್ರಾತೃತ್ವದ ಬೀಜ ಬಿತ್ತಿದರು. 12ನೇ ಶತಮಾನದಲ್ಲಿಯೇ ವಚನ ಸಾಹಿತ್ಯಕ್ಕೆ ಚಳವಳಿಯ ರೂಪ ಕೊಟ್ಟು ಶೋಷಿತ ವರ್ಗಗಳ ಕಲ್ಯಾಣಕ್ಕೆ ನಾಂದಿ ಹಾಡಿದರು ಎಂದರು.

ಬಸವಣ್ಣನವರು ಸಾಮಾಜಿಕ ಅಸಮಾನತೆ, ಮೂಢನಂಬಿಕೆ ವಿರುದ್ಧ ಸಮರ ಸಾರಿದರು. ಅನುಭವ ಮಂಟಪ ಸ್ಥಾಪಿಸಿ ಸಕಲರಿಗೂ ಸಮಾನತೆ ನೀಡಿ ಸಮ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದ ಬಸವಣ್ಣ ವಿಶ್ವಗುರುವಾಗಿದ್ದಾರೆ. ಇಡೀ ಮನುಕುಲಕ್ಕೆ ಕಾಯಕದ ಮಹತ್ವವನ್ನು ತಿಳಿಹೇಳಿದ ಬಸವಣ್ಣನವರ ವಚನಗಳ ಸಾರಗಳನ್ನು ಎಲ್ಲರೂ ಅರಿಯಬೇಕು. ವಚನಗಳಲ್ಲಿರುವ ಜೀವನಾದರ್ಶಗಳನ್ನು ಪಾಲಿಸಬೇಕು ಎಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಗುರುಲಿಂಗಯ್ಯ, ಜಿಲ್ಲಾ ಮಟ್ಟದ ಅಧಿಕಾರಿಗಳು, ಸಮಾಜದ ಮುಖಂಡರು ಕಾರ್ಯಕ್ರಮದಲ್ಲಿ ಇದ್ದರು.



**ಯಳಂದೂರು ಪಟ್ಟಣದ ಎಸ್‌ಬಿಐ ಸರ್ಕಲ್‌ನಲ್ಲಿರುವ ಬಸವೇಶ್ವರರ ಭಾವಚಿತ್ರಕ್ಕೆ ಭಾನುವಾರ ಬಸವ ಜಯಂತಿ ನಿಮಿತ್ತ ಬಿಜೆಪಿ ಬಂಡಾಯ ಅಭ್ಯರ್ಥಿ ಕಿನಕಹಳ್ಳಿ ರಾಚಯ್ಯ ಸೇರಿದಂತೆ ಅನೇಕರು ಪುಷ್ಪನಮನ ಸಲ್ಲಿಸಿದರು. ಚಿತ್ರದಲ್ಲಿ ತಾಲೂಕು ವೀರಶೈವ ಮಹಾಸಭಾದ ಅಧ್ಯಕ್ಷ ಪುಟ್ಟಸುಬ್ಬಪ್ಪ, ರವಿ, ಶಿವು ಇನ್ನಿತರರಿದ್ದಾರೆ.**

## ಜಿಲ್ಲೆಯಲ್ಲಿ ಬಿಜೆಪಿ ಗೆಲ್ಲಿಸುವುದೇ ನನ್ನ ಗುರಿ; ಬಾಲರಾಜು



ಚಾಮರಾಜನಗರ, ಏ.23– ಕಾಂಗ್ರೆಸ್‌ನಲ್ಲಿ ಪಕ್ಷಕ್ಕಾಗಿ ದುಡಿದವರಿಗೆ ಬೆಲೆ ಇಲ್ಲ. ಹೀಗಾಗಿ, ನಾನು ಆ ಪಕ್ಷತೊರೆದು ಯಾವುದೇ ಷರತ್ತು ಇಲ್ಲದೇ ಬಿಜೆಪಿ ಸೇರ್ಪಡೆಯಾಗಿದ್ದೇನೆ ಎಂದು ಕೊಳ್ಳೇಗಾಲ ಮಾಜಿ ಶಾಸಕ ಎಸ್. ಬಾಲರಾಜು ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಾನು 23 ವರ್ಷಗಳ ಕಾಲ ಕಾಂಗ್ರೆಸ್ ಪಕ್ಷದ ಬಲವರ್ಧನೆಗಾಗಿ ದುಡಿದಿದ್ದೇನೆ. ನನ್ನ ಸೇವೆಯನ್ನು ಪರಿಗಣಿಸಿ ಈ ಬಾರಿ ಕೊಳ್ಳೇಗಾಲ ಕ್ಷೇತ್ರಕ್ಕೆ ಅವಕಾಶ ಕೊಡುತ್ತಾರೆ ಎಂದು ನಿರೀಕ್ಷಿಸಿದೆ. ಆದರೆ, ಅವಕಾಶ ಕೊಡಲಿಲ್ಲ. ನನ್ನ ಬೆಂಬಲಿಗರು, ಹಿತೈಷಿಗಳ ಅಭಿಪ್ರಾಯದಂತೆ ಬಿಜೆಪಿ ಸೇರಿದ್ದೇನೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಬಿಜೆಪಿಯನ್ನು ಗೆಲ್ಲಿಸುವುದೇ ನನ್ನ ಗುರಿ. ಇದಕ್ಕಾಗಿ, ಹಗಲು–ರಾತ್ರಿ ದುಡಿಯುತ್ತೇನೆ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಬಿಜೆಪಿ ವರಿಷ್ಠರು ನಿನಗೆ ಮುಂದಿನ ದಿನಗಳಲ್ಲಿ ಒಳ್ಳೆಯದಾಗುತ್ತದೆ. ಪಕ್ಷ ಸೇರಿಕೊಳ್ಳಿ ಎಂದರು. ನಾನಿದ್ದ ಕಾಂಗ್ರೆಸ್‌ನಲ್ಲಿ ದುಡಿಮೆಗೆ ಬೆಲೆ ಇಲ್ಲದ ಕಾರಣ, ಆ ಪಕ್ಷ ತೊರೆಯುವುದು ಒಳ್ಳೆಯದು ಎಂದು ತೀರ್ಮಾನಿಸಿದೆ ಎಂದರು.

ಮಾಜಿ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರು, ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಬಾಲರಾಜು ಅವರು ಧ್ರುವನಾರಾಯಣ್ ಅವರ ಸ್ನೇಹಿತರು, ಧ್ರುವನಾರಾಯಣ್ ಅವರ ಪುತ್ರನಿಗೆ ಬೆಂಬಲ ನೀಡಬೇಕಿತ್ತು. ಮಾನವೀಯ ಮೌಲ್ಯಗಳಿಗೆ ಬೆಲೆ ನೀಡಬೇಕಿತ್ತು ಎಂದಿದ್ದಾರೆ. ಕೃಷ್ಣಮೂರ್ತಿ ಅವರಿಂದ ನಾನು ಮಾನವೀಯ ಮೌಲ್ಯಗಳ ಬಗ್ಗೆ ಪಾಠ ಕಲಿಯಬೇಕಾಗಿಲ್ಲ. ಅವರು (ಕೃಷ್ಣಮೂರ್ತಿ) ತಮಗೆ ಸಹಾಯ ಮಾಡಿದವರಿಗೆ ಮೋಸ ಮಾಡುತ್ತಲೇ ಬಂದಿದ್ದಾರೆ. ಯಡಿಯೂರಪ್ಪ ಹಾಗೂ ಶ್ರೀನಿವಾಸ ಪ್ರಸಾದ್ ಅವರ ಸಹಾಯವನ್ನು ಮರೆತು ಅವರಿದ್ದ ಪಕ್ಷ ತೊರೆದಿದ್ದಾರೆ. ಸಿದ್ದರಾಮಯ್ಯ ಅವರ ಜೊತೆ ಮುಂದಿನ ಚುನಾವಣಾ ಸಮಯಕ್ಕೆ ಕೃಷ್ಣಮೂರ್ತಿ ಇರುವುದಿಲ್ಲ ಎಂದು ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾಡಾ ಅಧ್ಯಕ್ಷ ನಿಜಗುಣರಾಜು, ವಕ್ತಾರ ಅಯ್ಯನಪುರ ಶಿವಕುಮಾರ್, ಮುಖಂಡರಾದ ನೂರೊಂದುಶೆಟ್ಟಿ, ಎಂಆರ್‌ಎಫ್ ಮಹೇಶ್, ಉಮೇಶ್, ಮಂಜುನಾಥ್, ಚಂದ್ರಶೇಖರ್ ಹಾಜರಿದ್ದರು.

## ಅಬಕಾರಿ ಕಾರ್ಯಾಚರಣೆ: ಮದ್ಯ ವಶ

ಚಾಮರಾಜನಗರ, ಏ.23– ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಬಕಾರಿ ಅಕ್ರಮಗಳ ವಿರುದ್ಧ ಕಾರ್ಯಾಚರಣೆ ತೀವ್ರಗೊಳಿಸಿರುವ ಅಬಕಾರಿ ಇಲಾಖೆ ಅಧಿಕಾರಿಗಳು ಅಕ್ರಮವಾಗಿ ಸಾಗಿಸುತ್ತಿದ್ದ ಮದ್ಯ ವಶಪಡಿಸಿಕೊಂಡಿದ್ದಾರೆ.

ಕೊಳ್ಳೇಗಾಲ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಮುಂಭಾಗದಲ್ಲಿ ಗುರುವಾರ ಸಂಜೆ 6.30 ಗಂಟೆ ಸಮಯದಲ್ಲಿ ರಸ್ತೆ ಗಸ್ತು ಮಾಡುತ್ತಿದ್ದಾಗ ದ್ವಿಚಕ್ರ ವಾಹನದಲ್ಲಿ ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದ 4.050 ಲೀಟರ್ ಮದ್ಯ ಹಾಗೂ ವಾಹನವನ್ನು ವಶಪಡಿಸಿಕೊಂಡು ಮೊಕದ್ದಮೆ ದಾಖಲಿಸಲಾಗಿದೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮದ್ಯ ಮತ್ತು ವಾಹನದ ಮೌಲ್ಯ 16940 ರೂ.ಗಳಾಗಿವೆ.

ಕೊಳ್ಳೇಗಾಲ ಪಟ್ಟಣದ ಕುರುಬನ ಕಟ್ಟೆ ರಸ್ತೆಯ ಕೃಷಿ ಉತ್ಪನ್ನ ಮಾರುಕಟ್ಟೆ ಕೇಂದ್ರದ ಮುಂಭಾಗದಲ್ಲಿ ಬುಧವಾರ (ಏ.19) ರಾತ್ರಿ 9.40 ಗಂಟೆ ಸಮಯದಲ್ಲಿ ಗಸ್ತು ಮಾಡುತ್ತಿದ್ದ ವೇಳೆ ದ್ವಿ ಚಕ್ರ ವಾಹನದಲ್ಲಿ ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದ 8.640 ಲೀಟರ್ ಮದ್ಯ ಹಾಗೂ ವಾಹನವನ್ನು ವಶಪಡಿಸಿಕೊಂಡು ಮೊಕದ್ದಮೆ ದಾಖಲಿಸಲಾಗಿದೆ. ಆರೋಪಿ ಪರಾರಿಯಾಗಿದ್ದು, ಈತನ ಪತ್ತೆಗೆ ಕ್ರಮವಹಿಸಲಾಗಿದೆ. ಮದ್ಯ ಮತ್ತು ವಾಹನದ ಮೌಲ್ಯ 28372 ರೂ.ಗಳಾಗಿವೆ ಎಂದು ಅಬಕಾರಿ ಇಲಾಖೆ ಪ್ರಕಟಣೆ ತಿಳಿಸಿದೆ.

## ಹೆಬ್ಬಸೂರು ಸಿದ್ದರಾಜು ನೇಮಕ



ಚಾಮರಾಜನಗರ, ಏ.23– ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಹೆಬ್ಬಸೂರು ಸಿದ್ದರಾಜು ನೇಮಕಗೊಂಡಿದ್ದಾರೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಅನುಮೋದನೆ ಮೇರೆಗೆ ಸಿದ್ದರಾಜು ಅವರನ್ನು ರಾಜ್ಯ ಹಿಂದುಳಿದ ವರ್ಗಗಳ ರಾಜ್ಯ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.

ಮೂರನೇ ಪುಟದಿಂದ

## ಚಾಣಕ್ಯನ ಚಮತ್ಕಾರ


ನಡೆಸಿದೆ. ಗ್ರಾಮಾಂತರ ಪ್ರದೇಶಗಳಿಂದ ಹೆಚ್ಚಿನ ಜನರನ್ನು ಕರೆತರಲು ವಾಹನ ವ್ಯವಸ್ಥೆ ಮಾಡಲಾಗಿದೆ. ಹೆಲಿಪ್ಯಾಡ್ ನಿಂದ ಶಾ ಅವರನ್ನು ಪಟ್ಟಣದ ಕಿತ್ತೂರು ರಾಣಿ ಚೆನ್ನಮ್ಮ ರಸ್ತೆಯಲ್ಲಿ ರೋಡ್ ಶೋ ನಡೆಸಲು ಬಿಜೆಪಿಯವರು ತೀವ್ರ ಪ್ರಯತ್ನ ನಡೆಸಿದರೂ ಭದ್ರತೆಯ ಕಾರಣದಿಂದ ಸಾಧ್ಯವಿಲ್ಲ ಎಂದು ಎಸ್‌ಪಿಜಿ ಅಧಿಕಾರಿಗಳು ನಿರಾ ಕರಿಸಿದ್ದಾರೆ. ಹೆಲಿಪ್ಯಾಡ್‌ನಿಂದ ನೇರವಾಗಿ ಹಳೇ ಬಸ್ ನಿಲ್ದಾಣಕ್ಕೆ ಆಗಮಿಸುವ ಶಾ ವಾಹನದಲ್ಲಿಯೇ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಎಂದು ಮೂಲಗಳು ತಿಳಿಸಿವೆ.

ಇದೇ ತಿಂಗಳ 9ರಂದು ಪ್ರಧಾನಿ ನರೇಂದ್ರ ಮೋದಿ ತಾಲೂಕಿನ ಬಂಡೀಪುರಕ್ಕೆ ಆಗಮಿಸಿದ್ದರು. ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ರಾಜಕೀಯ ಕಾರ್ಯಕ್ರಮ ಹಾಕಿಕೊಳ್ಳದಿದ್ದರೂ ಜನತೆಯಲ್ಲಿ ಸಂಚಲನ ಸೃಷ್ಟಿಸಿದ್ದರು. ಇದರ ಬೆನ್ನಲ್ಲಿಯೇ ಅಮಿತ್ ಶಾ ಪಟ್ಟಣಕ್ಕೆ ಆಗ ಮಿಸಿ ರೋಡ್ ಶೋ ನಡೆಸುತ್ತಿರುವುದು ಬಿಜೆಪಿ ಯಲ್ಲಿ ನವಚೈತನ್ಯ ಮೂಡಿಸಲಿದೆ ಎಂದು ಬಿಜೆಪಿ ಮುಖಂಡರು ಸಂತಸ ವ್ಯಕ್ತಪಡಿಸಿದ್ದಾರೆ.

**ಶಾಸಕರ ಮನವಿ:** ಅಮಿತ್ ಶಾ ರೋಡ್ ಶೋ ಹಿನ್ನೆಲೆಯಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರು ಮತ್ತು ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ಆಗಮಿಸುವಂತೆ ಶಾಸಕ ನಿರಂಜನಕುಮಾರ್ ಮನವಿ ಮಾಡಿದ್ದಾರೆ.

**ಹೆಚ್.ಎಂ.ಗಣೇಶ್ ಪ್ರಸಾದ್ ಟೀಕೆ:** ಜಿಲ್ಲೆಯಲ್ಲಿ ಆಕ್ಸಿಜನ್ ದುರಂತ ಸಂಭವಿಸಿದಾಗ ಜಿಲ್ಲೆಗೆ ಬಾರದ ನಾಯಕರು. ಇದೀಗ ಚುನಾವಣೆ ಬಂದಿದೆ ಎಂದು ಬರ್ತಿದ್ದಾರೆ. ಜನರ ಬಳಿ ಹೋಗಿ ಇವರ 40% ಕಮಿಷನ್ ಬಗ್ಗೆ ಮಾಹಿತಿ ಪಡೆದುಕೊಂಡು ಹೋಗಲಿ. ಅಮಿತ್ ಶಾ ಅವರೇ, ನೀವು ರೋಡ್ ಶೋ ನಡೆಸುವ ಎಡ ಬಲಗಡೆ ಸ್ವಲ್ಪ ಕಣ್ಣಾಯಿಸಿದರೆ ನಿಮ್ಮ ಸರ್ಕಾರವನ್ನ 40% ಸರ್ಕಾರ ಅಂತ ಯಾಕೆ ಕರೆಯುತ್ತಾರೆ ಅಂಥ ಗೊತ್ತಾಗುತ್ತೆ. ರೋಡ್ ಶೋ ಆರಂಭಿಸುವ ಮೈಸೂರು–ಊಟಿ ಹೆದ್ದಾರಿ ಬದಿಯ ಚರಂಡಿ ಮೇಲೆ ಕಾರ್ಯಕರ್ತರು ನಿಲ್ಲಬೇಡಿ. ಈಗಾಗಲೇ ಚರಂಡಿ 40 ಕಡೆ ಭಾರಕ್ಕೆ ಕುಸಿದಿದೆ. ಸೋಲಿನ ಭಯದಿಂದ ಬಿಜೆಪಿಗರು ಅಮಿತ್ ಶಾ ಅವರನ್ನು ಕರೆಸುತ್ತಿದ್ದಾರೆ. ಆಕ್ಸಿಜನ್ ದುರಂತದಲ್ಲಿ ಸಾವನ್ನಪ್ಪಿದ ಕುಟುಂಬಕ್ಕೆ ಬಿಜೆಪಿ ನಾಯಕರು ಸಾಂತ್ವಾನ ಹೇಳಲಿಲ್ಲ. ಕಾಂಗ್ರೆಸ್ ನಾಯಕರು ಸಾವನ್ನಪ್ಪಿದ ಕುಟುಂಬಕ್ಕೆ ತಲಾ 1 ಲಕ್ಷ ಪರಿಹಾರ ಕೊಟ್ಟಿದ್ದಾರೆ ಎಂದು ಕಾಂಗ್ರೆಸ್ ಅಭ್ಯರ್ಥಿ ಗಣೇಶ್ ಪ್ರಸಾದ್ ಬಿಜೆಪಿ ಬಗ್ಗೆ ಟೀಕಿಸಿದ್ದಾರೆ.

## ಪಟ್ಟಾಧಿಕಾರ



ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸೇರಿದಂತೆ ಹಲವು ಮಠಾಧ್ಯಕ್ಷರು ಹಾಗೂ ಗಣ್ಯರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಬಸವಜಯಂತಿ ಹಿನ್ನೆಲೆಯಲ್ಲಿ ಸಿದ್ಧಗಂಗಾ ಮಠದಲ್ಲಿ ಪಟ್ಟಾಭಿಷೇಕ ಕಾರ್ಯಕ್ರಮ ನಡೆಸಲಾಗಿದ್ದು, ಭಕ್ತಾದಿಗಳು ಭಾಗಿಯಾಗಿದ್ದರು. ಇದೇ ವೇಳೆ ಮಾಗಡಿ ತಾಲೂಕಿನ ಕಂಚುಗಲ್ ಬಂಡೆಮಠ ಹಾಗೂ ದೇವನಹಳ್ಳಿ ಬಸವ ಕಲ್ಯಾಣ ಮಠದ ಉತ್ತರಾಧಿಕಾರಿಗಳಿಗೂ ಸಭಾ ಕಾರ್ಯಕ್ರಮದಲ್ಲಿ ಅಭಿದಾನವನ್ನು ಘೋಷಣೆ ಮಾಡಲಾಗಿದ್ದು, ಬಂಡೆ ಮಠದ ಉತ್ತರಾಧಿಕಾರಿಗಳಿಗೆ ಶ್ರೀ ಮಹಾಲಿಂಗ ಸ್ವಾಮೀಜಿ, ದೇವನಹಳ್ಳಿಯ ಬಸವಕಲ್ಯಾಣ ಮಠದ ಉತ್ತರಾಧಿಕಾರಿಗಳಿಗೆ ಶ್ರೀ ಸದಾಶಿವ ಸ್ವಾಮೀಜಿ ಎಂಬ ಅಭಿದಾನ ನೀಡಲಾಗಿದೆ. ಸಿದ್ಧಗಂಗೆಯ ಶ್ರೀ ಶಿವಕುಮಾರ ಶ್ರೀಗಳ ಗದ್ದುಗೆಗೆ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನಿರಾಭಾರಿ ನಿರಂಜನ ಜಂಗಮಪಟ್ಟಾಧಿಕಾರ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು.

## ಪ್ರಿಯಾಂಕ ಗಾಂಧಿ ಸಂಚಲನ

ಗಿರಿಜನ ಹಾಗೂ ಇತರೆ ಮಹಿಳೆಯರೊಂದಿಗೆ ಸಂವಾದ ನಡೆಸಿ ಅವರ ಸಮಸ್ಯೆಗಳನ್ನು ಆಲಿಸಿ, ಅದರ ಪರಿಹಾರದ ಬಗ್ಗೆ ಚರ್ಚೆ ನಡೆಸಿದ ನಂತರ ಹನೂರಿನ ಕಾಂಗ್ರೆಸ್ ಅಭ್ಯರ್ಥಿ ಶಾಸಕ ಆರ್.ನರೇಂದ್ರ ಪರ ಪ್ರಚಾರ ಮಾಡಲಿದ್ದಾರೆ. ಸಂಜೆ 4.15ಕ್ಕೆ ಹನೂರಿನಿಂದ ಹೊರಡುವ ಅವರು, 5.30ಕ್ಕೆ ಕೆ.ಆರ್.ನಗರದಲ್ಲಿ ನಿರ್ಮಿಸಿರುವ ಹೆಲಿಪ್ಯಾಡ್‌ನಲ್ಲಿ ಇಳಿದು ಅಲ್ಲಿನ ತೋಪಮ್ಮನ ದೇವಸ್ಥಾನ, ಅಂಬೇಡ್ಕರ್ ಪುತ್ಥಳಿ ಮಾರ್ಗವಾಗಿ ಮುನಿಸಿಪಾಲಿಟಿ ಆಫೀಸ್ ಸರ್ಕಲ್‌ವರೆಗೆ ಸುಮಾರು 2 ಕಿ.ಮೀ. ದೂರ ರೋಡ್ ಶೋ ನಡೆಸಿ ಕೆ.ಆರ್.ನಗರ ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಪರ ಪ್ರಚಾರ ಮಾಡಲಿದ್ದಾರೆ. ಈ ಪ್ರವಾಸದಲ್ಲಿ ಪ್ರಿಯಾಂಕ ಗಾಂಧಿ ಅವರಿಗೆ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಸಾಥ್ ನೀಡಲಿದ್ದಾರೆ. ಸಂಜೆ 6.45ಕ್ಕೆ ಕೆ.ಆರ್.ನಗರದಿಂದ ಹೊರಟು ಮೈಸೂರಿಗೆ ಆಗಮಿಸಲಿರುವ ಪ್ರಿಯಾಂಕ ಗಾಂಧಿ, ಇಲ್ಲಿನ ರ್‍ಯಾಡಿಸಂ ಬ್ಲ್ಯೂ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ ಎಂದು ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ತಿಳಿಸಿದ್ದಾರೆ.

## 40 ಸೀಟ್‌ಗೆ ಸೀಮಿತಗೊಳಿಸಿ

ಆ ಪ್ರಕಾರ ಜನಸಂಖ್ಯೆ ಆಧರಿಸಿ ಆಯಾ ಸಮಾಜಗಳಿಗೆ ಮೀಸಲಾತಿ ಮತ್ತು ದೇಶದ ಸಂಪತ್ತು ಹಂಚಿಕೆ ಮಾಡಿ, ನೀರಿನದು ನೀರಿಗೆ, ಹಾಲಿನದು ಹಾಲಿಗೆ ಆಗಲಿ ಎಂದು ಹೇಳಿದರು. ಹಿಂದುಳಿದ ವರ್ಗದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದೇನೆ ಎಂದು ನನ್ನ ವಿರುದ್ಧ ಬಿಜೆಪಿಯವರು ಆರೋಪಿಸಿದ್ದಾರೆ. ಆದರೆ, ನಾನು ಯಾವುದೇ ಸಮಾಜದ ಬಗ್ಗೆ ಮಾತನಾಡಿಲ್ಲ. ವ್ಯಕ್ತಿಯ ಬಗ್ಗೆ ಮಾತನಾಡಿದ್ದೇನೆ ಎಂದು ಸ್ಪಷ್ಟಪಡಿಸಿದರು. ಆರ್‌ಎಸ್‌ಎಸ್, ಬಿಜೆಪಿ ತತ್ವ, ಸಿದ್ಧಾಂತಕ್ಕೆ ನಾವು ವಿರುದ್ಧವಾಗಿದ್ದೇವೆ. ಅವರಿಗೆ ನಾವು ಹೆದರುವುದಿಲ್ಲ, ಬೇಕಾದ್ದು ಆಗಲಿ ಅವರ ಚಿಂತನೆಗಳ ವಿರುದ್ಧ ಹೋರಾಡುತ್ತೇವೆ, ಸೋಲಿಸಿಯೇ ತೀರುತ್ತೇವೆ ಎಂದರು.

ನಗರದ ಶಿವಾಜಿ ಸರ್ಕಲ್ ನಿಂದ ಆರಂಭಗೊಂಡ ರಾಹುಲ್ ಗಾಂಧಿ ರೋಡ್ ಶೋ ಕಿಕ್ಕಿರಿದ ಜನರ ನಡುವೆ ಗಾಂಧಿ ಚೌಕಿ, ಬಸವೇಶ್ವರ ವೃತ್ತ, ಡಾ. ಬಿ.ಆರ್.ಅಂಬೇಡ್ಕರ್ ವೃತ್ತದ ಮೂಲಕ ಸಾಗಿ ಕನಕದಾಸ ವೃತ್ತ ತಲುಪಿತು.

ಸುಮಾರು ಒಂದು ಕಿ.ಮೀ. ರೋಡ್ ಶೋ ಒಂದು ಗಂಟೆ ನಡೆಯಿತು. ರೋಡ್ ಶೋ ಸಾಗುವ ಮಾರ್ಗದಲ್ಲಿ ಕಾಂಗ್ರೆಸ್ ಪಕ್ಷದ ಧ್ವಜಗಳು, ಬ್ಯಾನರ್‌ಗಳು ರಾರಾಜಿಸಿದವು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ, ವಿಷ್ಣುನಾಥನ್, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ, ಜಿಲ್ಲೆಯ ವಿವಿಧ ಕ್ಷೇತ್ರಗಳ ಅಭ್ಯರ್ಥಿಗಳಾದ ಶಿವಾನಂದ ಪಾಟೀಲ, ಯಶವಂತರಾಯ ಗೌಡ ಪಾಟೀಲ, ಸಿ.ಎಸ್.ನಾಡಗೌಡ, ಅಬ್ದುಲ್ ಹಮೀದ್ ಮುಶ್ರಫ್, ಅಶೋಕ ಮನಗೂಳಿ, ವಿಠಲ ಕಟಕಧೋಂಡ, ಶರಣಪ್ಪ ಸುಣಗಾರ ಇದ್ದರು.

## ಚುನಾವಣಾ ಬೆಟ್ಟಿಂಗ್ ಭರಾಟೆ

ಬಂಡಿಸಿದ್ದೇಗೌಡ ಅವರ ಕುಟುಂಬಗಳು ಅರಕೆರೆಯಲ್ಲಿ ಹಿಂದಿನಿಂದಲೂ ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದಾರೆ. ಇದು ಹೈವೋಲ್ಟೇಜ್ ಯುದ್ಧಕ್ಕೆ ದಾರಿ ಮಾಡಿಕೊಟ್ಟಿದೆ. ಈ ಬಾರಿ ಸ್ಥಳೀಯ ಅಭ್ಯರ್ಥಿ ಬಿಜೆಪಿಯ ಇಂಡುವಾಳು ಸಚ್ಚಿದಾನಂದ ಕೂಡ ಚುನಾವಣಾ ಕಣದಲ್ಲಿ ಗೆಲುವು ಸಾಧಿಸಲು ಪೈಪೋಟಿ ನಡೆಸಿದ್ದಾರೆ. ರವೀಂದ್ರ ಶ್ರೀಕಂಠಯ್ಯ ಮತ್ತು ರಮೇಶ್ ಬಾಬು ಬಂಡಿಸಿದ್ದೇಗೌಡ ನಡುವೆ ನೇರ ಹಣಾಹಣಿ ನಡೆಯಲಿದೆ ಎಂದು ಹಲವರು ಭವಿಷ್ಯ ನುಡಿದಿದ್ದರೂ, ಗಮನಾರ್ಹ ಪ್ರಭಾವ ಹೊಂದಿರುವ ಸಚ್ಚಿದಾನಂದ ಅವರೊಂದಿಗೆ ಇದು ತ್ರಿಕೋನ ಹೋರಾಟದ ಸಾಧ್ಯತೆಯಿದೆ.

ಅಭ್ಯರ್ಥಿಗಳ ಪರವಾಗಿ ಬೆಟ್ಟಿಂಗ್ ಎಂಬುದು ಈಗ ದಿನನಿತ್ಯದ ಚರ್ಚೆಯಾಗಿದೆ ಮತ್ತು ಹಳ್ಳಿಗಾಡಿನಾದ್ಯಂತ ಪಸರಿಸಿದೆ. ಕೆಲವು ಯುವಕರು ಸೋಷಿಯಲ್ ಮೀಡಿಯಾವನ್ನು ಬೆಟ್ಟಿಂಗ್‌ಗೆ ತೆಗೆದುಕೊಂಡಿದ್ದಾರೆ ಮತ್ತು ಕೆಲವು ಸ್ಥಳೀಯರು ತಮ್ಮ ಹಳ್ಳಿಗಳಲ್ಲಿ ಆಡು ಮತ್ತು ಕುರಿಗಳ ಬೆಟ್ಟಿಂಗ್ ಕಟ್ಟುತ್ತಿದ್ದು ಇನ್ನೂ ಕೆಲವರು ಒಂದು ಹೆಜ್ಜೆ ಮುಂದೆ ಹಿಗಿ ಪಕ್ಷಗಳ ಧ್ವಜಗಳನ್ನು ಬೆಟ್ಟಿಂಗ್ ಕಟ್ಟುತ್ತಿರುವ ಪ್ರಾಣಿಗಳ ಕುತ್ತಿಗೆಗೆ ಕಟ್ಟಲಾಗುತ್ತದೆ.

ಮತ ಎಣಿಕೆಯ ದಿನದವರೆಗೂ ಈ ಬಟ್ಟೆಯ ಧ್ವಜಗಳನ್ನು ತೆಗೆಯಲಾಗುವುದಿಲ್ಲ. ಚುನಾವಣಾ ಫಲಿತಾಂಶಗಳು ಪ್ರಕಟವಾದ ನಂತರ ಪ್ರಾಣಿಗಳನ್ನು ನಂತರ ವಿನಿಮಯ ಮಾಡಿಕೊಳ್ಳಲಾಗುತ್ತದೆ ಮತ್ತು ವಿಜೇತರು ಅವುಗಳನ್ನು ಮನೆಗೆ ಕೊಂಡೊಯ್ಯಬಹುದು. ಧ್ವಜವನ್ನು ಕಟ್ಟುವುದರ ಹೊರತಾಗಿ, ಪ್ರಾಣಿಗಳ ಮೇಲೆ ಬಣ್ಣದ ಇತರ ಗುರುತುಗಳನ್ನು ಸಹ ಮಾಡಲಾಗುತ್ತದೆ ಮತ್ತು ಬೆಟ್ಟಿಂಗ್ ಅಗತ್ಯತೆಗಳ ಪ್ರಕಾರ ಪ್ರಾಣಿಗಳನ್ನು ಗುರುತಿಸಲಾಗಿದೆ ಮತ್ತು ಸಂಖ್ಯೆಯನ್ನು ನೀಡಲಾಗಿದೆ.

ಇದಲ್ಲದೆ ಇನ್ನೂ ಕೆಲವರು ಬೆಟ್ಟಿಂಗ್‌ಗಾಗಿ ತಮ್ಮ ಅರ್ಧ ಎಕರೆ ಅಥವಾ ಒಂದು ಎಕರೆವರೆಗಿನ ಕೃಷಿ ಭೂಮಿಯನ್ನು ರವೀಂದ್ರ ಶ್ರೀಕಂಠಯ್ಯ ಮತ್ತು ರಮೇಶ್ ಬಾಬು ಬಂಡಿಸಿದ್ದೇಗೌಡರ ಬೆಂಬಲಿಗರು ಬೆಟ್ಟಿಂಗ್‌ಗೆ ಇಡುತ್ತಿದ್ದಾರೆ. ಜೊತೆಗೆ ಬೆಟ್ಟಿಂಗ್ ನಗದು ರೂ. 50,000ರಿಂದ ರೂ. 1 ಲಕ್ಷದ ವರೆಗೆ ಇದ್ದು ಮೇ 10 ರ ಮತದಾನದ ದಿನದ ನಂತರ ಈ ಮೊತ್ತವು ಹೆಚ್ಚಾಗಲಿದೆ ಎಂದು ಹಲವರ ಅಭಿಪ್ರಾಯ, ಪಂತದ ನಿಖರವಾದ ನಿಯಮಗಳು ಮತ್ತು ಷರತ್ತುಗಳನ್ನು ಚರ್ಚಿಸಲಾಗಿದೆ ಮತ್ತು ನಿಖರವಾದ ಕುರಿ ಅಥವಾ ಮೇಕೆ, ಬೈಕ್ ಅಥವಾ ಸ್ಕೂಟರ್ ಅಥವಾ ಭೂಮಿಯನ್ನು ಬೆಟ್ಟಿಂಗ್‌ಗಾಗಿ ಪಣಕ್ಕಿಡಲಾಗುತ್ತಿದೆ.

# ಶ್ರೀನಿವಾಸ್ ಪ್ರಸಾದ್ ಮಾತಿಗೆ ಬಿಜೆಪಿಯಲ್ಲಿ ಮನ್ನಣೆ ಇಲ್ಲ

- ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ ಆರೋಪ
- ರಾಜ್ಯಪಾಲರ ಹುದ್ದೆ ನಿರಾಕರಿಸಿದ್ದ ಪ್ರಸಾದ್
- ನನಗೆ ಅಧಿಕಾರ ಕೊಡಿಸಲು ನಿರಂತರ ಪ್ರಯತ್ನಿಸಿದ್ದರು
- ನಾನು ಕಾಂಗ್ರೆಸ್ ಸೇರಿದ್ದಕ್ಕೆ ಪ್ರಸಾದ್‌ಗೆ ಬೇಸರವಿಲ್ಲ

ಮೈಸೂರು,ಏ.23(ಎಂಟಿವೈ)– ರಾಜ್ಯಪಾಲರ ಹುದ್ದೆ ನೀಡುವ ಆಫರ್ ನಿರಾಕರಿಸಿದ್ದ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರ ಮಾತಿಗೆ ಬಿಜೆಪಿಯಲ್ಲಿ ಮನ್ನಣೆ ಸಿಗುತ್ತಿಲ್ಲ. ನನಗೆ ಅಧಿಕಾರ ಕೊಡಿಸಲು ಪ್ರಯತ್ನಿಸಿದ ಮುತ್ಸದ್ಧಿ ರಾಜಕಾರಣಿಯನ್ನು ಅಗೌರವದಿಂದ ನಡೆಸಿಕೊಳ್ಳಲಾಗುತ್ತಿದೆ ಎಂದು ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ ಆರೋಪಿಸಿದ್ದಾರೆ.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದ ಮಾಜಿ ಸಚಿವ ವಿ.ಶ್ರೀನಿವಾಸಪ್ರಸಾದ್ ಅವರು ಬಿಜೆಪಿ ಸೇರ್ಪಡೆ ಬಳಿಕ ರಾಜ್ಯಪಾಲರಾಗುವ ಅವಕಾಶ ಇತ್ತು. ಅದನ್ನು ತಿರಸ್ಕರಿಸಿದರು. ಅಂಥ ಹುದ್ದೆ ಇಷ್ಟವಿಲ್ಲವೆಂದು ನೇರವಾಗಿ ಹೇಳಿದರು. ಗೆಲುವು ಪಡೆದು ರಾಜಕೀಯ ನಿವೃತ್ತಿಯಾಗುವಂತೆ ಬೆಂಬಲಿಗರ ಒತ್ತಡ ಇದ್ದರಿಂದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದರು. ಬದಲಾದ ರಾಜಕೀಯ ಪರಿಸ್ಥಿತಿಯಿಂದ ಅವರೊಂದಿಗೆ ಬಿಜೆಪಿಗೆ ಸೇರ್ಪಡೆಯಾದೆ. ಚಾಮರಾಜನಗರದಲ್ಲಿ ಕಾಂಗ್ರೆಸ್ ವಿರುದ್ಧ ಗೆಲ್ಲುವುದು ಸುಲಭವಾಗಿರಲಿಲ್ಲ. ಆ ಭಾಗದಲ್ಲಿ ಜನರೊಂದಿಗೆ ಬಹಳ ವರ್ಷಗಳ ಒಡನಾಟ ಇದ್ದರಿಂದ ಗೆಲುವು ಪಡೆದರು. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನನಗೆ ಅಧಿಕಾರ ಕೊಡಿಸಲು ನಿರಂತರ ಪ್ರಯತ್ನಿಸಿದರು ಎಂದರು.

**ಸಭೆಯಿಂದ ಹೊರಗೆ ಕಳುಹಿಸಿದರು:** ಬಿಜೆಪಿಯಲ್ಲಿ ಪ್ರಸಾದ್ ಅವರ ಮಾತಿಗೂ ಗೌರವ ಇಲ್ಲದ ಪರಿಸ್ಥಿತಿ ಇದೆ. ನನ್ನನ್ನು ಪ್ರಸಾದ್ ನಿಗಮ ಮಂಡಳಿ ಅಧ್ಯಕ್ಷರನ್ನಾಗಿಸಲು ಪ್ರಯತ್ನಿಸಿದರು. 2 ಬಾರಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದೆ. ಎಂಎಲ್‌ಸಿ ಚುನಾವಣೆಯಲ್ಲೂ ಸ್ಪರ್ಧಿಸಲು ಪ್ರಯತ್ನಿಸಿದೆ. ಈ ವಿಚಾರವಾಗಿ ಪ್ರತಾಪಸಿಂಹ ಅವರೊಂದಿಗೆ ಮಾತಾಡಿದಾಗ ನಾನು ಸ್ಪರ್ಧೆಗೆ ಅರ್ಹನಲ್ಲ ಎಂಬಂತೆ ವರ್ತಿಸಿದರು. ಚುನಾವಣೆಯಲ್ಲಿ ಸೋತ ರಘು ಕೌಟಿಲ್ಯ ಅವರಿಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನದ ಜತೆಗೆ ಸಚಿವ ಸಂಪುಟ ದರ್ಜೆ ಸ್ಥಾನಮಾನ ದೊರೆಯಿತು. ನನ್ನ ವಿಚಾರವಾಗಿ ಪ್ರಸಾದ್ ಅವರಿಗೆ ಅಗೌರವ ಮಾಡಿದರು. ಇನ್ನೊಮ್ಮೆ ಹೋಗಿ ಯಾರ ಬಾಗಿಲ ಬಳಿಯೂ ನಿಲ್ಲುವುದು ನನಗೆ ಇಷ್ಟವಿರಲಿಲ್ಲ. ಪಕ್ಷ ಸಂಘಟನೆಯಲ್ಲೂ ಯಾವುದೇ ಸ್ಥಾನಮಾನ ಕೊಡಲಿಲ್ಲ. ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್ ಆಹ್ವಾನದ ಮೇರೆಗೆ ಸಭೆಗೆ ಹೋದಾಗಲೂ ಹೊರಗೆ ಕಳುಹಿಸಿ ಅವಮಾನ ಮಾಡಿದರು ಎಂದು ವಿಷಾದಿಸಿದರು.

### ಸಂಸದ ಪ್ರತಾಪ ಸಿಂಹ ಸಾಮರಸ್ಯ ಕದಡುತ್ತಿದ್ದಾರೆ

ಬಿಜೆಪಿ ನಾಯಕರು ವರುಣ ವಿಧಾನಸಭಾ ಕ್ಷೇತ್ರದಲ್ಲಿ ಸಂಸದ ಪ್ರತಾಪಸಿಂಹ ಮೂಲಕ ಜಾತಿ ಜಾತಿಗಳನ್ನು ಎತ್ತಿ ಕಟ್ಟಿ, ಕೋಮು ಸೌಹಾರ್ದತೆ ಹದಗೆಡಿಸಲು ಮುಂದಾಗಿದ್ದಾರೆ. ಇದುವರೆಗೆ ಮೈಸೂರು–ಚಾಮರಾಜನಗರ ಜಿಲ್ಲೆಗಳಲ್ಲಿ ಜಾತಿ ಸಂಘರ್ಷ ಆಗಿಲ್ಲ. ಯಾವ ಜಾತಿಯ ವಿರುದ್ಧವೂ ಇನ್ನೊಂದು ಜಾತಿಯನ್ನು ಎತ್ತಿಕಟ್ಟಲೂ ಆಗುವುದಿಲ್ಲ. ಆದರೆ ಇದೀಗ ಸಂಸದ ಪ್ರತಾಪ ಸಿಂಹ ಆಗಮನದ ನಂತರ ಶಾಂತಿ ಕದಡುವ ವಾತಾವರಣ ಸೃಷ್ಟಿಯಾಗುವ ಆತಂಕವಿದೆ ಎಂದು ವಿಷಾದಿಸಿದರು.

ವರುಣದಲ್ಲಿ ಸಚಿವ ವಿ.ಸೋಮಣ್ಣ ಸ್ಪರ್ಧೆಯ ಬಳಿಕ ಇದೇ ಪ್ರತಾಪಸಿಂಹ, ಸೋಮಣ್ಣ ನನ್ನ ಕೈ ಹಿಡಿದು ಕೇಳಿಕೊಂಡರು. ವರುಣದಲ್ಲಿ ಗೆಲ್ಲಲು ಶಕ್ತಿ ಇದೆ. ಸಿದ್ದರಾಮಯ್ಯ ಕಟ್ಟಿ ಹಾಕಲು ಪ್ಲ್ಯಾನ್ ಮಾಡಿದ್ದೇವೆ ಎಂದೆಲ್ಲಾ ಹೇಳಿದರು. ಆದರೆ, ನಾಮಪತ್ರ ಸಲ್ಲಿಕೆ ಜಾಹೀರಾತಿನಲ್ಲಿ ನನ್ನ ಫೋಟೋ ಇರಲಿಲ್ಲ. ಸಿದ್ದರಾಮಯ್ಯ ಭೇಟಿ ಮಾಡದಂತೆ, ಮನೆ ಮುಂದೆ ಧರಣಿ ಮಾಡುವುದಾಗಿ ಪ್ರತಾಪಸಿಂಹ ಬೆದರಿಸಿದರು ಎಂದು ತಿಳಿಸಿದರು.

ಸಿದ್ದರಾಮಯ್ಯ ನಮ್ಮ ಮನೆಗೆ ಬಂದು ಮಾತುಕತೆ ನಡೆಸಿದರು. ಕೊನೆ ಚುನಾವಣೆ ನಮ್ಮೊಂದಿಗೆ ಇರುವಂತೆ ಕೇಳಿದರು. ಈ ವಿಚಾರವಾಗಿ ವಿ.ಶ್ರೀನಿವಾಸಪ್ರಸಾದ್ ಅವರೊಂದಿಗೆ ಚರ್ಚೆ ಮಾಡಿದಾಗ ನಿಮ್ಮ ಭವಿಷ್ಯದ ಹಿತದೃಷ್ಟಿಯಿಂದ ಚರ್ಚೆ ಮಾಡಿ ನಿಮಗೆ ಸೂಕ್ತ ಅನ್ನಿಸುವುದನ್ನು ತೀರ್ಮಾನ ಮಾಡುವಂತೆ ಸಲಹೆ ನೀಡಿದರು. ನನ್ನ ಮತ್ತು ಪ್ರಸಾದ್ ಅವರ ಸ್ನೇಹ ಮುಂದುವರಿಯಲಿದೆ ಕಾಂಗ್ರೆಸ್ ಸೇರ್ಪಡೆ ವಿಚಾರವಾಗಿ ಪ್ರಸಾದ್ ಬೇಸರ ಮಾಡಿಕೊಂಡಿಲ್ಲ ಯಾವುದೇ ಕಂಡಿಷನ್ ಹಾಕಿ ಕಾಂಗ್ರೆಸ್ ಸೇರಿಲ್ಲ ಸಿದ್ದರಾಮಯ್ಯ ಅವರು ಭರವಸೆ ಕೊಟ್ಟು ಕಾಂಗ್ರೆಸ್‌ಗೆ ಸೇರಿಸಿಕೊಂಡಿಲ್ಲ ಸ್ನೇಹಕ್ಕಾಗಿ ಬಂದಿದ್ದೇವೆ ವಿ.ಶ್ರೀನಿವಾಸ ಪ್ರಸಾದ್ ಅವರ ಜತೆ ಬಿಜೆಪಿಗೆ ಹೋದಾಗಲೂ ಕಂಡಿಷನ್ ಹಾಕಿರಲಿಲ್ಲ. ಸ್ನೇಹ ಅಷ್ಟೇ ಎಂದು ಸ್ಪಷ್ಟಪಡಿಸಿದರು.

**ಸಿದ್ದರಾಮಯ್ಯ ಯಾರ ದ್ವೇಷಿಯೂ ಅಲ್ಲ:** ಒಕ್ಕಲಿಗರು, ಲಿಂಗಾಯತ ನಾಯಕರನ್ನು ಸಿದ್ದರಾಮಯ್ಯ ತುಳಿದಿದ್ದಾರೆ ಎಂದು ಸಂಸದ ಪ್ರತಾಪಸಿಂಹ ಆರೋಪ ಮಾಡಿದ್ದಾರೆ. ಸಿದ್ದರಾಮಯ್ಯ ಯಾವ ಸಮುದಾಯದವರನ್ನು ತುಳಿದಿಲ್ಲ. ಮುಖ್ಯವಾಗಿ ಲಿಂಗಾಯತ, ಒಕ್ಕಲಿಗರ ವಿರೋಧಿನೂ ಅಲ್ಲ. ಎಲ್ಲಿಂದಲೋ ಬಂದಿರುವ ಪ್ರತಾಪ ಸಿಂಹ ಸುಳ್ಳು ಹೇಳುತ್ತಿದ್ದಾರೆ. ಈ ಹಿಂದೆ ಕೆ.ಎನ್.ಪುಟ್ಟಬುದ್ಧಿ, ವೃಷಭೇಂದ್ರಪ್ಪ, ಜಿ.ಟಿ.ದೇವೇಗೌಡ, ವಕೀಲ ವೈ.ಮಹೇಶ್, ಚಿದಾನಂದ, ಕೃಷ್ಣ ಮಾದೇಗೌಡ, ಆರೀಫ್ ಹುಸೇನ್, ನಾರಾಯಣ, ಬಿ.ಎಂ.ರಾಮು, ಕೆ.ಮರೀಗೌಡ ಸಹಿತ ಎಲ್ಲಾ ಸಮುದಾಯದ ನಾಯಕರು ಸಿದ್ದರಾಮಯ್ಯ ಜತೆ ಇದ್ದೆವು. ಅವರು ಯಾರನ್ನೂ ತುಳಿಯುವ ಪ್ರಯತ್ನ ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು.

ಸಂಸದ ವಿ.ಶ್ರೀನಿವಾಸಪ್ರಸಾದ್ ಅವರ ಮನೆಗೆ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಬಂದಾಗ ಮೈಸೂರು ಭಾಗದಲ್ಲಿ ಒಂದೇ ಒಂದು ಅಭಿವೃದ್ಧಿ ಕೆಲಸಗಳಾಗಿಲ್ಲ ಎಂದು ಪ್ರಸಾದ್ ಅವರು ನೇರವಾಗಿ ಹೇಳಿದರು. ಒಮ್ಮೆಯಾದರೂ ಪ್ರತಾಪಸಿಂಹ ತಾಲೂಕು ಕಚೇರಿಗೆ ಭೇಟಿ ನೀಡಿದ್ದರೆ ಪರಿಸ್ಥಿತಿ ಯಾವ ಮಟ್ಟದಲ್ಲಿದೆ, ತಿಳಿಯುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಮುಖಂಡರಾದ ಶಿವಕುಮಾರ್, ಮಾವಿನ ಹಳ್ಳಿ ರವಿ, ಕುಮಾರಸ್ವಾಮಿ ಇದ್ದರು.

## ಭುಗತಗಳ್ಳಿ ಗ್ರಾಮದಲ್ಲಿ ಸಚಿವ ಸೋಮಣ್ಣಗೆ ಮುತ್ತಿಗೆ ಯತ್ನ

- ದಿನದಿಂದ ದಿನಕ್ಕೆ ಕಾವೇರುತ್ತಿರುವ ವರುಣ ಕ್ಷೇತ್ರದ ಚುನಾವಣಾ ಕಣ
- ಕಾಂಗ್ರೆಸ್ ಬೆಂಬಲಿಗರಿಂದ ಪ್ರಚಾರಕ್ಕೆ ತಡೆ ಆರೋಪ

ಮೈಸೂರು, ಏ.23(ಎಂಟಿವೈ)– ವರುಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯೂ ಆದ ಸಚಿವ ವಿ.ಸೋಮಣ್ಣ ಮತ ಯಾಚಿಸಲು ಮೈಸೂರು ತಾಲೂಕಿನ ಭುಗತಗಳ್ಳಿ ಗ್ರಾಮಕ್ಕೆ ಭಾನುವಾರ ಬಂದಾಗ ಯುವಕರ ಗುಂಪೊಂದು ಪ್ರಚಾರಕ್ಕೆ ಅಡ್ಡಿಪಡಿಸಿ, ಅವರಿಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದ ಘಟನೆ ಜರುಗಿದೆ.

ಮತ ಯಾಚನೆಗೆ ಆಗಮಿಸುತ್ತಿದ್ದಂತೆಯೇ ಸಚಿವ ಸೋಮಣ್ಣಗೆ ಗ್ರಾಮದ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ತಾವು ಸಚಿವರಾಗಿದ್ದಾಗ ವರುಣ ವಿಧಾನಸಭಾ ಕ್ಷೇತ್ರಕ್ಕೆ ಯಾವುದೇ ಕೊಡುಗೆ ನೀಡಿಲ್ಲ. ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ನೀಡದೇ ತಾರತಮ್ಯ ನೀತಿ ಅನುಸರಿಸಿದ್ದೀರಿ. ಇದೀಗ ಮತ ಯಾಚಿಸಲು ಯಾಕೆ ಬಂದಿದ್ದೀರಿ? ಎಂದು ತೀಕ್ಷ್ಣವಾಗಿ ಪ್ರಶ್ನಿಸಿದರು.

ಬಿಜೆಪಿ ಸರ್ಕಾರದಿಂದ ದಲಿತರ ಮೇಲೆ ದೌರ್ಜನ್ಯ ಹೆಚ್ಚಾಗಿದೆ. ಡಾ. ಬಿ.ಆರ್.ಅಂಬೇಡ್ಕರ್ ನೀಡಿರುವ ಸಂವಿಧಾನವನ್ನೇ ಬದಲಿಸುವುದಾಗಿ ಹೇಳಿಕೆ ನೀಡಿ, ಸಂವಿಧಾನದ ಆಶಯದ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದೀರಿ. ನಾವು ಯಾಕೆ ನಿಮಗೆ ಮತ ಹಾಕಬೇಕು ಎಂದು ಪ್ರಶ್ನಿಸಿದರು.

ಈ ವೇಳೆ ಅಲ್ಲಿಯೇ ಇದ್ದ ಸೋಮಣ್ಣ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ಹಾಗೂ ತಳ್ಳಾಟ–ನೂಕಾಟ ನಡೆದು ಸ್ಥಳದಲ್ಲಿ ಪ್ರಕ್ಷುಬ್ಧ ವಾತಾವರಣ ಉಂಟಾಗಿತ್ತು ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದ ನಂತರ ಸೋಮಣ್ಣ ಅವರು ಪ್ರಚಾರವನ್ನು ಮುಂದುವರೆಸಿದರು.

### ಜಿಲ್ಲಾ ಚುನಾವಣಾಧಿಕಾರಿಗಳಿಗೆ ಕಾನೂನು ಪ್ರಕೋಷ್ಠದಿಂದ ದೂರು

ಮೈಸೂರು ಗ್ರಾಮಾಂತರ ಜಿಲ್ಲಾ ಬಿಜೆಪಿ ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕ, ವಕೀಲ ಸಿ.ಕೆ.ರುದ್ರಮೂರ್ತಿ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಲಿಖಿತವಾಗಿ ದೂರು ನೀಡಿದ್ದು, ಭಾನುವಾರ ಬೆಳಗ್ಗೆ (ಏ.23) 10 ರಿಂದ 11 ಗಂಟೆಯಲ್ಲಿ ವರುಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಅವರು ಮೈಸೂರು ತಾಲೂಕಿನ ಭುಗತಗಳ್ಳಿ ಗ್ರಾಮದಲ್ಲಿ ಪ್ರಚಾರ ನಡೆಸಲು ಆಗಮಿಸಿದ್ದಾಗ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಸಿದ್ದರಾಮಯ್ಯ ಅಭಿಮಾನಿಗಳು ಪ್ರಚಾರಕ್ಕೆ ತಡೆಯೊಡ್ಡಿದ್ದಾರೆ. ಉದ್ದೇಶಪೂರ್ವಕವಾಗಿ ಪ್ರಚಾರಕ್ಕೆ ಅಡ್ಡಿಪಡಿಸಿ ಅಸಭ್ಯವಾಗಿ ವರ್ತಿಸಿದ್ದಾರೆ. ಇವರ ವಿರುದ್ಧ ಕ್ರಮ ಕೈಗೊಂಡು ಚುನಾವಣಾ ಪ್ರಚಾರಕ್ಕೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕೆಂದು ದೂರಿನಲ್ಲಿ ಮನವಿ ಮಾಡಿದ್ದಾರೆ.

### ಕಾರ್ಯಕರ್ತರು ಗೌರವದಿಂದ ನಡೆದುಕೊಳ್ಳಿ: ಡಿಕೆಶಿ ಖಡಕ್ ಸೂಚನೆ



ವರುಣಾ ಕ್ಷೇತ್ರದ ಭುಗತಹಳ್ಳಿ ಗ್ರಾಮದಲ್ಲಿ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಅವರಿಗೆ ಕಾಂಗ್ರೆಸ್ ಕಾರ್ಯಕರ್ತರು ಮುತ್ತಿಗೆ ಹಾಕಿ ಪ್ರಚಾರಕ್ಕೆ ಅಡ್ಡಿಪಡಿಸಿದನ್ನು ಖಂಡಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಕಾರ್ಯಕರ್ತರು ಗೌರವದಿಂದ ನಡೆದುಕೊಳ್ಳಬೇಕು. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಮತಯಾಚನೆ ಮಾಡುವ ಹಕ್ಕಿದೆ. ಯಾರು ಎಲ್ಲಿ ಬೇಕಾದರೂ ಪ್ರಚಾರ ಮಾಡಬಹುದು. ಹೀಗಾಗಿ ಕಾಂಗ್ರೆಸ್ ಕಾರ್ಯಕರ್ತರು ಯಾರಿಗೂ ಮುತ್ತಿಗೆ ಹಾಕಬಾರದು ಹಾಗೂ ಪ್ರಚಾರಕ್ಕೆ ಅಡ್ಡಿಪಡಿಸಬಾರದೆಂದು ಖಡಕ್ ಸೂಚನೆ ನೀಡಿದ್ದಾರೆ.



ಕೃಷ್ಣರಾಜ ವಿಧಾನ ಸಭಾ ಕ್ಷೇತ್ರದ ಜೆಡಿಎಸ್ ಕಚೇರಿಯಲ್ಲಿ ಭಕ್ತಿ–ಭಾವದಿಂದ ಭಾನುವಾರ ಬಸವ ಜಯಂತಿ ಆಚರಿಸಲಾಯಿತು. ಈ ವೇಳೆ ಕೆ.ಆರ್.ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕೆ.ವಿ.ಮಲ್ಲೇಶ್, ನಗರಾಧ್ಯಕ್ಷ ಕೆ.ಟಿ.ಚಲುವೇಗೌಡ, ಮಾಜಿ ಮೇಯರ್ ಆರ್.ಲಿಂಗಪ್ಪ ಜೆಡಿಎಸ್ ಕಾರ್ಯಕರ್ತರಾದ ಆಯರಹಳ್ಳಿ ಪಿ.ವಿರೂಪಾಕ್ಷ, ಜನತಾನಗರ ಮಂಜುನಾಥ್ ಸೇರಿದಂತೆ ಇತರೆ ಜೆಡಿಎಸ್ ಮುಖಂಡರಿದ್ದರು.

## ಕೆಎಸ್‌ಆರ್‌ಟಿಸಿ ಡಿಪೋಗಳಲ್ಲಿ ಬಸವ ಜಯಂತಿ ಆಚರಣೆ



ಮೈಸೂರು, ಏ.23(ಎಸ್‌ಪಿಎನ್)– ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ಕಚೇರಿ, ಬನ್ನಿಮಂಟಪ ಘಟಕ ಸೇರಿದಂತೆ ಇತರೆ ಡಿಪೋದಲ್ಲಿ ಸರಳವಾಗಿ ಬಸವ ಜಯಂತಿಯನ್ನು ಪ್ರಭಾರ ವಿಭಾಗೀಯ ನಿಯಂತ್ರಣಾಧಿಕಾರಿ ಮರಿಗೌಡ ನೇತೃತ್ವದಲ್ಲಿ ಭಾನುವಾರ ಆಚರಿಸಲಾಯಿತು. ಮೈಸೂರಿನ ಬನ್ನಿಮಂಟಪದಲ್ಲಿ ಕೆಎಸ್‌ಆರ್‌ಟಿಸಿ ವೀರಶೈವ–ಲಿಂಗಾಯತ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಡಿಪೋ 1 ಮತ್ತು 3, ವಿಭಾಗೀಯ ಕಾರ್ಯಾಗಾರ, ವಿಭಾಗೀಯ ಕಚೇರಿ, ಕುವೆಂಪುನಗರ ಸಾತಗಳ್ಳಿ. ವಿಜಯನಗರ, ಹೆಚ್.ಡಿ.ಕೋಟೆ, ಹುಣಸೂರು, ಕೆ.ಆರ್.ನಗರ, ಪಿರಿಯಾಪಟ್ಟಣ ಘಟಕಗಳಲ್ಲಿ ಆಯೋಜಿಸಿದ್ದ ಬಸವೇಶ್ವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಮತ್ತು ದಾಸೋಹ ವಿತರಣೆ ಮಾಡಲಾಯಿತು.

ಈ ವೇಳೆ ಯಾಂತ್ರಿಕ ಅಭಿಯಂತರರು ಚಂದ್ರಪ್ಪ ಕಾರ್ಮಿಕ ಕಲ್ಯಾಣಾಧಿಕಾರಿ ಪುಟ್ಟೇಗೌಡ, ಭದ್ರತಾ ಜಾಗೃತ ಅಧಿಕಾರಿ ರವೀಂದ್ರ ಘಟಕ ವ್ಯವಸ್ಥಾಪಕ ಮಹದೇವಪ್ರಸಾದ್, ಘಟಕ–3ರ ವ್ಯವಸ್ಥಾಪಕ ವಿನಯ್, ಸಂಘದ ಪದಾಧಿಕಾರಿಗಳಾದ ಶಿವನಂದ ದೇಸಾಯಿ, ನಾಗಲೀಲಾ, ಮಲ್ಲಿಕಾರ್ಜುನ ಬಳಿಗಾರ್, ಅಭಿರೀಶ್, ಪ್ರಮೀಣ್, ಸುರೇಶ್, ಶಂಕರಪ್ಪ, ಕೆ.ಪಿ.ಮಾದಪ್ಪ, ನಾಗರಾಜ್ ಕಲ್ಲಹಳ್ಳಿ, ಶ್ರೀಕಾಂತ್, ಲೋಕೇಶ್, ಶಮಂತ್ ಇದ್ದರು.

### ಕೀರ್ತನ್ ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ.23–ಮೈಸೂರಿನ ಕುವೆಂಪುನಗರದ ಬಿಜಿಎಸ್ ಕಾಲೇಜಿನ ವಿದ್ಯಾರ್ಥಿ ಎ.ವಿ.ಕೀರ್ತನ್ ಈ ಬಾರಿಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 579 ಅಂಕ (ಶೇ.96.5) ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈತ ಮೈಸೂರಿನ ವಿಜಯನಗರ ನಿವಾಸಿ ಮಾಜಿ ಸೈನಿಕ ಅಪಟ್ಟೀರ ಎಸ್.ವಿಠಲ ಮತ್ತು ಶ್ರೀಮತಿ ರೂಪಾ ದಂಪತಿ ಪುತ್ರ, ಗಣಿತ–100, ಭೌತಶಾಸ್ತ್ರ–99, ರಸಾಯನಶಾಸ್ತ್ರ–96, ಕಂಪ್ಯೂಟರ್ ಸೈನ್ಸ್–99, ಕನ್ನಡ–95 ಮತ್ತು ಇಂಗ್ಲಿಷ್‌ನಲ್ಲಿ 90 ಅಂಕ ಪಡೆದು ಕೀರ್ತನ್ ಈ ಸಾಧನೆ ಮಾಡಿದ್ದಾರೆ.

### ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ.23– ಮೈಸೂರಿನ ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಕಾಲೇಜಿನ ವಿದ್ಯಾರ್ಥಿ ದರ್ಶನ್, ದ್ವಿತೀಯ ಪಿಯು(ವಿಜ್ಞಾನ ವಿಭಾಗ) ಪರೀಕ್ಷೆಯಲ್ಲಿ 600ಕ್ಕೆ 577(ಶೇ.96.16) ಅಂಕಗಳೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ ಈತ ಬಿ.ಎಂ.ಶ್ರೀನಗರದ ಶಿವು ಹಾಗೂ ಅನಿತಾ ದಂಪತಿ ಪುತ್ರ

### ಐಶ್ವರ್ಯಗೆ ಶೇ.94 ಅಂಕ



ಮೈಸೂರು, ಏ.23– ಮೈಸೂರಿನ ಬೇಸ್ ಪದವಿಪೂರ್ವ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಜಿ.ಎಂ.ಐಶ್ವರ್ಯ, 600ಕ್ಕೆ 565(ಶೇ.94.16) ಅಂಕ ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಈಕೆ ವಿಜಯನಗರದ ದಿ. ಎನ್.ಆರ್.ಗಿರೀಶ್ ಹಾಗೂ ಕೆ.ಶುಭಾ ದಂಪತಿ ಪುತ್ರಿ

# ಅಭಿವೃದ್ಧಿ ದೃಷ್ಟಿಯಿಂದ ಎನ್‌ಆರ್ ಕ್ಷೇತ್ರದಲ್ಲಿ ಜನ ಬಿಜೆಪಿ ಬೆಂಬಲಿಸಲಿದ್ದಾರೆ

### ಬಿಜೆಪಿ ಅಭ್ಯರ್ಥಿ ಸಂದೇಶ್ ಸ್ವಾಮಿ ವಿಶ್ವಾಸ

ಮೈಸೂರು, ಏ.23(ಎಸ್‌ಬಿಡಿ)– ನರಸಿಂಹರಾಜ(ಎನ್‌ಆರ್) ವಿಧಾನಸಭಾ ಕ್ಷೇತ್ರದ ಜನ ಬದಲಾವಣೆ ಬಯಸಿದ್ದು, ಅಭಿವೃದ್ಧಿ ದೃಷ್ಟಿಯಿಂದ ಈ ಬಾರಿ ಖಂಡಿತವಾಗಿ ಬಿಜೆಪಿಗೆ ಆಶೀರ್ವದಿಸಲಿದ್ದಾರೆ ಎಂದು ಪಕ್ಷದ ಅಭ್ಯರ್ಥಿ ಸಂದೇಶ್ ಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.



ಮೈಸೂರಿನ ಆರ್‌ಟಿಓ ಬಳಿಯ ಬಿಜೆಪಿ ವಿಭಾಗೀಯ ಮಾಧ್ಯಮ ಕೇಂದ್ರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ 224 ಕ್ಷೇತ್ರಗಳಲ್ಲಿ ನರಸಿಂಹರಾಜ ಕ್ಷೇತ್ರ ಅಭಿವೃದ್ಧಿಯಲ್ಲಿ ಅತ್ಯಂತ ಹಿಂದುಳಿದಿದೆ. ಅಜೀಜ್ ಸೇಠ್ ಅವರು 6 ಬಾರಿ ಅವರ ಪುತ್ರ ತನ್ವೀರ್ ಸೇಠ್ 5 ಬಾರಿ ಶಾಸಕರಾಗಿದ್ದರು. ಇಲ್ಲಿನ ಜನ ಒಂದೇ ಕುಟುಂಬಕ್ಕೆ ಆಶೀರ್ವದಿಸಿ ಸುದೀರ್ಘ ಅವಕಾಶ ನೀಡಿದ್ದರೂ ಅಭಿವೃದ್ಧಿ ಕೆಲಸ ಮಾಡಿಲ್ಲ ಎಂದು ಆರೋಪಿಸಿದರು.

ಕ್ಷೇತ್ರದಲ್ಲಿ ಮೂಲ ಸೌಕರ್ಯವಿಲ್ಲ. ಗಲಾಟೆ ಗದ್ದಲದಿಂದ ಜನರಿಗೆ ನೆಮ್ಮದಿ ಹಾಳಾಗಿದೆ. ಸುಸಜ್ಜಿತ ಆಸ್ಪತ್ರೆಗಳಿಲ್ಲ, ಉದ್ಯೋಗ ಕಲ್ಪಿಸುವ ಕಾರ್ಖಾನೆಗಳಿಲ್ಲ. ಕಾಲೇಜಿಲ್ಲದ ಕಾರಣ ಎಷ್ಟೋ ಹೆಣ್ಣು ಮಕ್ಕಳು ಶಿಕ್ಷಣವನ್ನೇ ಮೊಟಕುಗೊಳಿಸಿದ್ದಾರೆ. ಸುಮಾರು 15 ರೆವಿನ್ಯೂ ಬಡಾವಣೆಗಳಿದ್ದು, ಕ್ಷೇತ್ರದ ಶೇ.60ಕ್ಕೂ ಹೆಚ್ಚು ಜನ ಸೂರಿಲ್ಲದೆ ಜೋಪಡಿಯಲ್ಲಿ ಬದುಕುತ್ತಿದ್ದಾರೆ. ಹಾಲಿ ಶಾಸಕರು 5 ವರ್ಷದಲ್ಲಿ ಕೊನೆಯ 6 ತಿಂಗಳು ಮಾತ್ರ ಜನರಿಗೆ ದರ್ಶನ ನೀಡುತ್ತಾರೆ. ಅವರ ಮೇಲೆ ಹಲ್ಲೆ ನಡೆದ ನಂತರ ಭೇಟಿಗೆ ಮುಕ್ತ ಅವಕಾಶವೂ ಇಲ್ಲವಾಗಿದೆ. ಅವರು ಈವರೆಗೆ ಜನರ ಬಳಿ ಹೋಗಿ ವೈಯಕ್ತಿಕವಾಗಿ ಮತ ಯಾಚಿಸಿಲ್ಲ. ಆದರೂ ಜನ ಅಭಿವೃದ್ಧಿ ಬಯಸಿ ಸತತವಾಗಿ 5 ಬಾರಿ ಗೆಲ್ಲಿಸಿದ್ದಾರೆ. ಆದರೆ ಅವರ ನಿರೀಕ್ಷೆ ಸಂಪೂರ್ಣ ಸುಳ್ಳಾಗಿದೆ ಎಂದರು.

ನಾನು ಗಾಯತ್ರಿಪುರಂ ವಾರ್ಡ್ ಕಾರ್ಪೊರೇಟರ್ ಆಗಿ, ಮೇಯರ್ ಆಗಿ ಸೇವೆ ಸಲ್ಲಿಸಿದ್ದೇನೆ. ಕುಡಿಯುವ ನೀರು, ರಸ್ತೆ, ಚರಂಡಿ, ಉದ್ಯಾನ, ಬೀದಿ ದೀಪ ಹೀಗೆ ಮೂಲ ಸೌಕರ್ಯಗಳ ಜೊತೆಗೆ ಅಭಿವೃದ್ಧಿಗಾಗಿ ಶ್ರಮಿಸಿದ್ದೇನೆ. ಹೀಗೆಯೇ ಇಡೀ ನರಸಿಂಹರಾಜ ಕ್ಷೇತ್ರದಲ್ಲಿ ಸುಧಾರಣೆ ತಂದು ಇತರೆ ಕ್ಷೇತ್ರಗಳಿಗೆ ಸರಿಸಮವಾಗಿ ಅಭಿವೃದ್ಧಿಗೊಳಿಸಬೇಕು ಎಂಬುದಷ್ಟೇ ನನ್ನ ಧ್ಯೇಯ. ಈ ಕ್ಷೇತ್ರದಲ್ಲಿ ಎಲ್ಲಾ ಧರ್ಮ, ಜಾತಿಯವರೂ ಇದ್ದಾರೆ. ಕಳೆದ ಚುನಾವಣೆಯಲ್ಲೂ ಜನ ಆಶೀರ್ವದಿಸಿ ಅಧಿಕ ಮತ ನೀಡಿದ್ದರು. ಇದೀಗ 2ನೇ ಬಾರಿ ಬಿಜೆಪಿ ಅವಕಾಶ ಮಾಡಿ ಕೊಟ್ಟಿದೆ ಜನರ ಪ್ರತಿಸ್ಪಂದನೆಯೂ ಉತ್ತಮವಾಗಿದೆ ಈ ಬಾರಿ ಅಧಿಕ ಮತಗಳೊಂದಿಗೆ ನನ್ನನ್ನು ಗೆಲ್ಲಿಸುತ್ತಾರೆಂಬ ವಿಶ್ವಾಸ ನನ್ನಲ್ಲಿದೆ ಎಂದು ತಿಳಿಸಿದರು.

ಬಿಜೆಪಿ ನಗರ ಕಾರ್ಯಾಧ್ಯಕ್ಷ ಹೆಚ್.ಜಿ.ಗಿರಿಧರ್ ಮಾತನಾಡಿ, ನರಸಿಂಹರಾಜ ಕ್ಷೇತ್ರದ ಶಾಸಕರು ಕುಂಟು ನೆಪ ಹೇಳಿಕೊಂಡು ಅಭಿವೃದ್ಧಿ ನಿರ್ಲಕ್ಷಿಸಿದರು. ಕೋವಿಡ್ ಸಮಯದಲ್ಲಿ ಜನರ ಸಂಕಷ್ಟದಲ್ಲಿ ನೆರವಾಗಲಿಲ್ಲ. ಆಗ ಅನಾರೋಗ್ಯದ ಕಾರಣ ನೀಡಿದ್ದರು. ಇದೇ ಕಾರಣ ನೀಡಿ ಈ ಬಾರಿ ಸ್ಪರ್ಧಿಸುವುದಿಲ್ಲ ಎಂದಿದ್ದರು. ಮತ್ತೆ ಇವರನ್ನೇ ಆಯ್ಕೆ ಮಾಡಿದರೆ 5 ವರ್ಷ ಇದೇ ಉತ್ತರ ನೀಡುತ್ತಾರೆ. ಅಭಿವೃದ್ಧಿ ಹಾಳು ಮಾಡಬೇಡಿ. ಎಷ್ಟು ವರ್ಷ ಒಂದೇ ಕುಟುಂಬಕ್ಕೆ ಅಧಿಕಾರ ನೀಡುತ್ತೀರಿ. ಅಭಿವೃದ್ಧಿಗಾಗಿ ಬಿಜೆಪಿ ಬೆಂಬಲಿಸುವಂತೆ ಮನವಿ ಮಾಡುತ್ತೇನೆ. 3ನೇ ಬಾರಿ ಸ್ಪರ್ಧಿಸುತ್ತಿರುವ ಸಂದೇಶ್ ಸ್ವಾಮಿ ಬಗ್ಗೆ ಜನರಲ್ಲಿ ಅನುಕಂಪ, ಪ್ರೀತಿ ಇದೆ. ಚಾಮರಾಜ, ಕೃಷ್ಣರಾಜ ಕ್ಷೇತ್ರದಂತೆ ಅಭಿವೃದ್ಧಿ ಬಯಸಿ ಬಿಜೆಪಿ ಬೆಂಬಲಿಸಲು ತೀರ್ಮಾನಿಸಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.


ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್ ಮಾತನಾಡಿ, ಹಿಂದುಳಿದ ವರ್ಗದ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ಬಿಜೆಪಿ ಮಾತ್ರ. ಬಿ.ಎಸ್. ಯಡಿಯೂರಪ್ಪನವರು ಕನಕ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸಲು ಘೋಷಿಸಿದರು. ಕನಕ ಭವನಗಳಿಗೆ ವಿಶೇಷ ಅನುದಾನ ನೀಡಿ ಸಮುದಾಯವನ್ನು ಮೇಲ್ಪಂಕ್ತಿಗೆ ತರುವ ಪ್ರಾಮಾಣಿಕ ಪ್ರಯತ್ನ ನಡೆಸಿದರು. ಹೀಗೆ ಎಲ್ಲಾ ಹಿಂದುಳಿದವ ಅಭಿವೃದ್ಧಿಗೆ ಬಿಜೆಪಿ ಶ್ರಮಿಸಿದೆ. ಈ ನಿಟ್ಟಿನಲ್ಲಿ ಜನ ಬಿಜೆಪಿ ಬೆಂಬಲಿಸಲಿದ್ದಾರೆ ಎಂದು ಹೇಳಿದರು.

ಬಿಜೆಪಿ ನರಸಿಂಹರಾಜ ಕ್ಷೇತ್ರದ ಅಧ್ಯಕ್ಷ ಭಾನು ಪ್ರಕಾಶ್ ಮಾತನಾಡಿ, 55 ವರ್ಷದಿಂದ ಒಂದೇ ಕುಟುಂಬ ಆಡಳಿತ ನಡೆಸಿದ್ದು, ಕ್ಷೇತ್ರದಲ್ಲಿ ನೂರಾರು ಸಮಸ್ಯೆಗಳಿವೆ. ಆದರೆ ಈ ಬಾರಿ ಬದಲಾವಣೆ ಬಯಸಿದ್ದಾರೆ. ಖಂಡಿತವಾಗಿ ಬಿಜೆಪಿ ಗೆದ್ದೇ ಗೆಲ್ಲುತ್ತದೆ. ಅಲ್ಪ ಸಂಖ್ಯಾತರ ಮೋರ್ಚಾ ಉತ್ತಮ ಸಂಘಟನೆ ಮಾಡಿದೆ. ಈ ಬಾರಿ 15 ಸಾವಿರ ಮತದಾರರ ನೋಂದಣಿಯಾಗಿದೆ. ಮುಡಾ ಹಾಗೂ ಸಂಸದರ ಅನುದಾನ ಸೇರಿ 2 ಕೋಟಿ ರೂ.ಗೂ ಹೆಚ್ಚು ಮೊತ್ತದ ಕಾಮಗಾರಿಗಳು ಅಲ್ಪಸಂಖ್ಯಾತರ ವಾರ್ಡ್‌ಗಳಲ್ಲಿ ನಡೆದಿದೆ. ಈ ಬಾರಿ ಎಲ್ಲಾ ಧರ್ಮ, ಜಾತಿಯವರೂ ಬಿಜೆಪಿಗೆ ಮತ ನೀಡಿ ಗೆಲ್ಲಿಸಲಿದ್ದಾರೆ ಎಂದು ಅಭಿಪ್ರಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ವಕ್ತಾರ ವಸಂತಕುಮಾರ್, ನಗರ ಮಾಧ್ಯಮ ವಕ್ತಾರ ಮಹೇಶ್ ರಾಜೇ ಅರಸ್, ಕೇಬಲ್ ಮಹೇಶ್ ಮತ್ತಿತರರಿದ್ದರು.




ಕೆ.ಆರ್.ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕೆ.ವಿ.ಮಲ್ಲೇಶ್ ಹಾಗೂ ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವಿಸಿದರು. ಈ ವೇಳೆ ಮಾಜಿ ಮೇಯರ್ ಆರ್.ಲಿಂಗಪ್ಪ, ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚಲುವೇಗೌಡ, ಮುಖಂಡ ರಾಮು ಇನ್ನಿತರರು ಇದ್ದರು.




ವಿಧಾನ ಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ ಹಾಗೂ ಮಾಜಿ ಸಂಸದ ಕಾಗಲವಾಡಿ ಶಿವಣ್ಣ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪುಷ್ಪನಮನ ಸಲ್ಲಿಸಿದರು.




ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಂದೇಶ್ ಸ್ವಾಮಿ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಈ ವೇಳೆ ಮುಖಂಡರಾದ ಸು.ಮುರುಳಿ, ಅಶೋಕ್, ಮುಡಾ ಸದಸ್ಯೆ ಲಕ್ಷ್ಮೀದೇವಿ ಹಾಗೂ ಇತರರಿದ್ದರು.




ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕವೀಶ್‌ಗೌಡ ಬಸವೇಶ್ವರರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು.




ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಬಸವೇಶ್ವರರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು. ಈ ವೇಳೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗದ ಜಾಗೃತ ವೇದಿಕೆಯ ಅಧ್ಯಕ್ಷ ಕೆ.ಎಸ್.ಶಿವರಾಂ, ಮುಖಂಡ ಕುಮಾರ್ ಹಾಗೂ ಇನ್ನಿತರರು ಇದ್ದರು.



ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ. ಪುಷ್ಪಾ ಅಮರನಾಥ್ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಈ ವೇಳೆ ಮುಖಂಡ ಹುಯಿಲಾಳು ಕುಮಾರ್, ಕಾಂಗ್ರೆಸ್ ಮಾಧ್ಯಮ ವಕ್ತಾರ ಮಹೇಶ್ ಇದ್ದರು.



ಚಾಮರಾಜ ಕ್ಷೇತ್ರದ ಶಾಸಕ, ಬಿಜೆಪಿ ಅಭ್ಯರ್ಥಿ ಎಲ್.ನಾಗೇಂದ್ರ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.



ಬಸವ ಜಯಂತಿ ಅಂಗವಾಗಿ ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ಸಮಿತಿಯ ವತಿಯಿಂದ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ನಗರ ಅಧ್ಯಕ್ಷ ಎನ್.ಆರ್.ನಾಗೇಶ್. ರಾಜ್ಯ ಒಬಿಸಿ ಘಟಕದ ಮೈಸೂರು ಚಾಮರಾಜನಗರ ಉಸ್ತುವಾರಿ ಚಂದ್ರು ವಿಶ್ವಕರ್ಮ, ರಾಜ್ಯ ಕಾರ್ಯದರ್ಶಿ ಮೋಗಣಚಾರಿ, ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ಸಿದ್ದಪ್ಪಾಜಿ ವಿಶ್ವಕರ್ಮ, ಸಾಹುಕಾರ್ ಚಿನ್ನಯ್ಯ ಬ್ಲಾಕ್ ಅಧ್ಯಕ್ಷ ಮಹೇಂದ್ರ ಕಾಗಿನೆಲೆ, ನಗರ ಸಮಿತಿಯ ದಿವಾಕರ್, ಕಿರಣ್ ಕುಮಾರ್, ಸತೀಶ್, ಮಹೇಶ್, ಚಂದ್ರಶೇಖರ್, ರವಿಕುಮಾರ್, ಪರಮೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



**ಮೈಸೂರು ಮಿತ್ರ**
**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

# ವರುಣ ಕ್ಷೇತ್ರಕ್ಕೆ ಸಚಿವ ಸೋಮಣ್ಣ ಕೊಡುಗೆ ಶೂನ್ಯ

## ತಂದೆ, ವರುಣ 'ಕೈ' ಅಭ್ಯರ್ಥಿ ಸಿದ್ದರಾಮಯ್ಯ ಪರ ಡಾ.ಯತೀಂದ್ರ ಮತಯಾಚನೆ



ನಂಜನಗೂಡು, ಏ.23– ವರುಣ ಕ್ಷೇತ್ರಕ್ಕೆ ಸಚಿವ ಸೋಮಣ್ಣ ಕೊಡುಗೆ ಶೂನ್ಯ. ವಸತಿ ಸಚಿವರಾಗಿ ರಾಜ್ಯದ ಜನರಿಗೆ ಒಂದು ಮನೆಯನ್ನೂ ಮಂಜೂರು ಮಾಡಿಲ್ಲ. ರಾಜ್ಯದ ಮುಖ್ಯಮಂತ್ರಿಯಾಗಿ 224 ಕ್ಷೇತ್ರಗಳಿಗೂ ಕೊಡುಗೆ ನೀಡಿರುವ ಸಿದ್ದರಾಮಯ್ಯನವರು ಅಭೂತಪೂರ್ವ ಗೆಲುವು ಸಾಧಿಸಲಿದ್ದಾರೆ ಎಂದು ಶಾಸಕ ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ತಾಲೂಕಿನ ಹದಿನಾರು, ಹದಿನಾರುಮೋಳೆ, ಅಲತ್ತೂರುಹುಂಡಿ ಗ್ರಾಮಗಳಲ್ಲಿ ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ತಮ್ಮ ತಂದೆ ಸಿದ್ದರಾಮಯ್ಯ ಪರ ಮತಯಾಚಿಸಿ ಮಾತನಾಡಿದ ಅವರು, ಸಚಿವ ವಿ.ಸೋಮಣ್ಣ ಕ್ಷೇತ್ರಕ್ಕಾಗಲೀ, ಜಿಲ್ಲೆಗಾಗಲೀ ಯಾವುದೇ ಕೊಡುಗೆ ನೀಡಿಲ್ಲ. ವಸತಿ ಸಚಿವರಾಗಿ ಬಡವರಿಗೆ 1 ಮನೆಯನ್ನೂ ನೀಡಿಲ್ಲ. ಕೊನೆ ಕ್ಷಣದಲ್ಲಿ ಬಿಡುಗಡೆಗೊಳಿಸಿದ 2 ಸಾವಿರ ಮನೆಗಳು ಪೇಪರ್ ಮೇಲಿದೆ ಹೊರತು ಕಾರ್ಯಗತವಾಗಿಲ್ಲ. ಕಾಂಗ್ರೆಸ್ ಸರ್ಕಾರದಲ್ಲಿ ಮಂಜೂರಾಗಿದ್ದ 8 ಸಾವಿರ ಮನೆಗಳಿಗೆ ಇನ್ನೂ ಹಣ ಬಿಡುಗಡೆಯಾಗಿಲ್ಲ ಎಂದು ಆರೋಪಿಸಿದರು.

ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಬಡವರಿಗೆ, ದೀನ ದಲಿತರಿಗೆ ಕೃಷಿ ಕಾರ್ಮಿಕರು ಸೇರಿದಂತೆ ರಾಜ್ಯದ ಎಲ್ಲಾ ವರ್ಗದವರಿಗೆ ಅನೇಕ ಯೋಜನೆಗಳನ್ನು ಜಾರಿಗೊಳಿಸಿ ಭಾಗ್ಯಗಳ ಸರದಾರ ಎನಿಸಿಕೊಂಡಿದ್ದಾರೆ. ಜೊತೆಗೆ ಎಲ್ಲಾ ಕ್ಷೇತ್ರಗಳಿಗೂ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ವರುಣಾ ಕ್ಷೇತ್ರಕ್ಕೆ ಅವರ ಕೊಡುಗೆ ಅಪಾರ. ಹೀಗಾಗಿ ಕ್ಷೇತ್ರದ ಜನತೆ ಕಾಂಗ್ರೆಸ್‌ಗೆ ಮತ ನೀಡುವ ಮನಸ್ಥಿತಿಯಲ್ಲಿದ್ದಾರೆ. ಈ ಬಾರಿ ಸಿದ್ದರಾಮಯ್ಯ ನವರು ಭಾರೀ ಅಂತರದಲ್ಲಿ ಗೆಲುವು ಸಾಧಿಸುವುದು ಖಚಿತ. ಸೋಮಣ್ಣನವರನ್ನು ಜನತೆ ತಿರಸ್ಕರಿಸಿದ್ದು, ಅವರ ಸೋಲು ಖಚಿತ ಎಂದರು.

ಸಿದ್ದರಾಮಯ್ಯನವರು ನಾಮಪತ್ರ ಸಲ್ಲಿಸಲು ಮಾತ್ರ ಬರುತ್ತೇನೆ. ಆದರೆ ಪ್ರಚಾರಕ್ಕೆ ಬರುವುದಿಲ್ಲ ಎಂದಿದ್ದರು. ಆದರೆ ಇದೀಗ ಸೋಮಣ್ಣನವರ ಮೇಲಿನ ಭಯದಿಂದ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಓಡಾಡುತ್ತಿದ್ದಾರೆ ಎಂಬ ಸಂಸದ ಪ್ರತಾಪ್ ಸಿಂಹ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಶಾಸಕ ಡಾ.ಯತೀಂದ್ರ, ಪ್ರತಾಪ್ ಸಿಂಹ ಅವರ ಬಾಯಿ ಬೊಂಬಾಯಿ. ಅವರದು ಮೋಟರ್ ಮೌತ್. ಅವರು ಸುಳ್ಳು ಹೇಳುವುದರಲ್ಲಿ, ಅಪಪ್ರಚಾರ ಮಾಡುವುದರಲ್ಲಿ ನಿಸ್ಸೀಮರು ಎಂದ ಅವರು, ಸಿದ್ದರಾಮಯ್ಯ ಪ್ರತಿ ಚುನಾವಣೆಯಲ್ಲಿ 4 ದಿನ ಮತಪ್ರಚಾರ ನಡೆಸುತ್ತಿದ್ದರು. ಈ ಬಾರಿ ನಾಮಪತ್ರ ಸಲ್ಲಿಸಿದ ಬಳಿಕ 1 ದಿನ ಮಾತ್ರ ಪ್ರಚಾರ ನಡೆಸಿದ್ದಾರೆ. ನಾವು ಇನ್ನೂ 3 ದಿನ ಸಮಯ ನೀಡುವಂತೆ ಕೇಳಿದರೂ ಅವರು 2 ದಿನ ಮಾತ್ರ ಬರುವುದಾಗಿ ತಿಳಿಸಿದ್ದಾರೆ ಎಂದರು.

ವೀರಶೈವ ಮುಖಂಡ ಗುರುಪಾದಸ್ವಾಮಿ ಮಾತನಾಡಿ, ಬಿಜೆಪಿಗರಿಗೆ ವಿ.ಸೋಮಣ್ಣ ವೀರಶೈವ ಲಿಂಗಾಯತರಾದರೆ, ಕ್ಷೇತ್ರದಲ್ಲಿ ನಮಗೆ ಯತೀಂದ್ರ ಅವರೇ ವೀರಶೈವ ಮುಖಂಡರು. ಏಕೆಂದರೆ ಅವರು ಜಾತಿ ಭೇದವಿಲ್ಲದೇ ಕ್ಷೇತ್ರದ ವೀರಶೈವರ ಬೀದಿಗಳಲ್ಲಿ ಸಿಸಿ ರಸ್ತೆ ನಿರ್ಮಿಸಿ ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಸಿದ್ದರಾಮಯ್ಯನವರು ಹದಿನಾರು ಗ್ರಾಮಕ್ಕೆ 75 ಕೋಟಿಗಳಷ್ಟು ಅಭಿವೃದ್ಧಿ ಕೆಲಸ ಮಾಡಿದ್ದಾರೆ ಎಂದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಮುಖಂಡರಾದ ಬಾಬು, ಜಗದೀಶ್, ಹದಿನಾರು ಗ್ರಾಪಂ ಅಧ್ಯಕ್ಷ ಅಭಿನಂದನ್, ಉಪಾಧ್ಯಕ್ಷೆ ಮಹದೇವಮ್ಮ, ಜಿಪಂ ಮಾಜಿ ಸದಸ್ಯರಾದ ಎಚ್.ಎನ್.ನಂಜನಪ್ಪ, ಗುರುಮಲ್ಲಪ್ಪ, ಪ್ರಭುಸ್ವಾಮಿ, ಶಿವಕುಮಾರ್, ಗ್ರಾಪಂ ಸದಸ್ಯರಾದ ನಾಗರಾಜು, ಜ್ಯೋತಿ, ಶೃತಿ, ರವಿಕುಮಾರ್, ಮಹದೇವಸ್ವಾಮಿ, ಸುಂದರ್, ನಾಗರಾಜನಾಯಕ, ಜವರಶೆಟ್ಟಿ, ರವಿ, ಗೋವಿಂದಶೆಟ್ಟಿ, ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಇದ್ದರು.

# ಜನಸೇವೆ ಮಾಡಲು ನನ್ನ ಪುತ್ರನಿಗೆ ಅವಕಾಶ ನೀಡಿ

## ಜಯಪ್ರಕಾಶ್ ಪರ ತಾಯಿ ಮಹದೇವಮ್ಮ ಮನವಿ



ಹೆಚ್.ಡಿ.ಕೋಟೆ, ಏ.23– ತಾಲೂಕಿನ ಜನತೆಯ ಸೇವೆ ಮಾಡಲು ನನ್ನ ಮಗ ಜಯಪ್ರಕಾಶ್ ಚಿಕ್ಕಣ್ಣ ಅವರಿಗೆ ಅವಕಾಶ ಮಾಡಿಕೊಡಿ ಎಂದು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಯಪ್ರಕಾಶ್ ಚಿಕ್ಕಣ್ಣ ಅವರ ತಾಯಿ ಮಹದೇವಮ್ಮ ಮನವಿ ಮಾಡಿದರು.

ತಾಲೂಕಿನ ವಿವಿಧ ಗ್ರಾಮಗಳಲ್ಲಿ ಮತಯಾಚಿಸಿ ಮಾತನಾಡಿದ ಅವರು, ಈ ಬಾರಿ ಜೆಡಿಎಸ್ ಅಧಿಕಾರಕ್ಕೆ ಬರುವುದು ಖಚಿತ. ಆದ್ದರಿಂದ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ನನ್ನ ಮಗ ಜಯಪ್ರಕಾಶ್ ಚಿಕ್ಕಣ್ಣ ಅವರನ್ನು ಆಶೀರ್ವದಿಸಿ ಕುಮಾರಸ್ವಾಮಿ ಅವರನ್ನು ಮತ್ತೊಮ್ಮೆ ಮುಖ್ಯಮಂತ್ರಿ ಮಾಡಲು ಶ್ರಮಿಸಬೇಕು. ಜೆಡಿಎಸ್ ಅಧಿಕಾರಕ್ಕೆ ಬಂದು ಕುಮಾರಸ್ವಾಮಿ ಮತ್ತೊಮ್ಮೆ ಮುಖ್ಯಮಂತ್ರಿಯಾದರೆ ಮಾತ್ರ ಕೋಟೆ ಕ್ಷೇತ್ರ ಇನ್ನು ಹೆಚ್ಚಿನ ಅಭಿವೃದ್ಧಿ ಕಾಣಲು ಸಾಧ್ಯ ಎಂದರು.

ಇದೇ ವೇಳೆ ಜೆಡಿಎಸ್ ಅಭ್ಯರ್ಥಿ ಜಯಪ್ರಕಾಶ್ ಪತ್ನಿ ಮಂಜುಳಾ ಹಾಗೂ ಸಹೋದರಿಯರಾದ ಸುಮ, ಮಂಜುಳಾ ಅವರ ಸಮ್ಮುಖದಲ್ಲಿ ಬಿಜೆಪಿ, ಕಾಂಗ್ರೆಸ್ ತೊರೆದು ಹಲವು ಮುಖಂಡರು ಜೆಡಿಎಸ್‌ಗೆ ಸೇರ್ಪಡೆಯಾದರು.

ಈ ವೇಳೆ ಗ್ರಾಪಂ ಸದಸ್ಯರಾದ ಸತ್ಯ, ಶಿವಣ್ಣ, ವೆಂಕಟಸ್ವಾಮಿ, ಕುಮಾರ್, ಚನ್ನನಾಯಕ, ವಿಜಯಕುಮಾರ್, ಶೇಖರ್, ಶಿವಪ್ಪ, ತಿಮ್ಮಪ್ಪ, ದೇವಮಣಿ, ಸೀತ, ನಂದಿನಿ, ಮುಖಂಡರಾದ ವೆಂಕಟೇಶ್, ಲಕ್ಷ್ಮಿ, ಅಂಕಪ್ಪ, ದಾಸ ಭೋವಿ, ಕಾರ್ಯಕರ್ತರು, ಮುಖಂಡರು ಹಾಜರಿದ್ದರು.



ಕಂಪಲಾಪುರ ಪಿಎಸಿಎಸ್ ಸಿಇಓ ಆಗಿ ಸೇವೆ ಸಲ್ಲಿಸಿ ನಿವೃತ್ತರಾದ ಪಿ.ವೈ.ಮಂಜುಳಾ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ಈ ವೇಳೆ ಅಧ್ಯಕ್ಷೆ ಸಣ್ಣಮ್ಮ, ಉಪಾಧ್ಯಕ್ಷ ರಾಜೇಗೌಡ, ಸಿಇಓ ಕೆ.ಎನ್.ಹರ್ಷ, ನಿರ್ದೇಶಕರು, ಸಿಬ್ಬಂದಿ ಹಾಜರಿದ್ದರು.

# ಕರಳಪುರದಲ್ಲಿ ದರ್ಶನ್ ಧ್ರುವನಾರಾಯಣ್ ಮತಯಾಚನೆ



ನಂಜನಗೂಡು, ಏ.23– ಕ್ಷೇತ್ರದ ಜನರ ಬೆಂಬಲದಿಂದ ಸಂಸದರಾಗಿದ್ದ ನನ್ನ ತಂದೆ ಆರ್.ಧ್ರುವನಾರಾಯಣ್ ಅವರು ಚುನಾವಣೆಯಲ್ಲಿ ಕ್ಷೇತ್ರದಿಂದ ಸ್ಪರ್ಧಿಸಲು ಬಯಸಿದ್ದರು. ಆದರೆ ಅವರು ನಿಧನರಾಗಿದ್ದರಿಂದ ಪಕ್ಷದ ಕಾರ್ಯಕರ್ತರು, ಮುಖಂಡರ ಒತ್ತಾಯದ ಮೇರೆಗೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದೇನೆ. ನನಗೆ ಈ ಬಾರಿ ಹೆಚ್ಚು ಮತ ನೀಡಿ ಆಶೀರ್ವದಿಸಿ ಎಂದು ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ಮನವಿ ಮಾಡಿದರು.

ತಾಲೂಕಿನ ಕರಳಪುರದಲ್ಲಿ ಭಾನುವಾರ ಪ್ರಚಾರ ನಡೆಸಿ ಮಾತನಾಡಿದ ಅವರು, ತಂದೆ–ತಾಯಿ ಕಳೆದುಕೊಂಡು ನೋವಿನಲ್ಲಿದ್ದ ನನ್ನ ಕುಟುಂಬಕ್ಕೆ ಕ್ಷೇತ್ರದ ಜನತೆ ಸಾಂತ್ವನ ಹೇಳಿ, ಧೈರ್ಯ ತುಂಬಿದ್ದರಿಂದ ಚುನಾವಣೆ ಎದುರಿಸಲು ಶಕ್ತಿ ಬಂದಿದೆ. ಕ್ಷೇತ್ರದ ಜನರ ಒತ್ತಾಯದ ಮೇರೆಗೆ ಪಕ್ಷ ಟಿಕೆಟ್ ನೀಡಿದೆ. ನಾನು ಭೇಟಿ ನೀಡಿದ ಗ್ರಾಮಗಳಲ್ಲಿ ಜನ ನನ್ನನ್ನು ಆತ್ಮೀಯವಾಗಿ ಬರಮಾಡಿಕೊಂಡು ಬೆಂಬಲ ವ್ಯಕ್ತಪಡಿಸುತ್ತಿದ್ದಾರೆ. ತಂದೆಯಂತೆ ನಿಮ್ಮ ವಿಶ್ವಾಸ ಉಳಿಸಿಕೊಂಡು, ಅವರ ಹಾದಿಯಲ್ಲಿ ಸಾಗಿ ಕ್ಷೇತ್ರದ ಮನೆ ಮಗನಾಗಿ ನಿಮ್ಮ ಸಂಕಷ್ಟಗಳಿಗೆ ಸ್ಪಂದಿಸುತ್ತೇನೆ. ಹೀಗಾಗಿ ಚುನಾವಣೆಯಲ್ಲಿ ಆಶೀರ್ವಾದ ಮಾಡಬೇಕು ಎಂದು ಮನವಿ ಮಾಡಿದರು. ಇದೇ ವೇಳೆ ದೇವಿರಮ್ಮನಹಳ್ಳಿ, ಪಾಳ್ಯ, ಮಸಗೆ, ಏಚಗುಂಡ್ಲ, ಮುದ್ದಹಳ್ಳಿ, ಕೆರೆಹುಂಡಿ, ಕಳಲೆ, ಹೊಸಹಳ್ಳಿ ಗ್ರಾಮಗಳಲ್ಲಿ ಪ್ರಚಾರ ನಡೆಸಿದರು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಲೂಕು ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಶ್ರೀಕಂಠನಾಯಕ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ, ನಾಗರಾಜು, ಕಾರ್ಮಿಕ ಮುಖಂಡ ಗೋವಿಂದರಾಜು, ಅಶೋಕ್, ದೊರೆಸ್ವಾಮಿ ನಾಯ್ಕ, ವಿಜಯ್ ಕುಮಾರ್, ನಾಗರಾಜಯ್ಯ, ರಾಚಪ್ಪ, ಮಹೇಶ್, ಶಿವಣ್ಣ, ಜೆಸಿಬಿ ಮಹೇಶ್, ನಟರಾಜು, ಲಿಂಗಣ್ಣ, ಮಹದೇವಯ್ಯ ಉಪಸ್ಥಿತರಿದ್ದರು.

# ತಂದೆ ಸಾರಾ ಪರ ಪುತ್ರ ಡಾ.ಧನುಷ್ ಮತಯಾಚನೆ



ಭೇರ್ಯ, ಏ.23– ನನ್ನ ತಂದೆ ಮಾಡಿರುವ ಅಭಿವೃದ್ಧಿ ಕಾರ್ಯ ಹಾಗೂ ಜನಸೇವೆಯನ್ನು ಜನರಿಗೆ ತಿಳಿಸುವ ಮೂಲಕ ಮತಯಾಚಿಸುತ್ತಿರುವುದಾಗಿ ಶಾಸಕ ಸಾ.ರಾ. ಮಹೇಶ್ ಪುತ್ರ ಡಾ.ಧನುಷ್ ತಿಳಿಸಿದರು.

ಹೊಸ ಅಗ್ರಹಾರ ಗ್ರಾಮದಲ್ಲಿ ಶ್ರೀಪಟ್ಲದಮ್ಮ ಜಾತ್ರೆ ಹಿನ್ನೆಲೆಯಲ್ಲಿ ಪಟ್ಲದಮ್ಮ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಮತಯಾಚಿಸಿ ಮಾತನಾಡಿದ ಅವರು, ನಮ್ಮ ತಂದೆ, ಮಹೇಶ್ ಅವರು ಕ್ಷೇತ್ರದ ಸೂಕ್ಷ್ಮಾತಿಸೂಕ್ಷ್ಮ ಸಮಾಜಗಳಿಗೆ ಬೆನ್ನೆಲುಬಾಗಿ ನಿಂತಿದ್ದಾರೆ. ಅಲ್ಲದೇ ಸಮುದಾಯ ಭವನಗಳು, ವಿವಿಧ ದೇವಾಲಯಗಳ ಜೀರ್ಣೋದ್ಧಾರ ಸೇರಿದಂತೆ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡುವ ಮೂಲಕ ತಾಲೂಕಿನ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದರು.

ಯಾವುದೇ ಜಾತಿಭೇದವಿಲ್ಲದೇ ಕಳೆದ 19 ವರ್ಷಗಳಿಂದ ನಿರಂತರವಾಗಿ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಣೆ, ಶೈಕ್ಷಣಿಕವಾಗಿ ಹಿಂದುಳಿದವರಿಗೆ ನೆರವು ಸೇರಿದಂತೆ ಎಲ್ಲಾ ಸಮುದಾಯದವರಿಗೂ ಅನುದಾನ ನೀಡಿದ್ದಾರೆ. ತಮ್ಮ 15 ವರ್ಷಗಳ ಅಧಿಕಾರವಧಿಯಲ್ಲಿ ಸಾವಿರಾರು ಕೋಟಿ ಅನುದಾನ ತಂದಿದ್ದಾರೆ. ಈ ಭಾಗದ ರೈತರ ಜೀವನಾಡಿ ಚುಂಚನಕಟ್ಟೆ ಶ್ರೀರಾಮ ಕಾರ್ಖಾನೆಯನ್ನು ಪುನಾರಂಭಿಸಲು ಯಶಸ್ವಿಯಾಗಿದ್ದಾರೆ. ಹೀಗಾಗಿ ನಮ್ಮ ತಂದೆ, ಶಾಸಕ ಮಹೇಶ್ ಅವರನ್ನು ಅಧಿಕ ಮತಗಳ ಅಂತರದಿಂದ ಗೆಲ್ಲಿಸುವ ಮೂಲಕ ಮಾಜಿ ಸಿಎಂ ಕುಮಾರಸ್ವಾಮಿ ಅವರ ಕೈ ಬಲಪಡಿಸುವಂತೆ ಮನವಿ ಮಾಡಿದರು.

ಈ ವೇಳೆ ಗ್ರಾಪಂ ಮಾಜಿ ಸದಸ್ಯೆ ಜಯಮ್ಮ ಜೆಡಿಎಸ್ ಯುವ ಮುಖಂಡ ಚಂದು, ಸಾಗರ್, ಮಹೇಶ್, ರಾಜೇಗೌಡ, ವಾಲ್ಮೀಕಿ ಸಂಘದ ಅಧ್ಯಕ್ಷ ರಾಘವೇಂದ್ರ, ದೇವೇಂದ್ರ, ಪ್ರಭಾಕರ್, ಗಾರೆ ಸಂಘದ ಅಧ್ಯಕ್ಷ ನಾರಾಯಣ, ನಾಗರಾಜನಾಯಕ, ಶಶಿಧರ್, ಯಜಮಾನ್ ಮಧುಕುಮಾರ್ ಇತರರಿದ್ದರು.

# ಹನಗೋಡು ಹೋಬಳಿಯಲ್ಲಿ ಹೆಚ್‌ಪಿಎಂ ಬಿರುಸಿನ ಪ್ರಚಾರ




ಹುಣಸೂರು, ಏ.23– ತಾಲೂಕಿನ ಹನಗೋಡು ಹೋಬಳಿಯ ನೇರಳಕುಪ್ಪೆ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಹೆಚ್.ಪಿ.ಮಂಜುನಾಥ್ ಬಿರುಸಿನ ಪ್ರಚಾರ ನಡೆಸಿದರು.

ನಂತರ ಮಾತನಾಡಿದ ಅವರು, ಹನಗೋಡು ಹೋಬಳಿ ಜನತೆ ತಮಗೆ ಅಪಾರ ಬೆಂಬಲ ನೀಡಿದ್ದಾರೆ. 3 ಬಾರಿ ಶಾಸಕನಾಗಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ಜನಪರ ಕೆಲಸ ಮಾಡಿದ್ದೇನೆ. ಪಕ್ಷಭೇದ ಮಾಡದೇ ಎಲ್ಲರನ್ನೂ ಸಮಾನವಾಗಿ ಕಂಡಿದ್ದೇನೆ. ಕ್ಷೇತ್ರದಲ್ಲಿ ಯಾವುದೇ ಕೋಮುಗಲಭೆ ನಡೆಯದಂತೆ ನೋಡಿಕೊಂಡಿದ್ದೇನೆ. ಹೀಗಾಗಿ ನನ್ನ ಅಭಿವೃದ್ಧಿ ಕಾರ್ಯ ನೋಡಿ ಈ ಬಾರಿ ಅತ್ಯಧಿಕ ಮತಗಳಿಂದ ಮತ್ತೆ ಗೆಲ್ಲಿಸುವ ಮೂಲಕ ಮತ್ತೊಂದು ಬಾರಿ ಅವಕಾಶ ನೀಡಿದಲ್ಲಿ ಮಂತ್ರಿಯಾಗುವ ಅವಕಾಶವಿದ್ದು, ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸುತ್ತೇನೆ ಎಂದರು.

ಈ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂದ ಅವರು, ಪಕ್ಷ ತನ್ನ ಗ್ಯಾರಂಟಿ ಕಾರ್ಡ್‌ನಲ್ಲಿ ನೀಡಿರುವ ಎಲ್ಲಾ ಭರವಸೆಗಳನ್ನು ಈಡೇರಿಸಲಿದೆ ಎಂದರು.


ಇದೇ ವೇಳೆ ತಾಲೂಕಿನ ಕಾಮಗೌಡನಹಳ್ಳಿ, ಕಾಮಗೌಡನಹಳ್ಳಿ ಬೋರೆ, ಗೌಡಿಕೆರೆ, ಅಬ್ಬೂರು, ಸಿಂಡೇನಹಳ್ಳಿ, ನೇಗತ್ತೂರು, ಶೆಟ್ಟಳ್ಳಿ ಹಾಡಿ, ಶೆಟ್ಟಳ್ಳಿ ಗಿರಿಗನ ಪುನರ್ವಸತಿ ಕೇಂದ್ರ, ಅಬ್ಬೂರು, ಸಿಂಡೇನಹಳ್ಳಿ ಗೇಟ್, ನೇಗತ್ತೂರು, ಕಚುವಿನಹಳ್ಳಿ, ನೇರಳಕುಪ್ಪೆ, ನೇರಳಕುಪ್ಪೆ ಬಿ.ಹಾಡಿ, ಚಂದನಗಿರಿ, ಬಿಲ್ಲೇನಹೊಸಳ್ಳಿ, ಕಾಳಬೋಚನಹಳ್ಳಿ, ಉಡುವೇಪುರ, ಅಯ್ಯನಕೆರೆ ಹಾಡಿ, ಹೆಬ್ಬಾಳ, ಬಿ.ಆರ್.ಕಾವಲು, ಬೀರತಮ್ಮನಹಳ್ಳಿ ಮತ್ತಿತರ ಗ್ರಾಮಗಳಲ್ಲಿ ಪ್ರಚಾರ ನಡೆಸಿದರು.

ಕಾರ್ಯಕ್ರಮದಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ರವಿಗೌಡ, ನಂದೀಶ್, ಲೋಕೇಶ್, ಅಬ್ಬೂರು ಗ್ರಾಪಂ ಸದಸ್ಯ ಕುಮಾರ್, ಮುಖಂಡರಾದ ರಾಜಪ್ಪ, ಶಿವಣ್ಣ ಅಮಾಸೆಗೌಡ, ಶಂಕರ್, ಗಣೇಶ್, ಚಂದ್ರು ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು, ಕಾಂಗ್ರೆಸ್ ಕಾರ್ಯಕರ್ತರು ಇದ್ದರು.



ಹೆಳವರಹುಂಡಿ ಗ್ರಾಮದ ಜಿಪಂ ಮಾಜಿ ಸದಸ್ಯೆ ಮಮತಾ ಶಿವಪ್ರಸಾದ್ ಅವರ ನಿವಾಸಕ್ಕೆ ವರುಣಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಸಚಿವ ವಿ.ಸೋಮಣ್ಣ ಅವರ ಪತ್ನಿ ಶೈಲಜಾ ಸೋಮಣ್ಣ ಭೇಟಿ ನೀಡಿ ಚುನಾವಣೆಯಲ್ಲಿ ಸಹಕಾರ ನೀಡುವಂತೆ ಮನವಿ ಮಾಡಿದರು. ಈ ವೇಳೆ ಟಿಎಪಿಸಿಎಂಎಸ್ ನಿರ್ದೇಶಕ ಫ್ಯಾನ್ಸಿ ಮೋಹನ್, ಚಿರಂಜೀವಿ ಇದ್ದಾರೆ.

# ಕೆಂಡನಕೊಪ್ಪಲು ಗ್ರಾಮದಲ್ಲಿ ಮಹದೇವಪ್ಪ ಮತಯಾಚನೆ



ತಿ.ನರಸೀಪುರ, ಏ.23– ಮರಳು ಗಣಿಗಾರಿಕೆಯಲ್ಲಿ ಎಸ್ಸಿ, ಎಸ್ಟಿ ಸಮುದಾಯಕ್ಕೆ ಮೀಸಲಾತಿ ನೀಡಬೇಕೆಂದು ಸಚಿವನಾಗಿದ್ದ ವೇಳೆ ಆದೇಶಿಸಿದ್ದೆ. ಆದರೆ ದುರದೃಷ್ಟವಶಾತ್ ನಾನು ಮಾಡಿದ ಕೆಲಸ ನಿಮ್ಮ ಗಮನಕ್ಕೆ ಬಾರದೇ ಕಳೆದ ಚುನಾವಣೆಯಲ್ಲಿ ನನ್ನನ್ನು ಸೋಲಿಸಿ, ಬೇರೊಬ್ಬರನ್ನು ಗೆಲ್ಲಿಸಿದ್ದೀರಿ. ಆದರೆ ಆತನೇ ಮರಳು ಹೊಡೆಯುತ್ತಾ ನಿಂತುಬಿಟ್ಟ ಎಂದು ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಪರೋಕ್ಷವಾಗಿ ಶಾಸಕ ಎಂ.ಅಶ್ವಿನ್‌ಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದರು.

ಕ್ಷೇತ್ರ ವ್ಯಾಪ್ತಿಯ ಕೆಂಡನಕೊಪ್ಪಲು ಗ್ರಾಮದಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿ ಮಾತನಾಡಿದ ಅವರು, ನಾನು ಜನಪ್ರತಿನಿಧಿಯಾಗಿದ್ದ ವೇಳೆ ಬಾಂಡ್ಲಿಯಲ್ಲಿ ಮರಳು ತುಂಬಿ ಜೀವನ ಸಾಗಿಸುತ್ತಿದ್ದ ಕೂಲಿ ಕಾರ್ಮಿಕರಿಗೆ ತೊಂದರೆ ಕೊಟ್ಟಿರಲಿಲ್ಲ. ಬದಲಿಗೆ ನಾನೇ 18 ಸಾವಿರ ಕೂಲಿ ಕಾರ್ಮಿಕರಿದ್ದಾರೆ. ಅವರಿಗೆ ತೊಂದರೆಯಾಗಬಾರದೆಂದು ಸರ್ಕಾರಕ್ಕೆ ಪತ್ರ ಬರೆದು ಮನವಿ ಮಾಡಿದ್ದೆ. ಆದರೆ 2004ರಲ್ಲಿ ಜೆಡಿಎಸ್, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗ ದುಡ್ಡಿನ ಆಸೆಗೆ ಮೆಷಿನ್‌ಗಳನ್ನು ಬಳಸಿ ನದಿ ಬಗೆದು ಮರಳು ದಂಧೆ ಮಾಡಲು ಆರಂಭಿಸಿದಾಗ ಸಮಸ್ಯೆ ಉಂಟಾಯಿತು. ಆ ವೇಳೆ ಬಡ ಕೂಲಿ ಕಾರ್ಮಿಕರು ತೊಂದರೆಗೊಳಗಾದರು. ನದಿಯಲ್ಲಿ ಈ ಪ್ರಮಾಣದ ಮರಳು ತೆಗೆದರೆ ನದಿ ಹರಿಯುವ ದಿಕ್ಕೇ ಬದಲಾಗಿ, ಅಚ್ಚುಕಟ್ಟು ಪ್ರದೇಶ ಹಾಳಾಗಲಿದೆ ಎಂಬುದನ್ನು ಮನಗಂಡ ಹೈಕೋರ್ಟ್, ನದಿ ತೀರದಿಂದ ಮರಳು ತೆಗೆಯುವುದನ್ನು ನಿಷೇಧಿಸಿತ್ತು ಎಂದರು.

ಮುಂಬರುವ ದಿನಗಳಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ. ನಿಮಗೆ ನಾನು ಅನುಕೂಲ ಕಲ್ಪಿಸಿಕೊಡುತ್ತೇನೆ. ಉಳಿದಿರುವ ಬಾಕಿ ಕೆಲಸ ಮಾಡಿಕೊಡುತ್ತೇನೆ. ಮರಳು ತುಂಬಲು ಕಾನೂನು ದಾರಿ ಹುಡುಕುತ್ತೇನೆ ಎಂದು ಭರವಸೆ ನೀಡಿದರು.

ಈ ವೇಳೆ ಜಿಪಂ ಮಾಜಿ ಸದಸ್ಯೆ ಸುಧಾ ಮಹದೇವಯ್ಯ, ಕಾರ್ಗಳ್ಳಿ ಶಿವಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷೆ ಕಾಂತಮ್ಮ, ಕೆಪಿಸಿಸಿ ಪರಿಶಿಷ್ಟ ವಿಭಾಗದ ಜಿಲ್ಲಾ ಉಪಾಧ್ಯಕ್ಷ ಹೊನ್ನನಾಯಕ, ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಮೈಸೂರು ವಕೀಲರ ಸಂಘದ ಅಧ್ಯಕ್ಷ ರವಿ, ಮಹದೇವಸ್ವಾಮಿ, ಸೋಸಲೆ ಪಿಎಸಿಎಸ್ ಅಧ್ಯಕ್ಷ ಪರಶಿವಮೂರ್ತಿ, ಗ್ರಾಪಂ ಅಧ್ಯಕ್ಷ ಮಹೇಶ್, ಡೈರಿ ಕಾರ್ಯದರ್ಶಿ ನಿಂಗಯ್ಯ, ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನದ ಪಾರುಪತ್ತೇದಾರ್ ಎಂ.ಬಿ. ಸಾಗರ್, ಮಣಿಕಂಠ, ತಾಪಂ ಮಾಜಿ ಸದಸ್ಯ ನರಸಿಂಹ ಮಾದನಾಯಕ, ಮಾವಿನಹಳ್ಳಿ ಮಾದೇಶ್, ಬೂದಹಳ್ಳಿ ಸಿದ್ದರಾಜು, ಕೆಂಡನಕೊಪ್ಪಲು ಗ್ರಾಮದ ಯಜಮಾನ ರಾಮು, ರಂಗಪ್ಪ, ಸೀನಾ, ವೆಂಕಟೇಶ್, ಕೆಂಚಪ್ಪ, ಸುರೇಶ್, ಜವರಣ್ಣ, ಚಂದ್ರು ಮತ್ತಿತರರಿದ್ದರು.

### ಸಾವಿರಾರು ಕೋಟಿ ಅನುದಾನ

ನಾನು ಲೋಕೋಪಯೋಗಿ ಸಚಿವನಾಗಿದ್ದ ವೇಳೆ ಎಸ್‌ಸಿ, ಎಸ್‌ಟಿ ಕಾಲೋನಿಗಳು ಈ ರೀತಿ ಇರಲಿಲ್ಲ. ಇಡೀ ಕರ್ನಾಟಕದ ಯಾವುದೇ ರಸ್ತೆಗಳು ಮಣ್ಣಿನಿಂದ ಕೂಡಿರಬಾರದು ಎಂದು ನಾನು ಮತ್ತು ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯ ಸೇರಿ ಸಾವಿರಾರು ಕೋಟಿ ರೂ. ಅನುದಾನ ನೀಡಿದ್ದೇವು. ಹಾಗಾಗಿ ಅಭಿವೃದ್ಧಿಗಾಗಿ ಈ ಬಾರಿ ಎಲ್ಲರೂ ಒಟ್ಟಾಗಿ ಕಾಂಗ್ರೆಸ್ ಪಕ್ಷ ಬೆಂಬಲಿಸಿ ಎಂದು ಮನವಿ ಮಾಡಿದರು.

### ನೇಮಕ



ಮಲ್ಕುಂಡಿ, ಏ.23– ಕಲ್ಯಾಣ ಪ್ರಗತಿ ಪಕ್ಷದ ನಂಜನಗೂಡು ತಾಲೂಕು ಅಧ್ಯಕ್ಷರಾಗಿ ಹಗಿನವಾಳು ಗ್ರಾಮದ ತಾಪಂ ಮಾಜಿ ಸದಸ್ಯ ಸುರೇಶ್ ಅವರನ್ನು ನೇಮಕ ಮಾಡಿ ಪಕ್ಷದ ಸಂಸ್ಥಾಪಕ ಜನಾರ್ಧನರೆಡ್ಡಿ ಆದೇಶ ಹೊರಡಿಸಿದ್ದಾರೆ.



### ನೇಮಕ



ಜಯಪುರ, ಏ.23– ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರನ್ನಾಗಿ ಮಾವಿನಹಳ್ಳಿ ಗ್ರಾಮದ ಸಿ.ರವಿ ಅವರನ್ನು ಕೆಪಿಸಿಸಿ ಅಧ್ಯಕ್ಷರ ಸೂಚನೆ ಮೇರೆಗೆ ನೇಮಕ ಮಾಡಲಾಗಿದೆ ಎಂದು ಮೈಸೂರು ವಿಭಾಗದ ಪ್ರಚಾರ ಸಮಿತಿ ಅಧ್ಯಕ್ಷ ಡಾ.ಎಸ್.ಯತೀಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತುರುಗನೂರು ವ್ಯಾಪ್ತಿಯಲ್ಲಿ ರೇವಣ್ಣ ಮನೆ ಮನೆ ಪ್ರಚಾರ



ಬನ್ನೂರು, ಏ.23– ಬನ್ನೂರು ಹೋಬಳಿ ಯಡಹಳ್ಳಿ ಗ್ರಾಮದ ಶ್ರೀಸಿದ್ದೇಶ್ವರಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಮೂಲಕ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಎಂ.ರೇವಣ್ಣ ತುರುಗನೂರು ಜಿಪಂ ವ್ಯಾಪ್ತಿ ಮನೆ–ಮನೆಗೆ ತೆರಳಿ ಮತಯಾಚನೆಗೆ ಚಾಲನೆ ನೀಡಿದರು.

ದೇವಾಲಯದಲ್ಲಿ ನೆರೆದಿದ್ದ ನೂರಾರು ಕಾರ್ಯಕರ್ತರು, ಅಭಿಮಾನಿಗಳ ಸಮ್ಮುಖದಲ್ಲಿ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದ ರೇವಣ್ಣ, ಜನಸೇವೆಗಾಗಿ ರಾಜಕಾರಣಕ್ಕೆ ಬಂದಿದ್ದೇನೆ. ನಿಮ್ಮ ತಾಲೂಕಿನ ಮನೆ ಮಗನಾದ ನನಗೆ ಆಶೀರ್ವಾದ ಮಾಡಿ ಎಂದು ಕೈ ಮುಗಿದು ಜನತೆಯಲ್ಲಿ ಮನವಿ ಮಾಡಿದ ಅವರು, ನನ್ನ ಮೇಲಿನ ಅಭಿಮಾನಕ್ಕೆ ನಿರೀಕ್ಷೆಗೂ ಮೀರಿ ಜನ ಸೇರಿದ್ದೀರಿ. ಮೇ 10 ರಂದು ನಡೆಯುವ ಚುನಾವಣೆಯಲ್ಲಿ ಕಮಲದ ಗುರುತಿಗೆ ಮತ ನೀಡಿ ನನ್ನನ್ನು ಆಯ್ಕೆ ಮಾಡಿ ಎಂದು ಮನವಿ ಮಾಡಿದರು.

ಕ್ಷೇತ್ರಾಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್ ಮಾತನಾಡಿ, ಬನ್ನೂರು ಭಾಗದಲ್ಲಿ ಬಿಜೆಪಿ ಪಕ್ಷಕ್ಕೆ ಮತಗಳೇ ಇಲ್ಲ ಎಂದು ಅಪಪ್ರಚಾರ ಮಾಡುತ್ತಿರುವ ಜೆಡಿಎಸ್, ಕಾಂಗ್ರೆಸ್ ಪಕ್ಷಗಳಿಗೆ ಇಂದು ಇಲ್ಲಿ ಸೇರಿರುವ ಕಾರ್ಯಕರ್ತರು ಹಾಗೂ ಅಭಿಮಾನಿಗಳೇ ಉತ್ತರ. ಎರಡೂ ಪಕ್ಷದವರು ಬನ್ನೂರು ಪಟ್ಟಣದ ಜನರನ್ನು ಗುತ್ತಿಗೆ ಪಡೆದವರಂತೆ ಮಾತನಾಡುತ್ತಾರೆ. ಆದರೆ ಬನ್ನೂರು ಭಾಗದಲ್ಲಿ ಬಿಜೆಪಿ ಪಕ್ಷ ಸದೃಢವಾಗಿದೆ. ನಮ್ಮ ಪಕ್ಷಕ್ಕೆ ಈ ಬಾರಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳಿಗಿಂತ ಹೆಚ್ಚಿನ ಮತಗಳು ದೊರಕಲಿವೆ ಎಂದರು. ಇದೇ ವೇಳೆ ನೂರಾರು ಕಾರ್ಯಕರ್ತರು, ಅಭಿಮಾನಿಗಳೊಂದಿಗೆ ಡಾ. ರೇವಣ್ಣ ಮತ ಕ್ಷೇತ್ರ ವ್ಯಾಪ್ತಿಯ ಹನುಮನಾಳು, ಗೊರವನಹಳ್ಳಿ, ಚಾಮಲಾಪುರ, ಮಾದಿಗಹಳ್ಳಿ, ಬಿ.ಸೀಹಳ್ಳಿ, ಅರವಟ್ಟಿಗೆ ಕೊಪ್ಪಲು, ಮಾರಗೌಡನಹಳ್ಳಿ, ಹುಣಸಗಹಳ್ಳಿ, ಭುಗತಹಳ್ಳಿ, ಗಾಡಿ ಜೋಗಿ ಹುಂಡಿ, ಕೊಡಗಹಳ್ಳಿ ಹಾಗೂ ಬೀಡನಹಳ್ಳಿ ಗ್ರಾಮಗಳಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿದರು. ಮತಯಾಚನೆಗೆ ಹೋದ ಕಡೆಯಲ್ಲೆಲ್ಲಾ ರೇವಣ್ಣ ಅವರಿಗೆ ಅಭಿಮಾನಿಗಳು ಭಾರೀ ಗಾತ್ರದ ಹೂವಿನ ಹಾರ ಹಾಕಿ ಸಂಭ್ರಮಿಸಿದರು.

ಈ ವೇಳೆ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಕೊಡಗಹಳ್ಳಿ ಕುಮಾರ್, ಹನುಮನಾಳು ಸಿದ್ದೇಗೌಡ, ಡಾ.ಮಲ್ಲಿಕಾರ್ಜುನ ಸ್ವಾಮಿ, ಸಾಯಿ ಮೊಬೈಲ್ ಮಾದೇಶ್, ವಕೀಲ ಲಿಂಗಣ್ಣ, ರೈತ ಸಂಘದ ನಾರಾಯಣ್, ಕೃಷ್ಣೇಗೌಡ, ಕಾಳೇಗೌಡ, ಲೋಕೇಶ್, ಮಲ್ಲೇಶ್, ಹೇಮಂತ್, ಪುಟ್ಟೇಗೌಡ, ದಯಾನಂದ ಪಟೇಲ್, ಸಿ.ಬಿ.ಹುಂಡಿ ಸಿದ್ದು, ನುಗ್ಗೇನಹಳ್ಳಿ ಕೊಪ್ಪಲು ರಾಮಚಂದ್ರ, ವಾಟಾಳ್ ಪುಟ್ಟಸ್ವಾಮಿ, ಹುಣಸೂರು ಪುಟ್ಟಯ್ಯ, ಕೃಷ್ಣೇಗೌಡ, ಮಹದೇವು, ರಾಮೇಗೌಡ ಮತ್ತಿತರಿದ್ದರು.


ಮಾತೃಶ್ರೀ ಸೇವಾ ಸಮಿತಿ (ರಿ.), ಮೈಸೂರು
ವಿಜಯನಗರ 4ನೇ ಹಂತ
ಮಂಜುನಾಥ್. ಎಸ್
(Layout) ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಅಧ್ಯಕ್ಷರು, ಮಾತೃಶ್ರೀ ಸೇವಾ ಸಮಿತಿ(ರಿ),
ಸಮಾಜ ಸೇವಕರು,
ಉಪಾಧ್ಯಕ್ಷರು ಕನ್ನಡ ರಕ್ಷಣ ವೇದಿಕೆ
ಶುಭಕೋರುವವರು: ಮಾತೃಶ್ರೀ ಸೇವಾ ಸಮಿತಿ ಪದಾಧಿಕಾರಿಗಳು ಹಾಗೂ ಸ್ನೇಹಿತರು, ವಿಜಯನಗರ 4ನೇ ಹಂತ, ಮೈಸೂರು


ಮಹದೇವ್ KRM ಅವರಿಗೆ ಹುಟ್ಟು ಹಬ್ಬದ ಶುಭಾಶಯಗಳು
ಮಹದೇವ್ KRM
ಕುರುಬರಹಳ್ಳಿ
ಮುಖಂಡರು ಉದ್ಯಮಿ ಹಾಗೂ
ಸಮಾಜ ಸೇವಕರು
ಪ್ರಕಟಣೆ : ವೆಂಕಿ ಕುರುಬರಹಳ್ಳಿ, ಗಿರಿ